₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । **ಕಲಬುರಗಿ** । ಬೆಳಗಾವಿ **ಬುಧವಾರ 10.06.2026** **ಸಂಪುಟ:** 68 **ಸಂಚಿಕೆ:** 327 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ನೆಹರೂ ದಾಖಲೆ ಮುರಿದ ಮೋದಿ

ಪ್ರಧಾನಿ ನರೇಂದ್ರ ಮೋದಿ ಇಂದಿಗೆ (ಜೂನ್ 10) ಪ್ರಧಾನಿಯಾಗಿ ಸತತ 4,399 ದಿನಗಳನ್ನು ಪೂರೈಸಿದ್ದು, ಈ ಮೂಲಕ ಮೊದಲ ಸಾರ್ವತ್ರಿಕ ಚುನಾವಣೆಯ ನಂತರ ಪ್ರಧಾನಿಯಾಗಿ ಜವಾಹರಲಾಲ್ ನೆಹರು ಅವರ 4,398 ದಿನಗಳ ನಿರಂತರ ಆಡಳಿತದ ದಾಖಲೆಯನ್ನು ಹಿಂದಿಕ್ಕಿದ್ದಾರೆ. ಗುಜರಾತ್ ಸಿಎಂ ಆಗಿ 13 ವರ್ಷಗಳ ಆಡಳಿತ ಸೇರಿದರೆ ಚುನಾಯಿತ ಸರಕಾರದ ಮುಖ್ಯಸ್ಥರಾಗಿ 9,000 ದಿನಗಳನ್ನು ದಾಟಿದ ಹೆಗ್ಗಳಿಕೆಗೂ ಮೋದಿ ಪಾತ್ರರಾಗಿದ್ದಾರೆ.

ಚಳ್ಳಕೆರೆ ಕ್ಷೇತ್ರದ ಅಭಿವೃದ್ಧಿಯ ಹರಿಕಾರರು, ಜನಪರ ನಾಯಕರು, ಗೌರವಾನ್ವಿತ ಶಾಸಕರಾದ

ಶ್ರೀ ಟಿ. ರಘುಮೂರ್ತಿಯವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು

ಚಳ್ಳಕೆರೆ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ನಾಯಕ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಕ್ಷೇತ್ರದ ಕಡಬನಕಟ್ಟೆ ಗ್ರಾಮದ ಟಿ. ತಿಪ್ಪಯ್ಯ ಹಾಗೂ ಬಸಮ್ಮ ದಂಪತಿಯ ದ್ವಿತೀಯ ಪುತ್ರರಾಗಿ 1963ರ ಜೂನ್ 10ರಂದು ಜನಿಸಿದ ಟಿ. ರಘುಮೂರ್ತಿ ಅವರು, ದಾವಣಗೆರೆಯ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ವೃತ್ತಿಯಲ್ಲಿ ಕಾರ್ಯಪಾಲಕ ಅಭಿಯಂತರಾಗಿ ಸೇವೆ ಸಲ್ಲಿಸಿದ ಬಳಿಕ ಸ್ವಯಂ ನಿವೃತ್ತಿ ಪಡೆದು, ಕಾಂಗ್ರೆಸ್ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಶ್ರಮಿಸಿ, 2013ರಲ್ಲಿ ಮೊದಲ ಬಾರಿಗೆ ಚಳ್ಳಕೆರೆ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. 2018ರಲ್ಲಿ ಎರಡನೇ ಬಾರಿ ಹಾಗೂ 2023ರಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಮೂರನೇ ಬಾರಿಗೆ ಶಾಸಕರಾಗಿ ಜನಮನ್ನಣೆ ಪಡೆದರು.

ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಇತಿಹಾಸದಲ್ಲೇ ಒಂದೇ ಪಕ್ಷದಿಂದ ಸತತ ಮೂರು ಬಾರಿ ಗೆಲುವು ಸಾಧಿಸಿದ ಏಕೈಕ ಶಾಸಕರಾಗಿ ದಾಖಲೆ ನಿರ್ಮಿಸಿರುವ ಅವರು, ಪಕ್ಷನಿಷ್ಠೆ, ಸಂಘಟನಾ ಚಾತುರ್ಯ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಸರಳ-ಸಜ್ಜನ ಜನಪ್ರತಿನಿಧಿಯಾಗಿ ಅಭಿವೃದ್ಧಿಯ ಹರಿಕಾರರಾಗಿ ಗುರುತಿಸಿಕೊಂಡಿದ್ದಾರೆ.

2013-2018ರ ಅವಧಿಯಲ್ಲಿ ಶೈನಿಂಗ್ ಇಂಡಿಯಾ ಸಂಸ್ಥೆಯಿಂದ ಅತ್ಯುತ್ತಮ ಶಾಸಕ ಪ್ರಶಸ್ತಿ ಪಡೆದುಕೊಂಡ ರಾಜ್ಯದ 10 ಶಾಸಕರಲ್ಲಿ ಶ್ರೀ ರಘುಮೂರ್ತಿ ಅವರು ಒಬ್ಬರಾಗಿರುತ್ತಾರೆ.

ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ

ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ

ಕರ್ನಾಟಕ ಪಬ್ಲಿಕ್ ಸ್ಕೂಲ್ ತುರುವನೂರು & ಪರಶುರಾಮಪುರ

- ಚಳ್ಳಕೆರೆ ಸೈನ್ಸ್ ಸಿಟಿಗೆ ಪೂರಕವಾಗಿ ಐಐಎಸ್‌ಸಿ, ಇಸ್ರೋ, ಡಿಆರ್‌ಡಿಒ ಹಾಗೂ ಬಾರ್ಕ್ ಸಂಸ್ಥೆಗಳ ಸಮೀಪ ₹65 ಕೋಟಿ ವೆಚ್ಚದಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಮುಂದಾಳತ್ವ.
- ಯುವಕರ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗಾವಕಾಶಕ್ಕಾಗಿ ₹48.5 ಕೋಟಿ ವೆಚ್ಚದಲ್ಲಿ ಜಿಟಿಟಿಸಿ (GTTC) ಕೇಂದ್ರ ಸ್ಥಾಪನೆ.
- ಚಳ್ಳಕೆರೆ ಪ್ರಥಮ ದರ್ಜೆ ಕಾಲೇಜನ್ನು ಮೈಸೂರು ವಿಶ್ವವಿದ್ಯಾಲಯದ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.
- ತುರುವನೂರಿನಲ್ಲಿ ಪದವಿ ಕಾಲೇಜು ಹಾಗೂ ಪಿಯು ಕಾಲೇಜು ಸ್ಥಾಪನೆ.
- ಪರಶುರಾಂಪುರದಲ್ಲಿ ಕೆಪಿಎಸ್ ಶಾಲೆ, ಬಿಎಂಸಿಎಚ್‌ಎಸ್ ಹಾಗೂ ಹೆಗ್ಗೆರೆ ತಾಯಮ್ಮ ಶಾಲೆಗಳ ಅಭಿವೃದ್ಧಿ.
- ಕ್ಷೇತ್ರ ಮಾದರಿ ಶಾಲೆ, ಇಂದಿರಾ ಗಾಂಧಿ ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳ ನಿರ್ಮಾಣ.
- ಹೈಟೆಕ್ ಮಾದರಿಯ ಶೈಕ್ಷಣಿಕ ಕಟ್ಟಡಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ.
- ತುರುವನೂರು ಪದವಿ ಕಾಲೇಜನ್ನು ಬೇರೆಡೆಗೆ ಸ್ಥಳಾಂತರಿಸುವ ಪ್ರಸ್ತಾವನೆಗೆ ಪ್ರತಿಭಟನೆ ಹಾಗೂ ಪಾದಯಾತ್ರೆಯ ಮೂಲಕ ಕಾಲೇಜು ಉಳಿಸಿಕೊಳ್ಳುವಲ್ಲಿ ಯಶಸ್ಸು.

ಗ್ರಾಮೀಣಾಭಿವೃದ್ಧಿಗೆ ಕೊಡುಗೆಗಳು

181.45 MLD ಸಾಮರ್ಥ್ಯದ ಜಲ ಶುದ್ಧೀಕರಣ ಘಟಕ ಕ್ಲ್ಯಾರಿ ಫ್ಲೋಕ್ಯುಲೇಟರ್‌ಗಳು

ಜೆಕ್ ವೆಲ್ ಕಮ್ ಪಂಪ್ ಹೌಸ್ ಮುಂಭಾಗದ ದೃಶ್ಯ

- ₹2,280 ಕೋಟಿ ವೆಚ್ಚದ ತುಂಗಭದ್ರಾ ಹಿನ್ನೀರು ಯೋಜನೆ ಹಾಗೂ ಜಲ್ ಜೀವನ್ ಮಿಷನ್ ಯೋಜನೆಯಡಿ ಕ್ಷೇತ್ರದ ಎಲ್ಲಾ ಗ್ರಾಮಗಳು ಮತ್ತು ಮನೆಗಳಿಗೆ ಶಾಶ್ವತ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ.
- ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದ್ದು, ಶೇ.70-80ರಷ್ಟು ಸಿಸಿ ರಸ್ತೆಗಳ ನಿರ್ಮಾಣದ ಜೊತೆಗೆ 10,000 ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ಅಲೆಮಾರಿ ಸಮುದಾಯದ 3,502 ಮನೆಗಳು ನಿರ್ಮಾಣ ಹಂತದಲ್ಲಿವೆ.

ನಗರಾಭಿವೃದ್ಧಿಗೆ ಕೊಡುಗೆಗಳು

ಮಿನಿ ವಿಧಾನಸೌಧ

- ಚಳ್ಳಕೆರೆ ನಗರದಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ನಿಲ್ದಾಣಗಳ ನಿರ್ಮಾಣ.
- ಪಾವಗಡ-ಚಿತ್ರದುರ್ಗ ಹಾಗೂ ಬಳ್ಳಾರಿ-ಬೆಂಗಳೂರು ಮಾರ್ಗಗಳ 100 ಅಡಿ ರಸ್ತೆ ಅಗಲೀಕರಣ ಕಾಮಗಾರಿ ಪ್ರಗತಿಯಲ್ಲಿದೆ.
- ನಗರಸಭೆ ಕಟ್ಟಡ, ಮಿನಿ ವಿಧಾನಸೌಧ, ತಾಲೂಕು ಕಚೇರಿ, ಕೃಷಿ ಇಲಾಖೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಕಟ್ಟಡಗಳ ನಿರ್ಮಾಣ.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 1,170 ಸ್ಲಂ ಬೋರ್ಡ್ ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.
- ಜವಹರಲಾಲ್ ನೆಹರೂ ವೃತ್ತ ನವೀಕರಣ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ, ಬಾಬು ಜಗಜೀವನ ರಾಮ್ ಮತ್ತು ಕನಕ ವೃತ್ತಗಳ ನಿರ್ಮಾಣ.

ಸಮುದಾಯ ಭವನಗಳು

ವಾಲ್ಮೀಕಿ ಭವನ, ಚಳ್ಳಕೆರೆ



ಜೆಜೆ ಭವನ, ಚಳ್ಳಕೆರೆ

ಚಳ್ಳಕೆರೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2013 ರಿಂದ ಇಲ್ಲಿಯವರೆಗೆ ಚಳ್ಳಕೆರೆ ನಗರ ಹೋಬಳಿ ಕೇಂದ್ರ, ಪಂಚಾಯಿತಿ ಕೇಂದ್ರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿವಿದ ಜಾತಿ ಜನಾಂಗಕ್ಕೆ ಅವಶ್ಯಕತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ವಾಲ್ಮೀಕಿ ಭವನ, ಅಂಬೇಡ್ಕರ್ ಭವನ, ಕನಕ ಭವನ, ಶ್ರೀ.ಕೃಷ್ಣ ಭವನ, ಭೋವಿ ಭವನ, ಪದ್ಮಶಾಲಿ ಭವನ, ಈಡಿಗರ ಭವನ, ಸೇವಾಲಾಲ್ ಭವನ ಹೀಗೆ ಒಟ್ಟಾರೆಯಾಗಿ 366 ಭವನಗಳು ಮಂಜೂರಾಗಿದ್ದು ಸುಮಾರು 340 ಭವನಗಳು ಸಂಪೂರ್ಣಗೊಳಿಸಲಾಗಿದೆ.

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ

ಮೂರನೇ ಬಾರಿ ಶಾಸಕರಾಗಿ ಆಯ್ಕೆಯಾದ ಬಳಿಕ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ 29 ಜನಸಂಪರ್ಕ ಸಭೆಗಳನ್ನು ನಡೆಸಿ, ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನಭಾಗ್ಯ ಹಾಗೂ ಯುವನಿಧಿ ಸೇರಿದಂತೆ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೊತೆಗೆ, ಜನಪರ ಯೋಜನೆಗಳ ಮೂಲಕ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಬಲವರ್ಧನೆಗೂ ಪ್ರಮುಖ ಕೊಡುಗೆ ನೀಡಿದ್ದಾರೆ.

ಆರೋಗ್ಯ ಕ್ಷೇತ್ರಕ್ಕೆ ಕೊಡುಗೆಗಳು

ಮದರ್ & ಚೈಲ್ಡ್ ಆಸ್ಪತ್ರೆ

- ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ.
- ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೆಂಟರ್, ಐಸಿಯು ವಾರ್ಡ್ ಹಾಗೂ 130 ಹಾಸಿಗೆಗಳ ಎಲ್ಲಾ ವಾರ್ಡ್‌ಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ.
- ಚನ್ನಮ್ಮ ನಾಗತಿಹಳ್ಳಿ, ಮೀರಾಸಾಬಿಹಳ್ಳಿ, ಸಾಣೇಕೆರೆ (ಟಿ.ಎನ್. ಕೋಟೆ) ಹಾಗೂ ದೊಡ್ಡಚೆಲ್ಲೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ.
- ಪರಶುರಾಂಪುರ ಸಮುದಾಯ ಆರೋಗ್ಯ ಕೇಂದ್ರದ ನವೀಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿ. ವಿವಿಧ ಗ್ರಾಮಗಳಲ್ಲಿ ಎ.ಎನ್.ಎಂ. ಉಪಕೇಂದ್ರಗಳ ನಿರ್ಮಾಣದ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಮತ್ತಷ್ಟು ಬಲಪಡಿಸಲಾಗಿದೆ.

ಸಾಮಾಜಿಕ ಕಾರ್ಯಗಳು

ಶಾಸಕರ ಕಚೇರಿಯಲ್ಲಿ 2013 ರಿಂದ ಪ್ರತಿನಿತ್ಯ ಮಧ್ಯಾಹ್ನದ ಊಟದ ವ್ಯವಸ್ಥೆ

ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರಿಗೆ ಆಹಾರದ ಕಿಟ್ ವಿತರಣೆ

- ಬೃಹತ್ ಉದ್ಯೋಗ ಮೇಳ ಆಯೋಜಿಸಿ, 100ಕ್ಕೂ ಹೆಚ್ಚು ಖಾಸಗಿ ಕಂಪನಿಗಳ ಸಹಯೋಗದೊಂದಿಗೆ 10,000+ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ
- 2013ರಿಂದ ಹೊಸ ಮದ್ಯದಂಗಡಿಗಳಿಗೆ ಹೊಸ ಮದ್ಯದಂಗಡಿ - - ಗಳನ್ನು ಸ್ಥಾಪಿಸಲು ಅವಕಾಶ ನೀಡದೆ ಕ್ಷೇತ್ರವನ್ನು ಮದ್ಯಮುಕ್ತ ಮಾದರಿ ಕ್ಷೇತ್ರವಾಗಿದೆ .
- ಕ್ಷೇತ್ರದಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿದ್ದ ಮರಳು ಗಣಿಗಾರಿಕೆ ತಡೆಯೊಡ್ಡಲಾಗಿದೆ.

ಶುಭಕೋರುವವರು:

ಶ್ರೀ ರವಿಕುಮಾರ,
ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು,
ಶ್ರೀ ವಿನಾಯಕ ರೆಡಿಮಿಕ್ಸ್ ಕಾಂಕ್ರಿಟ್,
ಚಿತ್ರದುರ್ಗ

ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ಕೈಗೊಂಡ ಕಾರ್ಯಕ್ರಮಗಳು

- 2022ರ ಭಾರತ್ ಜೋಡೋ ಯಾತ್ರೆಯನ್ನು ಕ್ಷೇತ್ರದಲ್ಲಿ ಯಶಸ್ವಿಯಾಗಿ ಆಯೋಜಿಸಿ, ಚಳ್ಳಕೆರೆ ಕ್ಷೇತ್ರದಲ್ಲಿ 45 ಕಿ.ಮೀ ಹಾಗೂ ಹಿರಿಯೂರು-ಬಳ್ಳಾರಿ ಗಡಿವರೆಗೆ ಸುಮಾರು 150 ಕಿ.ಮೀ ಪಾದಯಾತ್ರೆಯಲ್ಲಿ ಭಾಗವಹಿಸಿದರು.
- 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೋದೂರಿನಿಂದ ತುರುವನೂರಿ-ನವರೆಗೆ ಪಾದಯಾತ್ರೆ ನಡೆಸಿದರು.
- ಎಐಸಿಸಿ ಮತ್ತು ಕೆಪಿಸಿಸಿ ನಿರ್ದೇಶನದಂತೆ ಪಕ್ಷದ ಎಲ್ಲಾ ಕಾರ್ಯಕ್ರಮಗಳನ್ನು ಕ್ಷೇತ್ರದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದರು.
- 2013-2023ರ ಅವಧಿಯಲ್ಲಿ ವಿವಿಧ ಚುನಾವಣೆಗಳಲ್ಲಿ ಪಕ್ಷ ಸಂಘಟನೆ ಬಲಪಡಿಸಿ, 78 ಸಾವಿರ ಡಿಜಿಟಲ್ ಸದಸ್ಯತ್ವ ನೋಂದಣಿ ಮೂಲಕ ಚಳ್ಳಕೆರೆ ಕ್ಷೇತ್ರವನ್ನು ರಾಜ್ಯದ ಅಗ್ರ 6 ಕ್ಷೇತ್ರಗಳಲ್ಲಿ ಒಂದಾಗಿಸಿದರು.
- ಬಳ್ಳಾರಿ ಲೋಕಸಭಾ, ಬಳ್ಳಾರಿ ಗ್ರಾಮೀಣ, ನಂಜನಗೂಡು, ಸಂಡೂರು, ದಾವಣಗೆರೆ ಹಾಗೂ ತೆಲಂಗಾಣದ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗ--ಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದರು.

ನೀರಾವರಿಗೆ ಕೊಡುಗೆಗಳು

ವಾಣಿವಿಲಾಸ ಸಾಗರ ಜಲಾಶಯಕ್ಕೆ ಬಾಗಿನ ಸಮರ್ಪಣೆ ಮಾಡಿದ ಕ್ಷಣ

ವೇದಾವತಿ ನದಿ ಬಾರೇಜ್ ನಿರ್ಮಾಣ , ಬೊಂಬೆರಹಳ್ಳಿ

- ಭದ್ರ ಮೇಲ್ದಂಡೆ ಯೋಜನೆಯ ಪರಿಷ್ಕೃತ ಡಿಪಿಆರ್ ಅಡಿಯಲ್ಲಿ ವಾಣಿವಿಳಾಸ ಸಾಗರದಿಂದ ಚಳ್ಳಕೆರೆ ಕ್ಷೇತ್ರದ ಕುಡಿಯುವ ನೀರಿಗಾಗಿ 0.25 ಟಿಎಂಸಿ ನೀರು ಮಂಜೂರು.
- ಭದ್ರಾ ಮೇಲ್ದಂಡೆ ಯೋಜನೆಯಡಿ ಪರಶುರಾಂಪುರದಲ್ಲಿ ಬ್ಯಾರೇಜ್ ಹಾಗೂ ಚೌಳೂರಿನಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ.
- ಗೋಸಿಕೆರೆ, ತೊರೆಬೀರನಹಳ್ಳಿ ಹಾಗೂ ಮತ್ತಸಮುದ್ರದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳಿಗೆ ಮಂಜೂರಾತಿ.
- ಸಣ್ಣ ನೀರಾವರಿ ಇಲಾಖೆಯಿಂದ ಬೊಂಬೇರಹಳ್ಳಿ, ಗೊರ್ಲತ್ತು ಹಾಗೂ ಮೋದೂರಿನಲ್ಲಿ ಬ್ಯಾರೇಜ್ ನಿರ್ಮಾಣ.
- ತುರುವನೂರು ಹೋಬಳಿಯ ಜಿನಗಿಹಳ್ಳಕ್ಕೆ ಪಾಪೇನಹಳ್ಳಿ-ಸುಲ್ತಾನಿಪುರ ಸಮೀಪ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ.
- ಗಂಗಾ ಕಲ್ಯಾಣ ಯೋಜನೆಯಡಿ ಕ್ಷೇತ್ರದಾದ್ಯಂತ ಕೊಳವೆಬಾವಿಗಳ ನಿರ್ಮಾಣ.
- ತುಂಗಭದ್ರಾ ಹಿನ್ನೀರು ಯೋಜನೆಯಡಿ ಎಲ್ಲಾ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ.
- ಸೂರನಹಳ್ಳಿ, ಹುಣಸೆಕಟ್ಟೆ, ಕೂನಬೇವು, ಹಾಯ್ಕಲ್ಲು , ಕರಿಯಮ್ಮನಹಟ್ಟಿ ಹಾಗೂ ಪೇಲಾರಹಟ್ಟಿ ಗ್ರಾಮಗಳ ಬಳಿ ಚೆಕ್ ಡ್ಯಾಂಗಳ ನಿರ್ಮಾಣ.

ಕ್ರೀಡಾ ಹಾಗು ಕೈಗಾರಿಕೆ ಕ್ಷೇತ್ರಕ್ಕೆ ಕೊಡುಗೆಗಳು



ಶಾಯಿ ಕಂಪನಿಯ ಬೃಹತ್ ಗಾರ್ಮೆಂಟ್ ಕಾರ್ಖಾನೆ



ನೂತನವಾಗಿ ನಿರ್ಮಾಣವಾಗಲಿರುವ ಕ್ರೀಡಾಂಗಣ ಸಂಕೀರ್ಣ

- 20 ವರ್ಷಗಳ ಅಕ್ರಮ ಚೆಕ್‌ಪೋಸ್ಟ್ ತೆರವುಗೊಳಿಸಿ ಸಾರ್ವಜನಿಕರ ಬೇಡಿಕೆ ಈಡೇರಿಸಲಾಗಿದೆ.
- ಬುಡ್ನಹಟ್ಟಿ ಸಮೀಪ 8,000 ಉದ್ಯೋಗ ಸೃಷ್ಟಿಸುವ ಬೃಹತ್ ಗಾರ್ಮೆಂಟ್ ಕಾರ್ಖಾನೆ ಸ್ಥಾಪನೆಗೆ ಚಾಲನೆ.
- ಕೆಎಸ್‌ಎಸ್‌ಐಡಿಸಿ ವತಿಯಿಂದ ಕೈಗಾರಿಕಾ ನಿವೇಶನ ಹಾಗೂ ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ಶೆಡ್‌ಗಳ ನಿರ್ಮಾಣ.
- ಪರಶುರಾಂಪುರ-ಚಳ್ಳಕೆರೆ ರಸ್ತೆಯಲ್ಲಿ 13 ಎಕರೆ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ.

ಸಮಾಚಾರ ಸಣ್ಣದಲ್ಲ

ಅಂಚೆ ಕಚೇರಿ: ಸಂದರ್ಶನಕ್ಕೆ ಆಹ್ವಾನ

ಯಾದಗಿರಿ: ಭಾರತೀಯ ಅಂಚೆ ಇಲಾಖೆ, ಯಾದಗಿರಿ ವಿಭಾಗದ ವತಿಯಿಂದ ಅಂಚೆ ಪ್ರತಿನಿಧಿಗಳ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸಂದರ್ಶನವು ಜೂ.19 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದ್ದು, ಹತ್ತನೇ ತರಗತಿ ಪಾಸಾದ ಅಭ್ಯರ್ಥಿಗಳು,18 ವರ್ಷ ಮೇಲ್ಪಟ್ಟವರು ಜನ್ಮದಿನಾಂಕ ಪ್ರಮಾಣ ಪತ್ರ, ಶೈಕ್ಷಣಿಕ ಪ್ರಮಾಣಪತ್ರಗಳ ನಕಲು ಪ್ರತಿ, ಇತ್ತೀಚಿನ ಮೂರು ಭಾವಚಿತ್ರ ಗಳೊಂದಿಗೆ,ಯಾದಗಿರಿ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಇರಲು ತಿಳಿಸಲಾಗಿದೆ.ಹೆಚ್ಚಿನ ಮಾಹಿತಿಗಾಗಿ ದೂ.ಸಂ.9902058547,9900800546 ಗೆ ಸಂಪರ್ಕಿಸಲು ಕೋರಿದೆ.

ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಅಹ್ವಾನ

ಬೀದರ್: 2026-27ನೇ ಸಾಲಿನ ಶೈಕ್ಷಣಿಕ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ. ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ಪಿ.ಯು.ಸಿ, ಡಿಪ್ಲೊಮಾ ಹಾಗೂ ಐಟಿಐ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ), ಹೊಸದಾಗಿ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ್‌ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಬಡೇರಾಮ್ ತಿಳಿಸಿದ್ದಾರೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ಪಿ.ಯು.ಸಿ, ಡಿಪ್ಲೊಮಾ ಹಾಗೂ ಐಟಿಐ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶಾತಿಗೆ ಬಯಸುವ ವಿದ್ಯಾರ್ಥಿಗಳಿಂದ ರಾಜ್ಯ ವಿದ್ಯಾರ್ಥಿ ನಿಲಯ ವೆಬ್ ಸೈಟ್ ನಲ್ಲಿ 2026ರ ಜೂನ್ 30ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೆ ಕರೆ

ಬೀದರ್: ಪರಿಸರ ಸಮತೋಲನ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಹವಾಮಾನ ಬದಲಾವಣೆಯ ಪರಿಣಾಮಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಹಸಿರು ಆವರಣದ ವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯ ಡೀನ್ (ತೋಟಗಾರಿಕೆ) ಕರೆ ನೀಡಿದರು. ಮಹಾವಿದ್ಯಾಲಯದ ಆವರಣದಲ್ಲಿ ವಿವಿಧ ಜಾತಿಯ ಹಣ್ಣಿನ, ಔಷಧೀಯ ಹಾಗೂ ನೆರಳು ನೀಡುವ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶವನ್ನು ತಿಳಿಸಿ ಮಾತನಾಡಿದರು.ವಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳಾದ ಡಾ.ಮಹಮ್ಮದ್ ಫಾರೂಖ್, ಡಾ.ಶ್ರೀನಿವಾಸ.ಎನ್., ಡಾ.ಎಸ್.ಎಮ್.ಪ್ರಸನ್ನ, ಡಾ.ಅಂಬ್ರೇಶ, ಅಂಜನೇಯ.ಎನ್, ಶ್ರೀಮತಿ ಅನುರಾಧಾ ಆರ್.ವಡಗಾವೆ, ಶ್ರೀಮತಿ ಜಾನ್ಹವಿ ಡಿ.ಆರ್.ಡಾ.ಕವಿತಾ ರಾಠೋಡ್, ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಅಧಿಕಾರಿಗಳಾದ ಡಾ.ವಿಜಯ ಮಹಾಂತೇಶ, ಡಾ.ರಮೇಶ ನಾಯಕ ಇದ್ದರು.

ಖಂಡ್ರೆಗೆ ಪಂಚಾಯತ್ ರಾಜ್ ಖಾತೆ: ಸಂತಸ

ಬೀದರ್: ರಾಜ್ಯದ ನೂತನ ಸರಕಾರದಲ್ಲಿ ಭಾಲ್ಕಿ ಶಾಸಕ ಈಶ್ವರ ಖಂಡ್ರೆ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ದೊರೆತಿರುವುದಕ್ಕೆ ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಗ್ರುಪ್ ಬಿ ಹುದ್ದೆ ಉನ್ನತೀಕರಣ ಸಂಘದ ಕಲಬುರಗಿ ವಿಭಾಗೀಯ ಕಾರ್ಯದರ್ಶಿ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಉಮೇಶ ಜಾಬಾ ಸಂತಸ ವ್ಯಕ್ತಪಡಿಸಿದ್ದಾರೆ. ರಾಜ್ಯದ ಅತಿ ಹೆಚ್ಚು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲೇ ಇದೆ. ವಿವಿಧ ಯೋಜನೆ ರೂಪಿಸಿ ಗ್ರಾಮೀಣ ಭಾಗಕ್ಕೆ ಮೂಲಸೌಕರ್ಯ ಕಲ್ಪಿಸುವ, ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಆಡಳಿತವನ್ನು ನಿಯಂತ್ರಿಸುವ ಮಹತ್ವದ ಹೊಣೆ ಜಿಲ್ಲೆಗೆ ಸಿಕ್ಕಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಲಭಿಸಿದ ಅವಕಾಶವೂ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದಗೆ ಸನ್ಮಾನ

ವಡಗೇರಾ:ನೂತನವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ನೇಮಕವಾದ ಹಿರಿಯ ಮುಖಂಡ ಬಿ.ಕೆ ಹರಿಪ್ರಸಾದ್ ರವರನ್ನು ಕಾಂಗ್ರೆಸ್ ಹಿರಿಯ ಮುಖಂಡ ಡಾ.ಎಸ್ಬಿ ಕಾಮರೆಡ್ಡಿ ಬೆಂಡೆಬೆಂಬಳಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿ ಮಾತನಾಡಿದರು.ಬಿ.ಕೆ ಹರಿಪ್ರಸಾದ್ ರವರಿಗೆ ಕೆಪಿಸಿಸಿ ರಾಜ್ಯಾಧ್ಯಕ್ಷ ಸ್ಥಾನ ನೀಡಿರುವುದು ಅತ್ಯಂತ ಸಂತಸದ ವಿಷಯ ಹಿರಿಯ ಹಾಗೂ ಅನುಭವಿ ರಾಜಕಾರಣಿಯಾಗಿದ್ದು ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಿದ್ದಾರೆ.

{ ಈಶ್ವರ್ ಖಂಡ್ರೆ } ಸಚಿವ

ಗ್ರಾಮೀಣ ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಎಲ್ಲ ಪಂಚಾಯಿತಿಗಳ ಆದ್ಯ ಕರ್ತವ್ಯವಾಗಿದ್ದು, ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜಾಗದಂತೆ ಎಚ್ಚರ ವಹಿಸಿ ಕಲುಷಿತ ನೀರು ಸೇವನೆಯಿಂದ ಮುಗ್ಧ ಜನರು ಮೃತಪಟ್ಟ ಘಟನೆಗಳು ಹಲವೆಡೆ ನಡೆದಿವೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ| ಪ್ರಗತಿ ಪರಿಶೀಲನಾ ಸಭೆ| ಡಿಸಿ ರಾಹುಲ್ ತುಕಾರಾಮ ಸೂಚನೆ

ನಕಲಿ ವೈದ್ಯರ ಹಾವಳಿ ಬಗ್ಗೆ ತೀವ್ರ ನಿಗಾ ಇಡಿ

ವಿಶ್ವವಾಣಿ ಸುದ್ದಿಮನೆ ಯಾದಗಿರಿ

ಜಿಲ್ಲೆಯಲ್ಲಿ ನಕಲಿ ವೈದ್ಯರಿಂದ ಆಗುವ ಸಾವು ನೋವುಗಳು ಬಗ್ಗೆ ತೀವ್ರ ನಿಗಾ ಇಡುವಂತೆ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ಕೆ.ಪಿ. ಎಮ್ ಕಾಯಿದೆಯ ಉಲ್ಲಂಘನೆಯಾಗದಂತೆ ನಿಗಾವಹಿಸಬೇಕು. ಜಿಲ್ಲೆಯಲ್ಲಿ ನಕಲಿ ವೈದ್ಯರ ಬಗ್ಗೆ ಹಾಗೂ ಅವರ ಚಿಕಿತ್ಸೆಯಿಂದಾಗುವ ಸಾವು ನೋವುಗಳು ಬಗ್ಗೆ ತೀವ್ರ ನಿಗಾ ಇಡುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರ್.ಸಿ.ಎಚ್ ಅಧಿಕಾರಿಗಳು ಏಪ್ರಿಲ್-2026 ರಲ್ಲಿ ನಡೆದ ಜಿಲ್ಲೆಯಲ್ಲಿ ಆದ ತಾಯಿ ಮರಣಗಳ ವಿವರ ಸಂಕ್ಷಿಪ್ತವಾಗಿ ಸಭೆಗೆ ಪ್ರಸ್ತಾಪಿಸಿದರು. ಒಟ್ಟು 2 ತಾಯಿ ಮರಣಗಳು ಜಿಲ್ಲೆಯಲ್ಲಿ ಸಂಭವಿಸಿವೆ ಎಂದು ತಿಳಿಸಿದರು.

ಅದಕ್ಕೆ ಜಿಲ್ಲಾಧಿಕಾರಿ ಮಾತನಾಡಿ, ವಡಿಗೇರಾ ತಾಲೂಕ ಮಹತ್ವಾಕಾಂಕ್ಷಿ ತಾಲೂಕವೆಂದು ಪರಿಗಣಿಸಿರುವದರಿಂದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿಯಿರುವ ತಜ್ಞ ವೈದ್ಯರ ಹುದ್ದೆಗಳು ಕೂಡಲೆ ಹುದ್ದೆಗಳನ್ನು ಭರ್ತಿಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಮಾತನಾಡಿ ಜಿಲ್ಲೆಯಲ್ಲಿ ಎ.ಎನ್.ಸಿ ರಜಿಷ್ಟೇಷನ್ ಶೇಕಡಾ 90% ರಷ್ಟು ಆಗಿದೆಯೆಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 63% ಪ್ರತಿಶತ ಸಿಜೇರಿಯನ್ ಹೆರಿಗೆಗಳು ಖಾಸಗಿ ಆಸ್ಪತ್ರೆಯಲ್ಲಿ ಜರುಗಿರುತ್ತವೆ ಹಾಗೂ ಸರಕಾರಿ ಆಸ್ಪತ್ರೆಗಳಲ್ಲಿ 27% ಪ್ರತಿಶತ ಸಿಜೆರಿಯನ್ ಹೆರಿಗೆಗಳು ಸಂಭವಿಸಿವೆ ಎಂದು ಸಭೆಗೆ ಪ್ರಸ್ತಾಪಿಸಿದರು.

ಜಿಲ್ಲಾಧಿಕಾರಿ ಮಾತನಾಡಿ, ಖಾಸಗಿ ಆಸ್ಪತ್ರೆಗಳಲ್ಲಿ ಜರುಗುವ ಸಿಜೆರಿಯನ್ ಹೆರಿಗೆಗಳ ಬಗ್ಗೆ ಪರಿಶೀಲಿಸಲು ಸೂಚಿಸಿದರು. ಆರ್.ಸಿಎಚ್ ಅಧಿಕಾರಿ ಉತ್ತರಿಸಿ, ಏಪ್ರಿಲ್ ತಿಂಗಳ ಅಂತ್ಯದವರೆಗೆ ಅಂಗನವಾಡಿಗಳಲ್ಲಿ 9427 ಮಕ್ಕಳಿಗೆ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಾತನಾಡಿ, ಮಾನ್ಸೂನ್ ಮಳೆ ಪ್ರಾರಂಭವಾಗಿದೆ. ನೀರಿನ ಮೂಲಗಳನ್ನು ಪರೀಕ್ಷಿಸಲು ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಮಟ್ಟದಲ್ಲಿ ಒಂದು ವಾಟ್ಸಪ್ ಗ್ರೂಪ್‌ನ್ನು ಪ್ರಾರಂಭಿಸಲು ಸೂಚಿಸಿದರು.

ಕೆ.ಪಿ.ಎಮ್. ಕಾಯಿದೆಯನ್ನು ಪರಿಶೀಲಿಸಿ ಜಿಲ್ಲೆಯಲ್ಲಿ ನಕಲಿ ವೈದ್ಯಾಧಿಕಾರಿಗಳ ಸೇವೆಯ ಕುರಿತು ನಿಗಾವಹಿಸಲು ಸೂಚಿಸಿದರು. ಮತ್ತು ನಕಲಿ ವೈದ್ಯರಿಂದ ಸಾವು ನೋವುಗಳು ಸಂಭವಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

ಹಾಜರಾತಿ ಪದ್ದತಿಯಲ್ಲಿ ಜಿಲ್ಲೆಯ ಎಲ್ಲ ಸಿಬ್ಬಂದಿಗಳ ಪ್ರತಿನಿತ್ಯ ಒಳಗೆ ಮತ್ತು ಹೊರಗೆ ಹಾಜರಾತಿಯು ಶೇಕಡ 100% ಆಗುವಂತೆ ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾ ಆರೋಗ್ಯ ಅಧಿಕಾರಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ತಜ್ಞ ವೈದ್ಯರು ಹಾಗೂ ವೈದ್ಯರು ಸೇರಿ ಒಟ್ಟು 25 ಹುದ್ದೆಗಳು ಖಾಲಿಯಿದ್ದು ಇವುಗಳ ಭರ್ತಿಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಡಿಎಚ್‌ಒಗೆ ಡಿಸಿ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಕಾರ್ಯಕ್ರಮ ಅನುಷ್ಠಾನಾಧಿಕಾರಿ, ಡಿಎಚ್‌ಒ, ಜಿಲ್ಲಾ ಸಂಯೋಜಕರು ಇದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಮಾತನಾಡಿದರು.

> **ಜಿಲ್ಲೆಯಲ್ಲಿ ಬಾಲ್ಯವಿವಾಹ, ಅನೇಮಿಯಾ ಪ್ರಕರಣಗಳು ಹೆಚ್ಚಾಗಿರುವದರಿಂದ ಆದಷ್ಟು ಕಡಿಮೆ ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕು. ಹೆರಿಗೆಗಾಗಿ ಬೇರೆ ಜಿಲ್ಲೆಗೆ ತೆರಳುವ ಗರ್ಭಿಣಿಯರ ಪ್ರಮಾಣವನ್ನು ಕಡಿಮೆಮಾಡಲು ಸೂಕ್ತ ಕ್ರಮಕೈಗೊಳ್ಳಬೇಕು.**
> - ರಾಹುಲ್ ತುಕಾರಾಮ ಪಾಂಡ್ವೆ, ಜಿಲ್ಲಾಧಿಕಾರಿ

ಆಗ್ರೋ ಏಜೆನ್ಸಿ ಅಂಗಡಿ ಮೇಲೆ ತಹಸೀಲ್ದಾರ್ ದಾಳಿ

ಶಹಾಪುರ: ತಾಲೂಕಿನ ಹೊತಪೇಠ ಗ್ರಾಮದ ಸಂಗಮೇಶ್ವರ ಆಗ್ರೋ ಏಜೆನ್ಸಿ ಅಂಗಡಿಗೆ ತಹಸೀಲ್ದಾರ್ ಸಿದ್ದಾರೂಢ ಬನ್ನಿಕೊಪ್ಪ ಅವರು ಕೃಷಿ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಅನಿರೀಕ್ಷಿತವಾಗಿ ದಾಳಿ ಮಾಡಿ ಪರಿಶೀಲನೆ ನಡೆಸಿದರು. ಮಾಲೀಕರಿಗೆ ನಿಯಮದಂತೆ ರಸಗೊಬ್ಬರ ವಿತರಿಸಲು ಎಚ್ಚರಿಕೆ ನೀಡಲಾಯಿತು.

ಮೈಲಾರಲಿಂಗೇಶ್ವರ ಆಗ್ರೋ ಏಜೆನ್ಸಿ ಹೊತಪೇಠ ಅಂಗಡಿ ಗೋದಾಮಿನಲ್ಲಿ ಅನಧೀಕೃತವಾಗಿ ಸಂಗ್ರಹಿಸಿಟ್ಟ ಯೂರಿಯಾ 50, ಡಿಎಪಿ 70 ಹಾಗೂ ಕಾಂಪ್ಲೇಕ್ಸ್ 100 ಚೀಲಗಳ ಗೊಬ್ಬರವನ್ನು ಜಪ್ತಿ ಮಾಡಲಾಯಿತು. ಹಾಗೂ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಯಿತು. ಮತ್ತು ಕೃತಕ ಅಭಾವ ಸೃಷ್ಠಿಸಿದ್ದಲ್ಲಿ ಹಾಗೂ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದಲ್ಲಿ ಅಗತ್ಯ ವಸ್ತುಗಳ ಕಾಯಿದೆ 1955 ರಡಿ ಕಾನೂನು ಕ್ರಮದ ಜತೆಗೆ ಪರವಾನಗಿಯನ್ನು ರದ್ದು ಪಡಿಸಲಾಗುವುದು ಎಂದು ಎಚ್ಚರಿಸಿದರು. ಉಳಿದ ಪ್ರಕರಣಗಳಲ್ಲಿ ಕೃಷಿ ಅಧಿಕಾರಿಗಳು ನಗರದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದಾಗ ಈ ರಸಗೊಬ್ಬರ ನಿಯಂತ್ರಣ ಕಾಯ್ದೆ 1985 ರಡಿ ನಿಯಮ ಉಲ್ಲಂಘಿಸಿದ್ದು ಮೈಲಾರಲಿಂಗೇಶ್ವರ ಆಗ್ರೋ ಏಜೆನ್ಸಿ ಹಾಗೂ ಸಾಯಿ ಫರ್ಟಿಲೈಸರ್ಸ್ ರಸಗೊಬ್ಬರ ಅಂಗಡಿಗಳ ಪರವಾನಗಿಯನ್ನು ಮುಂದಿನ ಆದೇಶದವರೆಗೆ ಅಮಾನತು ಗೊಳಿಸಲಾಗಿದೆ. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕ ಸುನೀಲಕುಮಾರ, ಕೃಷಿ ಅಧಿಕಾರಿ ಗೋಗಿ, ಪೊಲೀಸ್ ಅಧಿಕಾರಿಗಳು ಇದ್ದರು.

ತಾಲೂಕಿನ ಹೊತಪೇಠ ಗ್ರಾಮದ ಸಂಗಮೇಶ್ವರ ಆಗ್ರೋ ಏಜೆನ್ಸಿ ಅಂಗಡಿಗೆ ತಹಸೀಲ್ದಾರ ಸಿದ್ದಾರೂಢ ಬನ್ನಿಕೊಪ್ಪ ಅವರು ಕೃಷಿ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಅನಿರೀಕ್ಷಿತವಾಗಿ ದಾಳಿ ಮಾಡಿ ಪರಿಶೀಲನೆ ನಡೆಸಿದರು.

ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ ಕ್ರಮವಹಿಸಿ

ಔರಾದ್ : ವಸತಿ ಶಾಲೆಯ ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕೊರತೆಯಾಗದಂತೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು. ಬೋಧನಾ ಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಡೆಸಿ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಶಾಸಕ ಪ್ರಭು ಚವ್ಹಾಣ ಶಿಕ್ಷಕರು ಹಾಗೂ ಪ್ರಾಚಾರ್ಯರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಔರಾದ್ ತಾಲೂಕಿನ ಚಿಂತಾಕಿ ಗ್ರಾಮದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಗೆ ಭೇಟಿ ನೀಡಿದ ಅವರು ಶಾಲೆಯ ತರಗತಿ ಕೊಠಡಿ. ಪ್ರಯೋಗಾಲಯ. ಕಂಪ್ಯೂಟರ್‌ಕೊಠಡಿ. ವಸತಿ ನಿಲಯ, ಕಿಚನ್ ಹಾಲ್ ಸೇರಿದಂತೆ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಸೌಲಭ್ಯಗಳು ಹಾಗೂ ಕಾಮಗಾರಿಯ ಕುರಿತು ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದರು. ಗ್ರಾಮ ಸಂಚಾರದ ಸಂದರ್ಭದಲ್ಲಿ ಸಾರ್ವಜನಿಕರು ವಸತಿ ಶಾಲೆಯ ಕಟ್ಟಡ ಕುರಿತು ವಿಷಯ ಪ್ರಸ್ತಾಪಿಸಿದರು. ಸ್ಥಳೀಯ ಜನರ ಬೇಡಿಕೆಯಂತೆ ಅನುದಾನ ಮಂಜೂರು ಮಾಡಿಸಿ ವಸತಿವ ಶಾಲೆ ನಿರ್ಮಿಸಲಾಗಿದೆ. ನೂತನ ಕಟ್ಟಡದಲ್ಲಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಎಲ್ಲ ಮೂಲಭೂತ ಹಾಗೂ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಂದಾಜು ಪತ್ರಿಕೆಯಲ್ಲಿ ನಮೂದಿಸಿರುವಂತೆ ಕಂಪ್ಯೂಟರ್‌ಗಳು, ಪ್ರಾಜೆಕ್ಟರ್‌ಗಳು, ಪೀಠೋಪಕರಣಗಳು ಹಾಗೂ ಪಾಠೋಪಕರಣಗಳನ್ನು ಸಮರ್ಪಕವಾಗಿ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಆವರಣದಲ್ಲಿ ಸಸಿಗಳು ನೆಟ್ಟು ಹಸಿರು ವಾತಾವರಣ ನಿರ್ಮಿಸಬೇಕು. ಮಕ್ಕಳಿಗೆ ಆರೋಗ್ಯಕರ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗುವಂತೆ ಸುಂದರ ಉದ್ಯಾನವನ್ನು ಅಭಿವೃದ್ಧಿಪಡಿಸಬೇಕು ಎಂದು ತಿಳಿಸಿದರು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಯು ಶೇ.100ರಷ್ಟು ಫಲಿತಾಂಶ ದಾಖಲಿಸುವ ಗುರಿಯೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಶಾಸಕರು ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಗೋವಿಂದರೆಡ್ಡಿ ಕಸಬೆ, ನಾಗಶೆಟ್ಟಿ ಹೆಗಡೆ, ಖಾಜಾಮಿಯ್ಯಾ, ಮಾರುತಿರೆಡ್ಡಿ ಪಟ್ನೆ, ಸಂಜೀವರೆಡ್ಡಿ ಬಿಜಲವಾಡೆ, ವಿಠಲರೆಡ್ಡಿ ಪಿಡಕಲೆ ಇದ್ದರು.

ತಾಲೂಕಿನ ಚಿಂತಾಕಿ ಗ್ರಾಮದ ಬಾಲಕಿಯರ ವಸತಿ ಶಾಲೆಗೆ ಶಾಸಕ ಪ್ರಭು ಚವ್ಹಾಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂಸ್ಕೃತಿ ಉಳಿವಿಗೆ ವಚನ ಅಧ್ಯಯನ ಅವಶ್ಯಕ

ಬೀದರ್: ದೇಶದ ಶ್ರೇಷ್ಠ ಸಂಸ್ಕೃತಿ, ಸಂಸ್ಕಾರ, ಕಲೆ ಹಾಗೂ ಸಾಹಿತ್ಯದ ಉಳಿವಿಗೆ ವಚನ ಸಾಹಿತ್ಯದ ಅಧ್ಯಯನ ಅವಶ್ಯಕವಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕಟುಂಬ ಕಲ್ಯಾಣ ಅಧಿಕಾರಿ ಡಾ. ಮಹೇಶ ಬಿರಾದಾರ ಅಭಿಪ್ರಾಯಪಟ್ಟರು.

ವಚನಾಮೃತ ಕನ್ನಡ ಸಂಘದ ವತಿಯಿಂದ ಇಲ್ಲಿಯ ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಬಳಿಯ ಮಹಾಲಕ್ಷ್ಮಿ ಸಭಾಂಗಣದಲ್ಲಿ ಆಯೋಜಿಸಿದ್ದ ಶಿವಶರಣ ಹಡಪದ ಅಪ್ಪಣ್ಣ ಹಾಗೂ ಮೈದುನ ರಾಮಯ್ಯ ಅವರ ಕುರಿತು ವಿಚಾರ ಸಂಕೀರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಚನ ಸಾಹಿತ್ಯ ಅನುಭಾವದ ಸಾಗರವಾಗಿದೆ. ನಮ್ಮ ಶಕ್ತಿಗೆ ಅನುಗುಣವಾಗಿ ಅದನ್ನು ಬಳಸಿಕೊಂಡು ಬಲಿಷ್ಠ ಸಮಾಜ ಕಟ್ಟಬೇಕಾಗಿದೆ ಎಂದು ಹೇಳಿದರು. ಯೋಗ ಹಾಗೂ ಸಾತ್ವಿಕ ಆಹಾರದಿಂದ ಸದೃಢ ಆರೋಗ್ಯ ಕಾಯ್ದುಕೊಳ್ಳಬಹುದು. ದೊಡ್ಡ ಸಾಧನೆ ಮಾಡಬಹುದು ಎಂದು ತಿಳಿಸಿದರು.

12ನೇ ಶತಮಾನದ ಶರಣರು ಉತ್ತಮ ಸಮಾಜ ನಿರ್ಮಿಸಿದ್ದರು. ಅವರ ತತ್ವ, ಆದರ್ಶಗಳನ್ನು ಯುವ ಪೀಳಿಗೆಗೆ ತಿಳಿಸಲು ಸಂಘದಿಂದ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅಧ್ಯಕ್ಷತೆ ವಹಿಸಿದ್ದ ವಚನಾಮೃತ ಕನ್ನಡ ಸಂಘದ ಅಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಹೇಳಿದರು. ವಿಚಾರ ಸಂಕೀರಣವು ಹಡಪದ ಅಪ್ಪಣ್ಣ ಹಾಗೂ ಮೈದುನ ರಾಮಯ್ಯ ಅವರ ಬದುಕಿನ ಮೇಲೆ ಬೆಳಕು ಚೆಲ್ಲಿದೆ. ಸಂಘದಿಂದ ಜೂ. 10 ರಂದು ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಅಲ್ಲಮಪ್ರಭುದೇವರ ಕುರಿತ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆಯಬೇಕು ಎಂದು ಮನವಿ ಮಾಡಿದರು. ಡಾ. ವೀಣಾ ಜಲಾದೆ ಉಪನ್ಯಾಸ ನೀಡಿದರು.

ಚಿಂತಕ ಎಸ್.ಎಸ್. ಹೊಡಮನಿ ಮಾತನಾಡಿದರು. ಕವಿರತ್ನ ಕಾಳಿದಾಸ ಪ್ರಥಮ ದರ್ಜೆ ಕಾಲೇಜಿನ ದೈಹಿಕ ನಿರ್ದೇಶಕ ಓಂಕಾರ ಮಾಶೆಟ್ಟಿ ಉಪಸ್ಥಿತರಿದ್ದರು. ರೇಣುಕಾ ಮಳ್ಳಿ ಹಾಗೂ ನಾಗಶ್ರೀ ನರೇಂದ್ರ ಸುಶ್ರಾವ್ಯವಾಗಿ ವಚನ ಗಾಯನ ಮಾಡಿದರು. ಶ್ರೀದೇವಿ ಸೋಮಶೆಟ್ಟಿ ಸ್ವಾಗತಿಸಿದರು. ಶಿಲ್ಪಾ ಮಜಗೆ ನಿರೂಪಿಸಿದರು. ಬಸವರಾಜ ಬಿರಾದಾರ ವಂದಿಸಿದರು.

ನಗರದಲ್ಲಿವ ಶಿವಶರಣ ಹಡಪದ ಅಪ್ಪಣ್ಣ ಹಾಗೂ ಮೈದುನ ರಾಮಯ್ಯ ಕುರಿತ ವಿಚಾರ ಸಂಕೀರಣ ಕಾರ್ಯಕ್ರಮ ಡಿಎಚ್ ಓ ಡಾ. ಮಹೇಶ ಬಿರಾದಾರ ಉದ್ಘಾಟಿಸಿದರು.

ಡಾ.ಅಜಯ್ ಸಿಂಗ್‌ಗೆ ಸಚಿವ ಸ್ಥಾನ ನೀಡಿ

ಯಾದಗಿರಿ: ಜೇವರ್ಗಿ ಮತಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ರವರಿಗೆ ಎರಡನೇ ಅವಧಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಉನ್ನತ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಸಂಜೀವ್.ಎಸ್ ಐರೆಡ್ಡಿ ಬೆಂಡೆಬೆಂಬಳಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್‌ಹಾಗೂ ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಒತ್ತಾಯಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಡಾ.ಅಜಯ್ ಸಿಂಗ್ ರವರು ಕಾಂಗ್ರೆಸ್ ಪಕ್ಷದ ಏಳಿಗೆಗಾಗಿ ಹಗಲು ಇರುಳು ಎನ್ನದೆ ಶ್ರಮಿಸಿದ್ದಾರೆ.

ಸಸಿ ನೆಟ್ಟು ಪೋಷಿಸುವುದು ಅಗತ್ಯ: ಶಾಸಕ ಕಂದಕೂರ್

ಗುರುಮಠಕಲ್: ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಳ್ಳಲು ಮತ್ತು ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಡುಗೊರೆಯಾಗಿ ನೀಡಲು ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಪೋಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಮಾನ್ಯ ಗುರುಮಠಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ್ ಕರೆ ನೀಡಿದರು.

ನಗರದ ಸರಕಾರಿ ಬಾಲಕರ ಪ್ರೌಢಶಾಲೆಯ ಆವರಣದಲ್ಲಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳ ವತಿಯಿಂದ ಹಾಗೂ ಶಾಲಾ ಆಡಳಿತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಪರಿಸರ ಜಾಗೃತಿ ಮತ್ತು ಉಚಿತ ಸಸಿ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಸಕಾಲಕ್ಕೆ ಮಳೆಯಾಗದೆ ರೈತರು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಸರ ನಾಶವೇ ಪ್ರಮುಖ ಕಾರಣವಾಗಿದ್ದು, ಕಾಡು ಬೆಳೆಸುವ ಮೂಲಕ ಮಾತ್ರವೇ ನಾವು ಪ್ರಕೃತಿಯನ್ನು ರಕ್ಷಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಶಾಸಕರು ನೆರೆದಿದ್ದ ಅನೇಕ ವಿದ್ಯಾರ್ಥಿಗಳಿಗೆ ಅರಣ್ಯ ಇಲಾಖೆಯ ವತಿಯಿಂದ ವಿವಿಧ ತಳಿಗಳ ಸಸಿಗಳನ್ನು ಉಚಿತವಾಗಿ ವಿತರಿಸಿದರು. ಈರಣ್ಣ ಕನ್ನಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿ ಮಾತನಾಡಿ ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಣ ಮತ್ತು ಓದು ಎಷ್ಟು ಮುಖ್ಯವೋ, ಪರಿಸರ ಹಾಗೂ ಗಿಡ-ಮರಗಳು ಕೂಡ ಅಷ್ಟೇ ಮುಖ್ಯ 'ಕೇವಲ ಪುಸ್ತಕದ ಜ್ಞಾನದಿಂದ ಬದುಕು ಪರಿಪೂರ್ಣವಾಗುವುದಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿ ಯೂ ಪರಿಸರ ಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.ಎ.ಬಿ ಪಾಟೀಲ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಾದೇಶಿಕ ಹಾಗೂ ಸಾಮಾಜಿಕ ವಿಭಾಗ ಮಾತನಾಡಿದರು. ಕಾರ್ಯಕ್ರಮ ದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಉಪ ವಿಭಾಗ ರಮೇಶ್ ಕನಕಟ್, ಮಹಮ್ಮದ್ ಅಸಾದ್, ಪ್ರಾದೇಶಿಕ ಅರಣ್ಯ ವಲಯದ ವಲಯ ಅರಣ್ಯ ಅಧಿಕಾರಿಗಳು ಗುರುಮಠಕಲ್ ರಾಹುಲ್ ಸಾದುರೆ, ಚನ್ನಬಸವ ಕಟ್ಟಿಮನಿ,ಭೀಮಶಂಕರ್,ಅಶ್ವತ್ ಕುಮಾರ್, ಯಾದವ್ ಕುಮಾರ್,ಸಂತೋಷ್,ಪವನ್ ಕುಮಾರ್, ಬಸವರಾಜ್ ಗೌಡ, ಕುಮಾರ, ಬಸವರಾಜ್, ಶಿವರಾಜ್, ಶಾಲೆಯ ಮುಖ್ಯ ಗುರುಗಳು ಕೃಷ್ಣಾರೆಡ್ಡಿ , ಶಿಕ್ಷಕ ವೃಂದ ಇದ್ದರು.

ನಗರದ ಸರಕಾರಿ ಬಾಲಕರ ಪ್ರೌಢಶಾಲೆಯ ಆವರಣದಲ್ಲಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳ ವತಿಯಿಂದ ಹಾಗೂ ಶಾಲಾ ಆಡಳಿತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಪರಿಸರ ಜಾಗೃತಿ ಮತ್ತು ಉಚಿತ ಸಸಿ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಶರಣಗೌಡ ಕಂದಕೂರ್‌ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸಿದರು.

ಸಾರ್ವಜನಿಕರ ಸೇವೆಯೇ ಮೊದಲ ಆದ್ಯತೆ: ಭೀಮರಾವ

ಔರಾದ್ : ಜನ ಸೇವೆಯೇ ನನ್ನ ಮೊದಲ ಆದ್ಯತೆಯಾಗಿದ್ದು, ಸಾರ್ವಜನಿಕರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಲು ಪ್ರಯತ್ನಿಸುತ್ತೇನೆ. ಔರಾದ್ ತಾಲೂಕಿಗೆ ಪ್ರತಿ ತಿಂಗಳು ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಸರಕಾರದ ಯೋಜನೆಗಳು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಹೇಳಿದರು. ಔರಾದ್ ಪಟ್ಟಣದ ತಮ್ಮ ಕಚೇರಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದರು. ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ನಾಗರಿಕರು ತಮ್ಮ ಸಮಸ್ಯೆಗಳ ಕುರಿತು ಮನವಿಪತ್ರಗಳನ್ನು ಸಲ್ಲಿಸಿ ಪರಿಹಾರ ಕೋರಿದರು. ನಂತರ ಮಾತನಾಡಿದರು. ಪ್ರತಿ ತಿಂಗಳು ಔರಾದ್ ತಾಲೂಕಿಗೆ ಭೇಟಿ ನೀಡುವುದಾಗಿ ತಿಳಿಸಿದ ಅವರು, ಕಾಂಗ್ರೆಸ್ ಕಾರ್ಯಕರ್ತರು ಈ ಕುರಿತು ಜನರಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು. ಸರಕಾರದ ವಿವಿಧ ಇಲಾಖೆಗಳಲ್ಲಿನ ಸಾರ್ವಜನಿಕರ ಅಡೆತಡೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಪಕ್ಷದ ಬಲವರ್ಧನೆ ಮತ್ತು ಸರ್ಕಾರದ ಯೋಜನೆಗಳು ಬಡವರ ಮನೆಗಳಿಗೆ ತಲುಪುವಂತೆ ಎಲ್ಲರೂ ಸೇರಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿ ಬಂಧುತ್ವ ವೇದಿಕೆಯ ಜಿಲ್ಲಾ ಸಂಚಾಲಕ ರತ್ನದೀಪ ಕಸ್ತೂರೆ ಮಾತನಾಡಿ,ಪಟ್ಟಣದ ಕ್ರೀಡಾಂಗಣಕ್ಕೆ ಹೋಗುವ ರಸ್ತೆ ನಿರ್ಮಾಣ. ತಾಲೂಕಿನ ಹಂಗರಗಾ ತಾಂಡವೇ ಇಲ್ಲದಿದ್ದರೂ, ಅದೇ ಹೆಸರಿನಲ್ಲಿ ಜೆಜೆಎಂ ಕಾಮಗಾರಿ ನಡೆಸಿದಂತೆ ತೋರಿಸಿ 24.14 ಲಕ್ಷ ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹಂಗರಗಾ ಗ್ರಾಮಸ್ಥರು ಗಮನಕ್ಕೆ ತಂದರು. ಈ ಕುರಿತು ತಕ್ಷಣ ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಮನವಿ ಸಲ್ಲಿಸಿದರು.

ಔರಾದ್ನಲ್ಲಿ ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೇಲ್ ಸಾರ್ವಜನಿಕರ ಸಮಸ್ಯೆ ಆಲಿಸಿದರು.

ಮಠಾಧೀಶರು, ಬಸವ ಪರ ಸಂಘಟನೆಗಳ ಸಭೆಯಲ್ಲಿ ನಿರ್ಧಾರ | ತೀವ್ರ ಹೋರಾಟದ ಎಚ್ಚರಿಕೆ

ಕನೇರಿ ಸ್ವಾಮೀಜಿ ಬಸವಕಲ್ಯಾಣ ಪ್ರವೇಶ ತಡೆಗೆ ನಿರ್ಧಾರ

ವಿಶ್ವವಾಣಿ ಸುದ್ದಿಮನೆ ಬೀದರ್

ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ಜೂನ್ 28ಕ್ಕೆ ಬಸವಕಲ್ಯಾಣ ಪ್ರವೇಶಕ್ಕೆ ತಡೆವೊಡ್ಡಲು ಜಿಲ್ಲೆಯ ಮಠಾಧೀಶರು. ಬಸವ ಪರ ಸಂಘಟನೆಗಳ ಪ್ರಮುಖರು ಹಾಗೂ ಬಸವಾನುಯಾಯಿಗಳು ನಿರ್ಧರಿಸಿದ್ದಾರೆ.

ನಗರದ ಗಾಂಧಿಗಂಜ್‌ನ ಬಸವೇಶ್ವರ ದೇವಸ್ಥಾನದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ವತಿಯಿಂದ ಭಾನುವಾರ ಸಂಜೆ ನಡೆದ ಸಭೆಯಲ್ಲಿ ಈ ಕುರಿತು ಒಕ್ಕೊರಲ ತೀರ್ಮಾನ ಕೈಗೊಂಡರು.

ಕನೇರಿ ಸ್ವಾಮೀಜಿ ಬಸವ ಭಕ್ತರನ್ನು ಬಸವ ತಾಲಿಬಾನಿಗಳೆಂದು ಅವಮಾನಿಸಿದ್ದಾರೆ. ಬಸವ ತತ್ವ ಪ್ರಚಾರ ಮಾಡುತ್ತಿರುವ ಮಠಾಧೀಶರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಸವ ತತ್ವವನ್ನು ಮನ ಬಂದಂತೆ ಹೇಳುತ್ತಾ ಜನರ ದಾರಿ ತಪ್ಪಿಸುತ್ತಿದ್ದಾರೆ. ಅವರಿಗೆ ಬಸವಾದಿ ಶರಣರ ಪುಣ್ಯ ಭೂಮಿ ಬಸವಕಲ್ಯಾಣವನ್ನು ಸ್ಪರ್ಶಿಸಲು ಬಿಡುವುದಿಲ್ಲ ಎಂದು ಘೋಷಿಸಿದರು.

ಕನೇರಿ ಸ್ವಾಮೀಜಿ ಬಸವಕಲ್ಯಾಣ ಪ್ರವೇಶ ವಿರೋಧಿಸಿ ಬೀದರ್‌ಸೇರಿದಂತೆ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸಲಾಗುವುದು. ರಾಜ್ಯ ಸರಕಾರ ಕೂಡಲೇ ಎಚ್ಚೆತ್ತುಕೊಂಡು ಸ್ವಾಮೀಜಿ ಬಸವಕಲ್ಯಾಣ ಪ್ರವೇಶಕ್ಕೆ ನಿರ್ಬಂಧ ಹೇರಬೇಕು ಎಂದು ಒತ್ತಾಯಿಸಿದರು. ಸಾನಿಧ್ಯ ವಹಿಸಿದ್ದ ಕರ್ನಾಟಕ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿ ಕನೇರಿ ಸ್ವಾಮೀಜಿ ಸುಳ್ಳಿನ ಸರದಾರರು. ಅವರ ಬಸವ ತತ್ವ ವಿರೋಧಿ ನಡೆಯನ್ನು ಖಂಡಿಸಲಾಗುತ್ತದೆ ಎಂದು ಹೇಳಿದರು. ಕನೇರಿ ಸ್ವಾಮೀಜಿ ವಿರುದ್ಧ ಬಸವ ಪರ ಸಂಘಟನೆಗಳೆಲ್ಲ ಒಂದಾಗಿ ಹೋರಾಟ ಮಾಡುವ ಸಂದರ್ಭ ಬಂದಿದೆ ಎಂದು ತಿಳಿಸಿದರು. ಬಸವಸೇವಾ ಪ್ರತಿಷ್ಠಾನದ ಡಾ. ಗಂಗಾಂಬಿಕೆ ಅಕ್ಕ ಮಾತನಾಡಿ, ಪುರೋಹಿತ ಶಾಹಿಗಳಿಂದ ನಡೆಯುತ್ತಿರುವ ಅನ್ಯಾಯ ಬಸವಕಲ್ಯಾಣದ ಪವಿತ್ರ ನೆಲದಲ್ಲಿ ಘಟಿಸಲು ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದರು. ಭಾರತೀಯ ಬಸವ ಬಳಗದ ರಾಜ್ಯ ಅಧ್ಯಕ್ಷ ಬಾಬುವಾಲಿ, ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಬಸವರಾಜ ಧನ್ನೂರ ಅಧ್ಯಕ್ಷತೆ ವಹಿಸಿ ಮಾತನಾಡಿ ಬಸವ ಭಕ್ತರನ್ನು ಬಸವ ತಾಲಿಬಾನಿಗಳೆಂದು ಅಪಮಾನಿಸಿರುವ ಕನೇರಿ ಸ್ವಾಮೀಜಿ ದಂಡ ನಮಸ್ಕಾರ ಹಾಕಿ ಬಸವ ಭಕ್ತರಲ್ಲಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಬೆಲ್ದಾಳ ಸಿದ್ದರಾಮ ಶರಣರು. ಗುಣತೀರ್ಥವಾಡಿಯ ಬಸವಪ್ರಭು ಸ್ವಾಮೀಜಿ, ಕೋರಣೇಶ್ವರ ಸ್ವಾಮೀಜಿ, ಬಸವ ಧರ್ಮ ಪೀಠದ ಸಿದ್ಧರಾಮೇಶ್ವರ ಸ್ವಾಮೀಜಿ, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದ್ದೇವರು ಇದ್ದರು.

ಕನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಅವರ ಬಸವಕಲ್ಯಾಣ ಪ್ರವೇಶ ವಿರೋಧಿಸಿ ಬೀದರನಲ್ಲಿ ನಡೆದ ಸಭೆಯಲ್ಲಿ ನಿರ್ಣಯ. ಮಠಾಧೀಶರು, ಬಸವಪರ ಸಂಘಟನೆಗಳ ಮುಖಂಡರು ಭಾಗಿ.

ರೈತರ,ಕಾರ್ಮಿಕರ ಬೇಡಿಕೆ ಈಡೇರಿಸುವಂತೆ ಆಗ್ರಹ

ಶಹಾಪುರ: ಚಟ್ನಳ್ಳಿ ಗ್ರಾ.ಪಂ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಸಿಸಿ ರಸ್ತೆ, ಒಳಚರಂಡಿ ವ್ಯವಸ್ಥೆ ತಕ್ಷಣ ಕ್ರಮ ಕೈಗೊಳ್ಳಬೇಕು. ಮರಕಲ್ ಗ್ರಾಮದಲ್ಲಿ ಸಾಮೂಹಿಕ ಶೌಚಾಲಯ ನಿರ್ಮಿಸಿ, ವಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಗ್ರಾಮ ಪಂಚಾಯಿತಿ ವತಿಯಿಂದ ಡಂಗೂರ ಹಾಕಿ ಅರ್ಜಿಗಳು ಪಡೆಯಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಭೀಮರಾಯ ಪೂಜಾರಿ ಆಗ್ರಹಿಸಿದರು. ಮಹಾತ್ಮ ಗಾಂಧೀ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡಿದ ಬಡ ರೈತ ಕೂಲಿ ಕಾರ್ಮಿಕರಿಗೆ ಆರು ತಿಂಗಳ ಕಳೆದರೂ ಪೇಮೆಂಟ್ ಬಂದಿಲ್ಲ ತಕ್ಷಣ ದುಡಿದ ಬಡ ರೈತ ಕೂಲಿ ಕಾರ್ಮಿಕರಿಗೆ ಕೂಲಿ ಜಮಾ ಮಾಡಬೇಕು. ಪಾರಂ ನಂಬರ್ 6 ಕೊಟ್ಟು ಕೆಲಸ ಕೊಡದೆ ಸತಾಯಿಸುತ್ತಿರುವುದು. ತಕ್ಷಣ ಬಡ ರೈತ ಕೂಲಿ ಕಾರ್ಮಿಕರಿಗೆ ಎನ್‌ಎಂಆರ್ ಕೊಟ್ಟು ಕೆಲಸಕ್ಕೆ ಕಳಿಸಬೇಕು. ಬಡ ರೈತ ಕೂಲಿ ಕಾರ್ಮಿಕರಿಗೆ ಮನೆ ನಿವೇಶನ ಒದಗಿಸಿಕೊಡಬೇಕು. ಕೂಡಲೇ ಆಯಾ ಗ್ರಾ.ಪಂ ಆಡಳಿತ ಅಭಿವೃದ್ಧಿ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಹೋದಲ್ಲಿ ಜೂ.17ರಂದು ಚಟ್ನಳ್ಳಿ ಗ್ರಾ.ಪಂಗೆ ಬೀಗ ಜಡಿದು ಹೋರಾಟ ಮಾಡಬೇಕಾಗುತ್ತದೆ ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ರೇಣುಕಾ, ಮಲ್ಲಿಕಾರ್ಜುನ ಪೊಲೀಸ್ ಪಾಟೀಲ್, ಶಿವಪ್ಪ ಅಲ್ಲಿಪುರ ಇದ್ದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಜೂನಿಯರ್ ತಂಡಕ್ಕೆ ಜಯ

ಶ್ರೀಲಂಕಾದಲ್ಲಿ ಮಂಗಳವಾರ ನಡೆದ ತ್ರಿಕೋನ ಸರಣಿಯಲ್ಲಿ ಭಾರತ-ಎ ತಂಡವು ಆತಿಥೇಯ ಶ್ರೀಲಂಕಾ-ಎ ತಂಡದ ವಿರುದ್ಧ 8 ರನ್‌ಗಳ ಜಯ ಸಾಧಿಸಿದೆ. ಪಂದ್ಯದಲ್ಲಿ 101 ರನ್ ಗಳಿಸಿದ ಟೀಮ್ ಇಂಡಿಯಾದ ಋತುರಾಜ್ ಗಾಯಕ್ವಾಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನರೇಂದ್ರ ಮೋದಿ @12: ವಿಕಸಿತ ಭಾರತದ ಹಾದಿ

ಸಾಂದರ್ಭಿಕ

ಪ್ರಲ್ಹಾದ ಜೋಶಿ

ಕೇಂದ್ರ ಆಹಾರ ಮತ್ತು ನಾಗರಿಕ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು

'ಕಮಲೇ ಕಮಲೋತ್ಪತ್ತಿಃ' ಎಂಬ ಸಂಸ್ಕೃತದ ಈ ಪ್ರಸಿದ್ಧ ನುಡಿಗಟ್ಟು ನಮ್ಮೆಲ್ಲರ ಹೆಮ್ಮೆಯ, ನಲ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಕ್ಷರಶಃ ಅನ್ವಯಿಸುತ್ತದೆ. ಭಾರತವೇ ಒಂದು ಸುಂದರವಾದ ಕಮಲ, ಅದರಲ್ಲಿ ಮೋದಿ ಅವರೂ ಮತ್ತೊಂದು ಕಮಲವಾಗಿ ಅರಳಿ ವಿಶ್ವಕ್ಕೇ ಸೌಂದರ್ಯ, ಪರಿಮಳವ ಪಸರಿಸಿದ್ದಾರೆಂದರೆ ಬಹುಶಃ ಅತಿಶಯೋಕ್ತಿಯಲ್ಲ.

ಅತ್ಯಂತ ಬಡ ಕುಟುಂಬದಲ್ಲಿ ಜನಿಸಿ ಹಳ್ಳಿಯಿಂದ ದಿಲ್ಲಿಗೆ ಬಂದು, ವಿಶ್ವಸುತ್ತಿ, ಕೋಶ ಓದಿ ಜಗತ್ತೇ ಜಪಿಸುವಂತೆ ಪ್ರಚಲಿತಕ್ಕೆ ಬಂದ ಮೋದಿಜಿ, ಹೂವಿನ ಜತೆ ನಾರು ಸ್ವರ್ಗ ಸೇರಿತು ಎಂಬಂತೆ ತಾಯ್ನಾಡನ್ನು ವಿಶ್ವಪ್ರಸಿದ್ಧಿಪಡಿಸಿದ ಕೀರ್ತಿಪಾತ್ರರು. 'ಸಬ್ ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್' ಧ್ಯೇಯಘೋಷದ ಫಲವಾಗಿ ಭಾರತವಿಂದು ಅಂಬಾರಿ ಸ್ಥಾನವನ್ನಲಂಕರಿಸಿದೆ.

ಒಂದು ಕಾಲದಲ್ಲಿ ಪ್ರಪಂಚದ ಐದು ದುರ್ಬಲ ರಾಷ್ಟ್ರಗಳಲ್ಲಿ ಒಂದಾಗಿದ್ದ, ಭಯೋತ್ಪಾದನಾ ದಾಳಿ ವೇಳೆ ಮೇಣದ ಬತ್ತಿ ಹಚ್ಚುತ್ತಿದ್ದ ಭಾರತದ ಆ ದಿನಗಳೀಗ ಕರಗಿ ಹೋಗಿವೆ. 21ನೇ ಶತಮಾನದ ಭಾರತ, ನರೇಂದ್ರ ಮೋದಿ ಸಾರಥ್ಯದಲ್ಲಿ ಬಲಿಷ್ಠ ಆರ್ಥಿಕತೆಯತ್ತ ಅಶ್ವಮೇಧವಾಗಿ ಮುನ್ನುಗ್ಗುತ್ತಿದೆ. ಉಗ್ರರಿಗೆ 'ಆಕಾಶ್- ಪೃಥ್ವಿ- ಬ್ರಹ್ಮೋಸ್' ಸ್ವರೂಪದಲ್ಲಿ ನರಕ ತೋರಿಸುತ್ತಿದೆ. ಕೋವಿಡ್ ಮಹಾಮಾರಿ, ಭಯೋತ್ಪಾದನೆ, ಯುದ್ಧ ಬಿಕ್ಕಟ್ಟು, ಹಣದುಬ್ಬರ, ಪ್ರಕೃತಿ ವಿಕೋಪದಂತಹ ಆಪತ್ತನ್ನೂ ಮೀರಿ 'ನಮೋ ಸುರಕ್ಷಾ' ಕವಚದಲ್ಲಿ 2047ಕ್ಕೆ ವಿಕಸಿತದತ್ತ ದಾಪುಗಾಲಿರಿಸಿದೆ ನವ ಭಾರತ.

ಅಭಿವೃದ್ಧಿಯ ಗಿರಿ ಶಿಖರದಲ್ಲಿ: ಮೋದಿ ಅವರ ಸಾರ್ಥಕ 12 ವರ್ಷಗಳ ಆಡಳಿತದಲ್ಲಿ ಭಾರತ ಮೂಲಸೌಕರ್ಯ ಅಭಿವೃದ್ಧಿ, ತಂತ್ರಜ್ಞಾನ, ರಕ್ಷಣಾ ವಲಯ, ಆರೋಗ್ಯ ಕ್ಷೇತ್ರ, ಕೃಷಿ-ನೀರಾವರಿ, ಸಾರಿಗೆ-ಸಂಪರ್ಕ, ಉತ್ಪಾದನೆ-ಉದ್ಯಮ, ರಫ್ತು, ಸೌರ ಕ್ರಾಂತಿ ಹೀಗೆ ಸರ್ವಶ್ರೇಷ್ಠವಾಗಿ ಅಭಿವೃದ್ಧಿಯ ಗಿರಿ ಶಿಖರವೇರಿದೆ. ಆಧುನಿಕ ಭಾರತದ ಆರ್ಥಿಕ-ಅಭಿವೃದ್ಧಿ, ರಾಷ್ಟ್ರೀಯ ಭದ್ರತೆ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ಜಾಗತಿಕವಾಗಿ ಸಹ ಪ್ರತಿಧ್ವನಿಸುತ್ತಿವೆ.

ಬಲಿಷ್ಠ ಆರ್ಥಿಕತೆಯತ್ತ: ನಮ್ಮ ನೈಜ ಜಿಡಿಪಿ 2025-26ನೇ ಹಣಕಾಸು ವರ್ಷದಲ್ಲಿ ₹323.12 ಲಕ್ಷ ಕೋಟಿಗೆ ತಲುಪಿದೆ. ನಾಮಮಾತ್ರ ಜಿಡಿಪಿ (Nominal GDP) ಪ್ರಸ್ತುತ ಬೆಲೆಗಳ ಆಧಾರದ ಮೇಲೆ ₹346.36 ಲಕ್ಷ ಕೋಟಿಯಾಗಿದ್ದು, ಶೇ.8.9ರಷ್ಟು ಪ್ರಗತಿ ಸಾಧಿಸಿದೆ. ಸೇವಾ ವಲಯ (ಶೇ.53.6ಕ್ಕೇರಿದೆ) ಮತ್ತು ಎಂಎಸ್ಎಂಇಗಳ (ಶೇ.31ಕ್ಕಿಂತ ಹೆಚ್ಚು) ಕೊಡುಗೆ ಮಹತ್ತರವಾಗಿದೆ. ಪರಿಣಾಮ ಭಾರತ ಸೇವಾ ಆಧಾರಿತ ಆರ್ಥಿಕತೆಯತ್ತ ಸೂಪರ್ ಫಾಸ್ಟ್ ವಂದೇ ಭಾರತ್ ರೈಲಿನಂತೆ ಸಾಗುತ್ತಿದೆ.

ದೇಶಾದ್ಯಂತ ಏಕ ತೆರಿಗೆ ವ್ಯವಸ್ಥೆ ಜಿಎಸ್‌ಟಿ ಜಾರಿಗೊಳಿಸಿ ಆರ್ಥಿಕತೆ ಸ್ವರೂಪವನ್ನೇ ಬದಲಿಸಿದರು ಮೋದಿ. ತೆರಿಗೆ ಆದಾಯ ₹22 ಲಕ್ಷ ಕೋಟಿಗೇರಿದರೆ, 2026ರ ಏಪ್ರಿಲ್‌ನಲ್ಲಿ ಭಾರತದ ಜಿಎಸ್‌ಟಿ ಸಂಗ್ರಹ ಸಾರ್ವಕಾಲಿಕ ಗರಿಷ್ಠ ಮಟ್ಟ ₹2.43 ಲಕ್ಷ ಕೋಟಿಗೆ ತಲುಪಿದೆ. ಕೋವಿಡ್ ಸಂಕಷ್ಟದ ಕಾಲಘಟ್ಟದಲ್ಲಿ ಶೇ.4.8ಕ್ಕೆ ಕುಸಿದಿದ್ದ ಜಿಡಿಪಿ ಐದೇ ವರ್ಷದಲ್ಲಿ ದುಪ್ಪಟ್ಟಾಗಿದ್ದು, ಶೇ.7.7ರಷ್ಟು ಬೆಳವಣಿಗೆ ದಾಖಲಿಸಿದೆ.

ಅಗಾಧ ಮೂಲಸೌಕರ್ಯ: ಭಾರತ 2026ರ ವೇಳೆಗೆ ಮೂಲಸೌಕರ್ಯ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ತೋರಿದೆ. ಸ್ವಾತಂತ್ರ್ಯಾನಂತರವೂ ಕತ್ತಲೆಯಲ್ಲಿದ್ದ 18 ಸಾವಿರ ಕುಗ್ರಾಮಗಳಿಗೆ ವಿದ್ಯುತ್ ಬೆಳಕು ಚೆಲ್ಲಿದೆ. ರಾ.ಹೆದ್ದಾರಿ ನಿರ್ಮಾಣ 1.47 ಲಕ್ಷ ಕಿ.ಮೀ.ಗೆ ವಿಸ್ತರಿಸಿದೆ. ನಿರ್ಮಾಣ ವೇಗ 93 ಕಿ.ಮೀ.ನಿಂದ 3,052 ಕಿ.ಮೀ.ಗೆ ತಲುಪಿದೆ. 2004ಕ್ಕೆ ಹೋಲಿಸಿದರೆ ಶೇ.130ರಷ್ಟು ಅಧಿಕವಾಗಿದೆ. ರೈಲು ಜಾಲವೂ ಅಪರಿಮಿತ ವಿಸ್ತರಣೆಗೊಂಡಿದೆ. ರೈಲು ಜಾಲದ ಶೇ.99.6ರಷ್ಟು ವಿದ್ಯುದ್ದೀಕರಣ ಹಾಗೂ ದೆಹಲಿ, ಮುಂಬೈ, ಚೆನ್ನೈ, ಪುಣೆಯಂತಹ ಮಹಾನಗರಗಳಲ್ಲಿ ಹೆಚ್ಚುವರಿಯಾಗಿ 300 ಕಿ.ಮೀ. ಹೆಚ್ಚು ಹೊಸ ಮೆಟ್ರೋ ಮತ್ತು ಪ್ರಾದೇಶಿಕ ಕ್ಷಿಪ್ರ ರೈಲು ಕಾರಿಡಾರ್‌ಆರಂಭವಾಗಿದೆ.

ಜಾಗತಿಕ ರಕ್ಷಣೆಯಲ್ಲೂ ಆಪ್ತ ರಕ್ಷಕ: ಹಿಂದೂಸ್ತಾನ ಮಾತ್ರವಲ್ಲ; ಜಾಗತಿಕ ರಕ್ಷಣೆಯಲ್ಲೂ ಮೋದಿ ಆಪ್ತ ರಕ್ಷಕರು. ಕೋವಿಡ್ ಮಹಾಮಾರಿ ಆಕ್ರಮಣ ವೇಳೆ ಜಗತ್ತಿಗೇ ಕೋವಿಶೀಲ್ಡ್, ಕೋವ್ಯಾಕ್ಸಿನ್ ಲಸಿಕಾಸ್ತ್ರ ಕೊಟ್ಟು ಭಾರತವನ್ನು ಸಂಜೀವಿನಿಯಾಗಿಸಿದರು. 95 ರಾಷ್ಟ್ರಗಳಿಗೆ 65.5 ಮಿಲಿಯನ್ ಲಸಿಕೆ ರವಾನಿಸಿ ವಿದೇಶಿಗರ ಹೃದಯ ವಾಸಿಯಾದರು. ಭಾರತದ 140 ಕೋಟಿ ಜನಕ್ಕೆ ಉಚಿತ ಲಸಿಕೆ ಹಂಚಿ ಕಾಪಾಡಿದ್ದಲ್ಲದೆ, 'ವಂದೇ ಭಾರತ್ ಮಿಷನ್' ಸ್ಥಾಪಿಸಿ ವಿದೇಶದಲ್ಲಿದ್ದ 2.5 ಲಕ್ಷ ಭಾರತೀಯರನ್ನು ರಕ್ಷಿಸಿದ ಹೆಗ್ಗಳಿಕೆಗೆ ಪಾತ್ರರಾದರು.

ಪ್ರಪಂಚದ ಅತಿ ದೊಡ್ಡ ಮಿಲಿಟರಿ ಪಡೆಯೊಂದಿಗೆ ಭಾರತವನ್ನು ಸಶಕ್ತಗೊಳಿಸಿದ ಕೀರ್ತಿ ಮೋದಿ ಅವರದ್ದಾಗಿದೆ. 'ಆಪರೇಷನ್ ಸಿಂದೂರ' ಬಳಿಕ 40ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿ ರಫ್ತು ಮಾಡುತ್ತ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ ಭಾರತ. ರಕ್ಷಣಾ ವಲಯಕ್ಕೆ ₹7.85 ಲಕ್ಷ ಕೋಟಿ ಬಜೆಟ್ ಮೀಸಲಿಟ್ಟು, ರಫ್ತಿನಲ್ಲಿ ₹38,424 ಕೋಟಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದ ಭಾರತ, ರಕ್ಷಣಾ ವಲಯಕ್ಕೆ ಅತಿ ಹೆಚ್ಚು ವೆಚ್ಚ ಮಾಡುವ 5ನೇ ರಾಷ್ಟ್ರವಾಗಿದೆ.

'ಮೇಕ್ ಇನ್ ಇಂಡಿಯಾ' ಇದೀಗ ಶೇ.65ರಷ್ಟು ರಕ್ಷಣಾ ಉಪಕರಣಗಳನ್ನು ದೇಶೀಯವಾಗೇ ಉತ್ಪಾದಿಸುತ್ತಿದ್ದು, ಬ್ರಹ್ಮೋಸ್, ಆಕಾಶ್, ತೇಜಸ್ ಕ್ಷಿಪಣಿಗಳನ್ನೂ ರಫ್ತು ಮಾಡುವಷ್ಟು ಪ್ರಬಲವಾಗಿ ಬೆಳೆದಿದೆ. ಭಾರತೀಯ ಸೇನೆ ವಿಶ್ವಸಂಸ್ಥೆ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೆ, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭದ್ರತೆ ಒದಗಿಸುವಲ್ಲಿ 'ನೆಟ್ ಸೆಕ್ಯುರಿಟಿ ಪ್ರೊವೈಡರ್' ಆಗಿರುವುದು ನಮ್ಮ ರಕ್ಷಣಾ ವ್ಯವಸ್ಥೆಗೊಂದು ಹೆಮ್ಮೆಯ ಗರಿ.

ಸೌರಶಕ್ತಿಯಲ್ಲಿ 2ನೇ ಬೃಹತ್ ದೇಶ: ಅಂತಾರಾಷ್ಟ್ರೀಯ ಸೌರ ಒಕ್ಕೂಟದ ನಾಯಕತ್ವ ವಹಿಸಿಕೊಂಡ ಭಾರತ, ಸೌರಶಕ್ತಿ ಉತ್ಪಾದನೆಯಲ್ಲಿ ಅಗಾಧ ಬೆಳವಣಿಗೆ ಕಂಡಿದ್ದು, ಅಮೆರಿಕಾವನ್ನೇ ಹಿಂದಿಕ್ಕಿ ಜಾಗತಿಕವಾಗಿ 2ನೇ ಸ್ಥಾನ ಅಲಂಕರಿಸಿದೆ.

→ 4

ನೆಹರು VS ಮೋದಿ ಕಾಲ

6 ದಶಕಗಳ ಹಿಂದಿನ ನೆಹರು ಆಡಳಿತಾವಧಿ ಮತ್ತು ಪ್ರಧಾನಿ ಮೋದಿಯವರ ಪ್ರಸ್ತುತ ಆಡಳಿತಾವಧಿ ಸಾಮ್ಯತೆ ನೋಡಿದರೆ ಅಜಗಜಾಂತರವಿದೆ. ನೆಹರೂ ಯುಗ (1952-1964)ದಲ್ಲಿ ಭಾರತ ಕೇವಲ 34 ಕೋಟಿ ಜನಸಂಖ್ಯೆ ಹೊಂದಿತ್ತು. ಆದರೀಗ 146 ಕೋಟಿ ಮಿಕ್ಕಿದೆ. ಮತದಾರರೂ ಅಷ್ಟೇ 17 ಕೋಟಿ ಸನಿಹದಲ್ಲಿದ್ದ ಸಂಖ್ಯೆ 2026ರ ವೇಳೆಗೆ 96.88 ಕೋಟಿ ಮೀರಿದೆ. ಕೇವಲ 53 ರಾಜಕೀಯ ಪಕ್ಷಗಳಿದ್ದ ಸಂಖ್ಯೆ ಏಳೂವರೆ ದಶಕದಲ್ಲಿ 744ನ್ನು ದಾಟಿದೆ. ಇನ್ನು, ಅಂದಿದ್ದ ಕಾಂಗ್ರೆಸ್ ಏಕಸ್ವಾಮ್ಯ ರಾಜಕೀಯ ಸನ್ನಿವೇಶ ಸಂಪೂರ್ಣ ಬದಲಾಗಿದೆ. ಮೋದಿ ಯುಗದದಲ್ಲಿ ತೀವ್ರ ಪೈಪೋಟಿ, ಪ್ರಾದೇಶಿಕ ಪಕ್ಷಗಳ ಬಲ ಹಾಗೂ ಸಮ್ಮಿಶ್ರ ರಾಜಕಾರಣದ ಸವಾಲು ಹೀಗೆ ನೆಹರು-ನಮೋ ಯುಗಾಂತರ ಆನೆ-ಆಮೆ ಗಾತ್ರದಷ್ಟಿದೆ.

ಸೊಂಪಾದ ಪುಟಗಳು

ಮಮತಾ ರಾಜಕೀಯ ಪತನ ಕಾಂಗ್ರೆಸ್‌ಗೆ ವರದಾನ

ಜನಪಥ
ರಾಘವಶರ್ಮ ನಿಡ್ಲೆ 6

ಅಲ್ಲಿ ನೀರಲ್ಲಿ ಸಮರ, ಇಲ್ಲಿ ನೀರಿಗಾಗಿ ಸಮರ!

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನೀವು ಯಾವಾಗಲೂ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ, ಆದರೆ ನೀವು ಪ್ರತಿ ಬಾರಿಯೂ ತಪ್ಪು ನಿರ್ಧಾರಗಳಿಂದ ಪಾಠ ಕಲಿಯಬಹುದು.

ವಕ್ರತುಂಡೋಕ್ತಿ

ವೈಫೈ ಕೈಕೊಟ್ಟಾಗ ಮೊಬೈಲ್ ಡಾಟಾ ಆನ್ ಮಾಡುವುದು, ಹಳೆ ಲವರ್ ಕೈಕೊಟ್ಟಾಗ ಹೊಸಬರನ್ನು ಹುಡುಕಿದ ಹಾಗೆ.

ಉಜ್ವಲ ಯೋಜನೆ: ಸಿಲಿಂಡರ್ ಸಂಖ್ಯೆ 9 ರಿಂದ ನಾಲ್ಕಕ್ಕೆ ಇಳಿಕೆ

ದೆಹಲಿ: ಕೇಂದ್ರ ಸರಕಾರವು ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ವಾರ್ಷಿಕ ಸಬ್ಸಿಡಿ ಸಿಲಿಂಡರ್‌ಗಳ ಸಂಖ್ಯೆಯನ್ನು 9ರಿಂದ 4ಕ್ಕೆ ಕಡಿತಗೊಳಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಕೊರತೆಯಿಂದಾಗಿ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ. 2016ರಲ್ಲಿ ಯೋಜನೆ ಆರಂಭವಾದಾಗ ವರ್ಷಕ್ಕೆ 12 ಸಿಲಿಂಡರ್ ನೀಡಲಾಗುತ್ತಿತ್ತು. ಕಳೆದ ವರ್ಷ ಇದನ್ನು ಕ್ಕೆ ಇಳಿಸಲಾಗಿತ್ತು. ಈಗ ಅದನ್ನು ಮತ್ತೆ 4ಕ್ಕೆ ಕಡಿಮೆ ಮಾಡಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸನ್ಮಾನದಲ್ಲಿ ಬಂದ ಸೇಬನ್ನು ಕಚ್ಚಿ ಫ್ಯಾನ್ಸ್‌ಗೆ ಎಸೆದ ನೇತಾರ.

ಸುದ್ದಿ



ಖಾತೆ ಕ್ಯಾತೆ ದೆಹಲಿಗೆ ಶಿಫ್ಟ್

ಬಿಡಿಎ, ಜಿಬಿಎ ಇಲ್ಲದ ಬೆಂಗಳೂರು ಖಾತೆ ಒಲ್ಲದ ಕೃಷ್ಣಭೈರೇಗೌಡ ದೆಹಲಿಗೆ

ಸಚಿವರ 2ನೇ ಪಟ್ಟಿ ಅಂತಿಮಗೊಳಿಸಲು ಇಂದು ಡಿಸಿಎಂ ದೆಹಲಿಗೆ ಪಯಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ 10 ದಿನದಲ್ಲಿ ಮುಖ್ಯಮಂತ್ರಿ ಬದಲಾವಣೆಯಿಂದ ಖಾತೆ ಕ್ಯಾತೆಯವರೆಗೆ ಹತ್ತು ಹಲವು ಸವಾಲುಗಳ ಬಳಿಕ ಇದೀಗ ಎರಡನೇ ಹಂತದ ಸಂಪುಟ ವಿಸ್ತರಣೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಗೆ ಪ್ರಯಾಣಿಸಿದ್ದು, ಈ ವೇಳೆ ಖಾತೆ ಹಂಚಿಕೆ ಗೊಂದಲ, 2ನೇ ಹಂತದಲ್ಲಿ ಯಾರೆಲ್ಲ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ ಎನ್ನುವ ಬಗ್ಗೆ ಪಕ್ಷದ ಹೈಕಮಾಂಡ್ ಜತೆ ಚರ್ಚಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಮೊದಲ ಹಂತದಲ್ಲಿ ಖಾತೆ ಹಂಚಿಕೆಯ ಬಳಿಕ ಬೆಂಗಳೂರು ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ರಾಮಲಿಂಗಾರೆಡ್ಡಿ ರಾಜೀನಾಮೆ ಪ್ರಹಸನದ ಬಳಿಕ ಕೃಷ್ಣಭೈರೇಗೌಡ ಬೆಂಗಳೂರು ನಗರಾಭಿವೃದ್ಧಿ ವಹಿಸಿಕೊಳ್ಳಲು ಮೂಗುಮುರಿಯುತ್ತಿದ್ದಾರೆ. ಇನ್ನೊಂದೆಡೆ ಕೆ.ಎಚ್.ಮುನಿಯಪ್ಪ ಅವರು ರಾಹುಲ್ ಗಾಂಧಿ ಮುಂದೆ 'ಐ ಆ್ಯಮ್ ಹ್ಯಾಪಿ' ಎಂದಿದ್ದರೂ ಆಹಾರ ಇಲಾಖೆಯ ಜವಾಬ್ದಾರಿಯನ್ನು ಈವರೆಗೆ ವಹಿಸಿಕೊಂಡಿಲ್ಲ. ಆದ್ದರಿಂದ ಈ ಎಲ್ಲ ಗೊಂದಲ-ಗೋಜಲುಗಳ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಿ ಎಲ್ಲವಕ್ಕೂ ಸ್ಪಷ್ಟನೆ ಪಡೆಯುವ ಲೆಕ್ಕಾಚಾರದಲ್ಲಿ ಡಿ.ಕೆ. ಶಿವಕುಮಾರ್ ಅವರಿದ್ದಾರೆ.

ಬುಧವಾರ ಬೆಳಗ್ಗೆ 9.30ಕ್ಕೆ ಬೆಂಗಳೂರಿನಿಂದ ದೆಹಲಿಗೆ ಪ್ರಯಾಣಿಸಲಿರುವ ಡಿ.ಕೆ.ಶಿವಕುಮಾರ್, ಬಳಿಕ ಎಐಸಿಸಿ ಕಚೇರಿಗೆ ತೆರಳಲಿದ್ದಾರೆ. ಈ ವೇಳೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗಿ ಚರ್ಚಿಸಿ, ಖಾತೆ ಹಂಚಿಕೆಯ ಗೊಂದಲಗಳನ್ನು ಬಗೆಹರಿಸುವುದರೊಂದಿಗೆ, ಎರಡನೇ ಹಂತದಲ್ಲಿ ಯಾರನ್ನೆಲ್ಲ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎನ್ನುವ ಬಗ್ಗೆ ಚರ್ಚಿಸಿ ಪಟ್ಟಿ ಸಿದ್ಧಪಡಿಸಿಕೊಂಡು ಬರುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜ್ಯಸಭಾ ಚುನಾವಣೆ ಅವಿರೋಧ ಆಯ್ಕೆಯಾಗಿದ್ದು, ವಿಧಾನಪರಿಷತ್‌ಗೆ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಹುಮ್ಮಸ್ಸಿನಲ್ಲಿ ಡಿ.ಕೆ.ಶಿವಕುಮಾರ್ ಅವರಿದ್ದಾರೆ. ಈ ಎರಡೂ ಚುನಾವಣಾ ಪ್ರಕ್ರಿಯೆಯ ಬಳಿಕ ಎರಡನೇ ಹಂತದ ವಿಸ್ತರಣೆ ಮಾಡಲು ಹೈಕಮಾಂಡ್‌ನಿಂದ ಒಪ್ಪಿಗೆ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೆಹಲಿಗೆ ಕೃಷ್ಣಭೈರೇಗೌಡ: ಈ ನಡುವೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಬೇಡ ಎಂದಿರುವ ಸಚಿವ ಕೃಷ್ಣಭೈರೇಗೌಡ ಅವರಿಗೆ ರಾಜ್ಯ ನಾಯಕರಿಂದ ಸೂಕ್ತ ಸ್ಪಂದನೆ ಬಾರದಿರುವ ಬೆನ್ನಲ್ಲೇ, ತಮ್ಮ ಆಪ್ತರೊಂದಿಗೆ ದೆಹಲಿಗೆ ತೆರಳಿದ್ದಾರೆ. ಶಾಸಕರಾದ ಶ್ರೀನಿವಾಸ್ ಮಾನೆ, ರಿಜ್ವಾನ್ ಅರ್ಷದ್ ಅವರೊಂದಿಗೆ ಸೋಮವಾರ ತಡರಾತ್ರಿಯೇ ದೆಹಲಿಗೆ ತೆರಳಿರುವ ಅವರು, ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಖಾತೆಯ ಗೊಂದಲದ ಬಗ್ಗೆ ಚರ್ಚಿಸಲಿದ್ದಾರೆ. ಭೇಟಿಯ ವೇಳೆ ಪ್ರಮುಖವಾಗಿ ಈ ಹಿಂದೆ ಕಾರ್ಯನಿರ್ವಹಿಸಿದ್ದ ಕಂದಾಯ ಖಾತೆಯನ್ನೇ ಮರಳಿ ನೀಡುವಂತೆ ಒತ್ತಡ ಹೇರಲಿದ್ದಾರೆ. ಒಂದು ವೇಳೆ ಕಂದಾಯ ನೀಡಲು ಸಾಧ್ಯವಾಗದಿದ್ದರೆ ಬೆಂಗಳೂರು ನಗರಾಭಿವೃದ್ಧಿ ಖಾತೆಯ ಬದಲಿಗೆ ಬೇರೆ ಖಾತೆ ನೀಡುವಂತೆ ಮನವಿ ಮಾಡಲಿದ್ದಾರೆ. ಇದು ಸಾಧ್ಯವಾಗದೇ ಹೋದರೆ, ಬಿಡಿಎ, ಬಿಎಂಆರ್‌ಡಿಎಲ್‌ನೊಂದಿಗೆ ಬೆಂಗಳೂರಿನ ಸಮಗ್ರ ಇಲಾಖೆಗಳನ್ನು ತಮಗೆ ನೀಡಬೇಕು ಎನ್ನುವ ಬೇಡಿಕೆ ಸಲ್ಲಿಸಲಿದ್ದಾರೆ. ಈ ಮೂರರಲ್ಲಿ ಯಾವುದಕ್ಕೂ ಹೈಕಮಾಂಡ್ ಒಪ್ಪದೇ ಹೋದರೆ ಕೃಷ್ಣಭೈರೇಗೌಡ ಅವರು ಏನು ಮಾಡಲಿದ್ದಾರೆ ಎನ್ನುವುದು ಈಗಿರುವ ಕುತೂಹಲ.

ಹಿರಿಯ ಅಧಿಕಾರಿಗಳ ಜತೆ ಡಿನ್ನರ್ ಪಾರ್ಟಿ

ದೆಹಲಿಗೆ ತೆರಳಲಿರುವ ಡಿ.ಕೆ.ಶಿವಕುಮಾರ್ ಬುಧವಾರ ಬೆಳಗ್ಗೆಯೇ ಎಐಸಿಸಿ ಕಚೇರಿ, ನಾಯಕರನ್ನು ಭೇಟಿಯಾಗಲಿದ್ದಾರೆ. ರಾತ್ರಿ ಕರ್ನಾಟಕ ಭವನದಲ್ಲಿ ಹಿರಿಯ ಐಎಎಸ್ ಅಧಿಕಾರಿಗಳೊಂದಿಗೆ ಡಿನ್ನರ್ ಸಭೆ ನಡೆಸಲಿದ್ದಾರೆ ಎನ್ನಲಾಗಿದೆ. ಈ ಸಭೆಯಲ್ಲಿ ಕರ್ನಾಟಕ ಕೆಡರ್ ಹಾಗೂ ಇತರೆ ರಾಜ್ಯದ ಕೆಡರ್‌ನ ಕರ್ನಾಟಕದ ಮೂಲಕ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಐಎಎಸ್ ಅಧಿಕಾರಿಗಳೊಂದಿಗೆ ಸಭೆ ನಡೆಸುವ ಸಾಧ್ಯತೆಯಿದೆ. ಈ ವೇಳೆ ಅನುದಾನ ಹಂಚಿಕೆ, ಕಾಮಗಾರಿಗಳಿಗೆ ವೇಗ ಸೇರಿದಂತೆ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು ಪಡೆಯಲಿದ್ದಾರೆ ಎನ್ನಲಾಗಿದೆ.

ನೀತಿ ಆಯೋಗದ ಸಭೆಯಲ್ಲಿ ಭಾಗಿ

ದೆಹಲಿ ಪ್ರವಾಸದಲ್ಲಿರುವ ಡಿ.ಕೆ. ಶಿವಕುಮಾರ್ ಅವರು ನೀತಿ ಆಯೋಗದ ಸಭೆಯಲ್ಲಿ ಗುರುವಾರ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆಯಲಿರುವ ಈ ಸಭೆಗೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಅಧಿಕೃತ ಆಹ್ವಾನವಿರುತ್ತದೆ. ಕಳೆದ ವರ್ಷ ನಡೆದ ಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಸೇರಿದಂತೆ ಪಿಣರಾಯಿ ವಿಜಯ್, ಮಮತಾ ಬ್ಯಾನರ್ಜಿ ಸಭೆಗೆ ಗೈರಾಗಿದ್ದರು. ಆದರೀಗ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಸರಕಾರದೊಂದಿಗೆ ಉತ್ತಮ ಬಾಂಧವ್ಯದ ಮೂಲಕ ಹೆಚ್ಚುವರಿ ಅನುದಾನದ ನಿರೀಕ್ಷೆಯಲ್ಲಿರುವುದರಿಂದ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎನ್ನಲಾಗಿದೆ.

ಪ್ರತಿಭಟನಾಕಾರರ ಮೇಲೆ ಸೇನೆ ದೌರ್ಜನ್ಯ

ಪಿಓಕೆಯಲ್ಲಿ ಪಾಕಿಸ್ತಾನ ನರಮೇಧ: 35 ಜನ ಸಾವು

ಮುಜಾಫರಬಾದ್: (ಪಿಓಕೆ): ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರ (ಪಿಓಜೆಕೆ)ದ ಅಸೆಂಬ್ಲಿಯಲ್ಲಿ ಕಾಶ್ಮೀರಿಯೇತರರಿಗೆ ಸೀಟು ಮೀಸಲಿರಿಸುವ ಪಾಕ್ ಸರಕಾರದ ನಿರ್ಧಾರವನ್ನು ಖಂಡಿಸಿ ಆರಂಭವಾದ ಹಿಂಸೆ ಇಡೀ ಪ್ರಾಂತ್ಯಕ್ಕೆ ಹರಡಿದೆ. ಸೇನೆಯ ದಾಳಿಗೆ ಪಿಓಕೆಯ 30ಕ್ಕೂ ಹೆಚ್ಚು ಬಲಿಯಾಗಿದ್ದಾರೆ.

ಪಾಕ್ ನಡೆ ಖಂಡಿಸಿ ಪ್ರತಿಭಟನೆಗಿಳಿದಿದ್ದ ಸಾಮಾಜಿಕ-ರಾಜಕೀಯ ಸಂಘಟನೆ ಜಂಟಿ ಅವಾಮಿ ಕ್ರಿಯಾ ಸಮಿತಿಯನ್ನು ಅಧಿಕಾರಿಗಳು ನಿಷೇಧಿಸಿದ ನಂತರ ಹಿಂಸಾಚಾರ ಭುಗಿಲೆದ್ದಿದೆ. ಜೂನ್ 9 ರಂದು ಆಯೋಜಿಸಿದ್ದ ಬಂದ್‌ಗೆ ಮುನ್ನ ರಾವಲಕೋಟ್‌ನಲ್ಲಿ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವಿನ ಘರ್ಷಣೆಯಲ್ಲಿ 30ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. 70 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಸುದ್ದಿಸಂಸ್ಥೆಗಳು ವರದಿ ಮಾಡಿವೆ.

→ 4

ಪಾಕ್ ಕ್ರೌರ್ಯಕ್ಕೆ ಭಾರತ ಖಂಡನೆ

ದೆಹಲಿ: ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರ ಮೇಲೆ ಬಹಿರಂಗವಾಗಿ ಗುಂಡು ಹಾರಿಸಿ 30ಕ್ಕೂ ಜನರ ಸಾವು ನೋವಿಗೆ ಕಾರಣವಾಗಿ ರುವ ಘಟನೆ ಯನ್ನು ಭಾರತ ಖಂಡಿಸಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಪಾಕ್ ಪೊಲೀಸರ ಭೀಕರ ದಾಳಿಗಳ ಬಗ್ಗೆ ವರದಿಗಳಿವೆ. ಇದರಲ್ಲಿ ಹಲವಾರು ಪ್ರತಿಭಟ ನಾಕಾರರು ಸಾವನ್ನಪ್ಪಿದ್ದು ಇತರರು ಗಾಯಗೊಂಡಿ ದ್ದಾರೆ. ಅಂತರರಾಷ್ಟ್ರೀಯ ಸಮುದಾಯವು ಪಾಕಿಸ್ತಾ ನವನ್ನು ತನ್ನ ದುಷ್ಕೃತ್ಯಗಳು ಮತ್ತು ದೌರ್ಜನ್ಯಗಳಿಗೆ ಹೊಣೆಗಾರರನ್ನಾಗಿ ಮಾಡುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರರು ತಿಳಿಸಿದ್ದಾರೆ.

ಹೆಚ್-1 ಬಿ ಶುಲ್ಕ: ಕಾನೂನುಬಾಹಿರ

ವಾಷಿಂಗ್ಟನ್: ಕಳೆದ ಸೆಪ್ಟೆಂಬರ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿದೇಶಿ ಕಾರ್ಮಿಕರ ಎಚ್-1ಬಿ ವೀಸಾಕ್ಕೆ ವಿಧಿಸಿದ್ದ

1,00,000 ಡಾಲರ್ ಶುಲ್ಕವನ್ನು ಅಮೆರಿಕ ಫೆಡರಲ್ ನ್ಯಾಯಾಲಯ ರದ್ದುಗೊಳಿಸಿದೆ. ಈ ಕುರಿತು 20 ಡೆಮಾಕ್ರಟಿಕ್ ರಾಜ್ಯ ಅಟಾರ್ನಿ ಜನರಲ್ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಬೋಸ್ಟನ್‌ನಲ್ಲಿನ ಯುಎಸ್ ಜಿಲ್ಲಾ ನ್ಯಾಯಾಲಯ ಕಾಂಗ್ರೆಸ್‌ನ ನಿಯೋಗವಿಲ್ಲದೆ ಜಾರಿಗೊಳಿಸಿರುವ ಈ ನೀತಿಯು ಕಾನೂನು ಬಾಹಿರವಾಗಿದೆ ಎಂದು ಹೇಳಿದೆ. ನ್ಯಾಯಾಧೀಶ ಲಿಯೋ ಸೊರೊಕಿನ್ ಅವರು ಈ ಕುರಿತು ತೀರ್ಪು ನೀಡಿದ್ದು, ಕಾಂಗ್ರೆಸ್‌ಗೆ ಅಧಿಕಾರ ನೀಡದ ಶುಲ್ಕವು ಕಾನೂನು ಬಾಹಿರ ತೆರಿಗೆಯಾಗಿದೆ. ಹೀಗಾಗಿ ಹೆಚ್ಚು ಕೌಶಲ ಹೊಂದಿರುವ ವಿದೇಶಿ ಕಾರ್ಮಿ ಕರಿಗೆ ಹೊಸ ಶುಲ್ಕವನ್ನು ಫೆಡರಲ್ ನ್ಯಾಯಾಲಯ ರದ್ದುಗೊಳಿಸಿದೆ ಎಂದು ತಿಳಿಸಿದ್ದಾರೆ.

ಅಮೆರಿಕ ಸರಕಾರ ಪ್ರತಿ ವರ್ಷ ಸುಮಾರು 65,000 ಹೆಚ್-1ಬಿ ವೀಸಾವನ್ನು ನೀಡುತ್ತದೆ. ಇದರಲ್ಲಿ ಪದವಿ ಹೊಂದಿರುವ ಕಾರ್ಮಿಕರಿಗೆ 20,000 ವೀಸಾಗಳನ್ನು ಮೂರರಿಂದ ಆರು ವರ್ಷಗಳವರೆಗೆ ಅನುಮೋದಿಸಲಾಗುತ್ತದೆ. ವಿದೇಶಿ ಉದ್ಯೋಗಿಗೆ ವೀಸಾ ನೀಡ ಬಯಸುವ ಉದ್ಯೋಗದಾತರು ಸುಮಾರು 2,000 ಡಾಲರ್‌ನಿಂದ 5,000 ಡಾಲರ್ ವರೆಗೆ ಶುಲ್ಕ ಪಾವತಿಸಬೇಕಾಗಿತ್ತು.

ಚುನಾವಣೆ ಖಚಿತ: 7ನೇ ಸ್ಥಾನಕ್ಕೆ ಜಿದ್ದಾಜಿದ್ದಿ

ಮೇಲ್ಮನೆಗೆ ಎಲ್ಲ 8 ನಾಮಪತ್ರ ಊರ್ಜಿತ

ಬೆಂಗಳೂರು: ಭಾರಿ ಕುತೂಹಲ ಮೂಡಿಸಿರುವ ವಿಧಾನಪರಿಷತ್ ಚುನಾವಣೆಯ ಕಣದಲ್ಲಿ ಎಂಟು ಅಭ್ಯರ್ಥಿಗಳು ಉಳಿಯುವ ಮೂಲಕ 18ಕ್ಕೆ ಚುನಾವಣೆ ನಡೆಯುವುದು ಖಚಿತವಾಗಿದೆ. ಮಂಗಳವಾರ ನಾಮಪತ್ರ ಪರಿಶೀಲಿಸಿರುವ ಚುನಾವಣಾಧಿಕಾರಿಗಳು ಎಂಟು ನಾಮಪತ್ರ ಗಳನ್ನು ಊರ್ಜಿತಗೊಳಿಸಿದ್ದಾರೆ. ಈ ಮೂಲಕ ಏಳನೇ ಸ್ಥಾನಕ್ಕೆ ಆಡಳಿತ-ಪ್ರತಿಪಕ್ಷದ ನಡುವೆ ತೀವ್ರ ಪೈಪೋಟಿ ನಡೆಯುವುದು ಖಚಿತವಾಗಿದೆ. ಕಾಂಗ್ರೆಸ್‌ನಿಂದ ಬಿ.ಕೆ.ಹರಿಪ್ರಸಾದ್, ಶಿವಣ್ಣ, ಪಿ.ವಿ. ಮೋಹನ್, ತಿಪ್ಪಣ್ಣಪ್ಪ ಕಮಕನೂರ ಹಾಗೂ ವಿನಯ್ ಕಾರ್ತಿಕ್ ಕಣದಲ್ಲಿದ್ದರೆ, ಬಿಜೆಪಿಯಿಂದ ಲಿಂಗರಾಜ ಪಾಟೀಲ್ ಹಾಗೂ ರಘು ಕೌಟಿಲ್ಯ, ಜೆಡಿಎಸ್‌ನಿಂದ ಗೋವಿಂದರಾಜು ಅವರು ಕಣದಲ್ಲಿದ್ದಾರೆ. ಕಾಂಗ್ರೆಸ್ ಐದನೇ ಅಭ್ಯರ್ಥಿಯಾಗಿರುವ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್‌ನ ಗೋವಿಂದರಾಜು ಅವರಿಗೆ ಶಾಸಕರನ್ನು ಸೆಳೆಯುವ ಟಾಸ್ಕ್ ಇದ್ದು, ಇದರಲ್ಲಿ ಯಾರು ಯಶಸ್ವಿಯಾಗುವರೋ ಅವರು ಪರಿಷತ್ ಪ್ರವೇಶಿಸಲಿದ್ದಾರೆ.

ರಾಜ್ಯಸಭೆಗೆ ಅವಿರೋಧ ಆಯ್ಕೆ ಬಹುತೇಕ ಖಚಿತ

ಇನ್ನು ರಾಜ್ಯದಿಂದ ಆಯ್ಕೆಯಾಗಲಿರುವ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ನಾಲ್ಕು ಮಂದಿ ನಾಮಪತ್ರ ಸಲ್ಲಿಸಿದ್ದು, ನಾಲ್ವರ ನಾಮಪತ್ರವೂ ಊರ್ಜಿತವಾಗಿರುವುದರಿಂದ ಅವಿರೋಧ ಆಯ್ಕೆಯಾಗುವುದು ಖಚಿತವಾಗಿದೆ.

ನಗರದಲ್ಲಿ ಮತ್ತೆ ಜಿಲೆಟಿನ್ ಕಡ್ಡಿ ಪತ್ತೆ

ಬೆಂಗಳೂರು: ನಗರದ ಹೊರವಲಯದ ಅವಲಹಳ್ಳಿ ಠಾಣೆ ವ್ಯಾಪ್ತಿಯ ನಿರ್ಜನ ಪ್ರದೇಶದಲ್ಲಿ ಭಾರೀ ಪ್ರಮಾಣದ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದು, ಆತಂಕದ ವಾತಾವರಣ ಸೃಷ್ಟಿಯಾಗಿದೆ. ಜಿಲೆಟಿನ್ ಕಡ್ಡಿಗಳು, ವಯರ್‌ಗಳು ಪತ್ತೆಯಾಗಿದ್ದು, ಘಟನಾ ಸ್ಥಳಕ್ಕೆ ಅವಲಹಳ್ಳಿ ಪೊಲೀಸರು ಹಾಗೂ ವಿಧಿ ವಿಜ್ಞಾನದ ಅಧಿಕಾರಿಗಳು ಭೇಟಿ ನೀಡಿ ಅವುಗಳನ್ನು ವಶಕ್ಕೆ ಪಡೆದಿದ್ದಾರೆ.

ಕನಕಪುರ ರಸ್ತೆಯಲ್ಲಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಕಳೆದ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಆಗಮಿಸಿದ್ದ ಸಂದರ್ಭದಲ್ಲಿಯೂ ಅವರ ಸಂಚರಿಸುವ ಮಾರ್ಗದ ಸಮೀಪದಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಪ್ರಧಾನಿಗಳ ಆಗಮನಕ್ಕೂ ಎರಡು ಗಂಟೆಗಳ ಮುನ್ನ ಬೆಂಗಳೂರು ದಕ್ಷಿಣ ತಾಲೂಕಿನ ವಡೇರಹಳ್ಳಿ ಗೇಟ್ ಸಮೀಪದಲ್ಲಿ ಅನುಮಾನಾಸ್ಪದ ಬಾಕ್ಸ್ ಒಂದು ಪತ್ತೆಯಾಗಿತ್ತು. ಇದೀಗ ಮತ್ತೊಮ್ಮೆ ಇದೇ ರೀತಿ ಜಿಲೆಟಿನ್ ಕಡ್ಡಿ ಪತ್ತೆಯಾಗಿರುವುದು ಬೆಂಗಳೂರು ಪೊಲೀಸರಿಗೆ ತಲೆನೋವಾಗಿದೆ. ಈ ಜಿಲೆಟಿನ್ ಕಡ್ಡಿ ಕಲ್ಲು ಕ್ವಾರಿಯಲ್ಲಿ ಬಳಸಲು ತಂದಿರುವ ಶಂಕೆ ವ್ಯಕ್ತವಾಗಿದೆ. ಅವಲಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೀನಾಕ್ಷಿ ನಾಮಪತ್ರ ತಿರಸ್ಕಾರ: ಕಾಂಗ್ರೆಸ್ ಶಾಸಕರ ಬೆಂಗಳೂರು ಪ್ರಯಾಣ ರದ್ದು

ಭೋಪಾಲ್: ಮಧ್ಯಪ್ರದೇಶದಿಂದ ರಾಜ್ಯಸಭಾ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಅವರ ನಾಮ

ಪತ್ರವನ್ನು ಸೋಮವಾರ ತಿರಸ್ಕರಿಸಲಾಗಿದ್ದು, ಅವರ ನಾಮಪತ್ರದೊಂದಿಗೆ ಸಲ್ಲಿಸಲಾದ ಅಫಿಡವಿಟ್‌ನಲ್ಲಿ ಮಾಹಿತಿಯೊಂದನ್ನು ಮರೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಟರಾಜನ್ ಅವರ ಉಮೇದುವಾರಿಕೆಯನ್ನು ರದ್ದುಗೊಳಿಸುವಂತೆ ಕೋರಿ ಬಿಜೆಪಿ ನಾಯಕರು ಚುನಾವಣಾಧಿಕಾರಿಯ ಮುಂದೆ ಔಪಚಾರಿಕ ಆಕ್ಷೇಪಣೆ ಸಲ್ಲಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ.

ತೆಲಂಗಾಣದಲ್ಲಿ ಬಾಕಿ ಇರುವ ನ್ಯಾಯಾಲಯದ ಪ್ರಕರಣದ ವಿವರಗಳನ್ನು ಕಾಂಗ್ರೆಸ್ ನಾಯಕಿ ತಮ್ಮ ಚುನಾವಣಾ ಅಫಿಡವಿಟ್‌ನಲ್ಲಿ ಬಹಿರಂಗಪಡಿಸಲು ವಿಫಲರಾಗಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಕಾಂಗ್ರೆಸ್ ಈ ಆಕ್ಷೇಪಣೆಯನ್ನು ಬಲ ವಾಗಿ ವಿರೋ ಧಿಸಿ ಅದನ್ನು ಆಧಾರ ರಹಿತ ಎಂದು ಕರೆದಿದೆ. ಪ್ರತಿಪಕ್ಷ ನಾಯಕ ಉ ಮಾಂಗ್ ಸಿಂಘರ್ ಮತ್ತು ಇತರ ಪಕ್ಷದ ನಾಯಕರು ನಟರಾಜನ್ ಯಾವುದೇ ಕ್ರಿಮಿನಲ್ ಪ್ರಕರಣವನ್ನು ಎದುರಿಸುತ್ತಿಲ್ಲ ಎಂದಿದ್ದಾರೆ.

ತನ್ನ ಶಾಸಕರನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟು ಪಕ್ಷದ ಅಭ್ಯರ್ಥಿಯ ಗೆಲುವನ್ನು ಖಾತರಿಪಡಿಸುವ ಯೋಜನೆ ಕಾಂಗ್ರೆಸ್‌ನದ್ದಾಗಿತ್ತು. ಅದಕ್ಕಾಗಿ ಬಿಡದಿಯ ಈಗಲ್‌ಟನ್ ರೆಸಾರ್ಟ್ ಅನ್ನೂ ಕಾಯ್ದಿರಿಸಲಾಗಿತ್ತು. ಆದರೆ ಮೀನಾಕ್ಷಿ ನಟರಾಜನ್ ಅವರ ರಾಜ್ಯಸಭಾ ನಾಮಪತ್ರ ತಿರಸ್ಕಾರ ಆಗುವುದರೊಂದಿಗೆ ಬಿಜೆಪಿ ಅಭ್ಯರ್ಥಿಗಳು ಮಧ್ಯಪ್ರದೇಶದ ಎಲ್ಲಾ ಮೂರು ಸ್ಥಾನಗಳಲ್ಲೂ ಅವಿರೋಧವಾಗಿ ಆಯ್ಕೆ ಆಗುವುದು ಖಚಿತವಾಗಿದ್ದು, ಅಲ್ಲಿನ ಕಾಂಗ್ರೆಸ್ ಶಾಸಕರ ನಿಗದಿತ ಬೆಂಗಳೂರು ಪ್ರಯಾಣವು ರದ್ದಾಗಿದೆ.

ಗೌಡರು ರಾಜ್ಯಸಭೆಗೆ ಮರು ಆಯ್ಕೆ ಬಯಸಿರಲಿಲ್ಲ: ಕುಮಾರಸ್ವಾಮಿ ಸ್ಪಷ್ಟನೆ

ಹುಳಿ ಹಿಂಡಬೇಡಿ: ಸಿಎಂಗೆ ಎಚ್‌ಡಿಕೆ ಟಾಂಗ್

ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ರಾಜ್ಯ ಸಭೆ ಟಿಕೆಟ್ ಕೈ ತಪ್ಪಿರುವ ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ರಾಜಕೀಯ ಸಮರ ಮುಂದುವರಿದಿದ್ದು, ದೇವೇಗೌಡರ ರಾಜಕೀಯ ಜೀವನದುದ್ದಕ್ಕೂ ಕಾಂಗ್ರೆಸ್ ಕಿರುಕುಳ ನೀಡಿದೆ ಎಂದು ಬಿಜೆಪಿ ಕಿಡಿಕಾರಿದೆ. ಈ ಮಧ್ಯೆ ಮಾಜಿ ಸಿಎಂಗಳ ಮನೆಗೆ ಭೇಟಿ ನೀಡುತ್ತಿರುವ ಸಿಎಂ ಡಿಕೆಶಿ ಕ್ರಮವನ್ನು ಪರೋಕ್ಷವಾಗಿ ಟೀಕಿಸಿರುವ ಎಚ್‌ಡಿಕೆ 'ಅತಿ ವಿನಯಂ ಧೂರ್ತ ಲಕ್ಷಣಂ' ಎಂದು ಹೇಳುವ ತಮ್ಮಿಬ್ಬರ ಭೇಟಿ ಸಾಧ್ಯತೆ ಯನ್ನು ಪರೋಕ್ಷವಾಗಿ ತಳ್ಳಿಹಾಕಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ದೇವೇಗೌಡರ ಬಗ್ಗೆ ಕಾಂಗ್ರೆಸಿಗರಿಗೆ ಈಗ ಅನುಕಂಪ ಬಂದಿದೆ.



ಬಿಜೆಪಿ, ಜೆಡಿಎಸ್ ಮೈತ್ರಿಯಲ್ಲಿ ಬಿರುಕು ತರಲು ಕಾಂಗ್ರೆಸ್ ಪ್ರಯತ್ನ ಮಾಡುತ್ತಿದ್ದು, ರಾಜ್ಯಸಭೆ ಟಿಕೆಟ್‌ಗೆ ದೇವೇಗೌಡರು ಅರ್ಜಿಯೇ ಹಾಕಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ನೀಡಿದ್ದಾರೆ. ಅಲ್ಲದೆ, ಮೈತ್ರಿ ಪಕ್ಷವಾಗಿರೋ ಜೆಡಿಎಸ್ ಹಿರಿಯ ನಾಯಕನನ್ನೇ ನಿರ್ಲಕ್ಷ್ಯ ಮಾಡಿದ ಬಿಜೆಪಿ ಎಂದು ಕಾಂಗ್ರೆಸ್ ನಾಯಕರು ವ್ಯಂಗ್ಯ ಮಾಡಿದ್ದರು. ಇದಕ್ಕೆ ಮಂಡ್ಯದಲ್ಲಿ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ದೇವೇಗೌಡರು ಅಧಿಕಾರಕ್ಕಾಗಿ ಯಾರ ಮನೆ ಬಾಗಿಲಿಗೂ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದವರು ಎಂದು ತಂದೆಯ ಬದುಕಿನ ಹಾದಿಯನ್ನು ಮೆಲುಕು ಹಾಕಿದ್ದಾರೆ.

ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ: ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲ ವಿಚಾರಕ್ಕೆ ಸಂಬಂಧಿಸಿ ಮಾತಾಡಿದ ಕುಮಾರಸ್ವಾಮಿ, ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ ಎಂದಿಲ್ಲ. ದೇವೇಗೌಡರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ. ಒಕ್ಕಲಿಗ ಸಿಎಂ ಇರಬೇಕಾದ್ರೆ, ರಾಜ್ಯಸಭೆ ತಗೊಂಡು ಏನ್ಮಾಡ್ತೀರಾ? ಎರಡು ತಿಂಗಳು ಕಾದು ನೋಡುವ ಏನು ಮಾಡುತ್ತಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

→ 4

...ಧೂರ್ತ ಲಕ್ಷಣಂ

ಕುಮಾರಸ್ವಾಮಿ ಸಲಹೆ ಕೇಳುವುದಾಗಿ ಸಿಎಂ ಡಿಕೆಶಿ ಹೇಳಿರುವ ವಿಚಾರ ಸಂಬಂಧ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ನಾನೇನು ಸಲಹೆ ನೀಡಲಿ, ಕುಮಾರಸ್ವಾಮಿ ಎರಡು ಬಾರಿ ಸಿಎಂ ಆಗಿ ಏನು ಹರಿದಿದ್ದಾರೆ ಅಂತ ಪ್ರಶ್ನೆ ಮಾಡಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೆ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನ ಬಳಿ ಏನು ಸಲಹೆ ಕೇಳುತ್ತಾರೆ, ಅವರಿಗೆ ಫೋಟೋ ಬೇಕಿದೆ, ಅದಕ್ಕೆ ಎಲ್ಲೆಡೆ ಹೋಗುತ್ತಿದ್ದಾರೆ. ಅತಿ ವಿನಯಂ ಧೂರ್ತ ಲಕ್ಷಣಂ' ಎಂದು ಕಿಡಿ ಕಾರಿದರು. ವಿಧಾನಪರಿಷತ್‌ಗೆ ಜೆಡಿಎಸ್‌ನಿಂದ ಅಭ್ಯರ್ಥಿ ಕಣಕ್ಕಿಳಿಸಿದ್ದು, ನಮಗೂ ಎರಡು ಮತ ಬೇಕು.

ಎಂಜಿನಿಯರಿಂಗ್ ವಿದ್ಯಾರ್ಥಿ ಶಂಕಾಸ್ಪದ ಸಾವು

ಬಳ್ಳಾರಿ: ಎಂಜಿನಿಯರಿಂಗ್ ವಿದ್ಯಾರ್ಥಿ ಅನುಮಾನಾಸ್ಪದವಾಗಿ ನೇಣುಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾದ ಘಟನೆ ಬಳ್ಳಾರಿಯಲ್ಲಿ ನಡೆದಿದೆ. ಸಿರಗುಪ್ಪ ತಾಲೂಕಿನ ಟಿ.ರಾಂಪುರದ ವಿಶ್ವನಾಥ್ (24) ಮೃತ ವಿದ್ಯಾರ್ಥಿ. ಬಳ್ಳಾರಿಯ ಕಾಲೇಜುವೊಂದರಲ್ಲಿವ್ಯಾಸಂಗ ಮಾಡುತ್ತಿದ್ದ. ಪಿಜಿ ಕೊಠಡಿಯಲ್ಲಿ ಶವ ಪತ್ತೆಯಾದ್ದು, ತಲೆ, ಎದೆ ಭಾಗದಲ್ಲಿ ಗಾಯಳಿವೆ. ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ- 562114
ಸಹಾಯವಾಣಿ : 27931759, ದೂರವಾಣಿ : 27931221,
Email: itstaff_ulb_hosakote@yahoo.com Web Site.www.hosakotecity.mrc.gov.in
ನಂ:ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/08/2026-27 ದಿನಾಂಕ: 09.06.2026

"ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಕೆ.ಟಿ.ಪಿ.ಪಿ. ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2026-27ನೇ ಸಾಲಿನ ನಗರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 02 ರ ಪ್ರಕಾರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಿರಿಸಿರುವ ವರ್ಗ
01	DMA/2026-27/EL/WORK_INDENT59522	49.00	Others
02	DMA/2026-27/OW/WORK_INDENT58512	49.00	Others
03	DMA/2026-27/BD/WORK_INDENT58179	49.00	Others

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **17.06.2026** ರ ಸಂಜೆ **5:30** ಗಂಟೆಯವರೆಗೆ ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **19.06.2026 ರ ಬೆಳಿಗ್ಗೆ 11.00 ಗಂಟೆಗೆ** ನಿಗಧಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/#/portal/portal-home ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/-
ಪೌರಾಯುಕ್ತರು
ನಗರಸಭೆ, ಹೊಸಕೋಟೆ
ವಾಸಾಸಂಇ/ವಾ.ಪ್ರ/1077/ಶಿರಡಿ ಸಾಯಿ/2026-27

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು - 560 011
ಸಂ. ಸಅಸಂ/ಬೆದನಪಾ/ಟೆಂಡರ್/ಪಿಆರ್/02/2026-27 ದಿನಾಂಕ : 08-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ-2
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಬೆದನಪಾ ಇವರ ಪರವಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆದನಪಾ, ಬೆಂಗಳೂರು ಇವರು ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ಸೇವೆಗಳಿಗಾಗಿ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ಅರಣ್ಯ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿಲಕೋಟೆ ವ್ಯವಸ್ಥೆಯಲ್ಲಿ ಸೇವೆ ಕರೆ-2 ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು
1	ಜಯನಗರ ವಿಧಾನಸಭಾ ಕ್ಷೇತ್ರ (ವಾರ್ಡ್ ಸಂ.7, 8, 9, 10 ಮತ್ತು 11) ರ್‍ಯಾಪಿಡ್ ರೆಸ್ಪಾನ್ಸ್ ಟೀಮ್. **ಇಂಡೆಂಟ್ ಸಂ.** ಬಿಎಸ್‌ಸಿ/2025-26/ಎಸ್‌ಇ0073/ಕರೆ-2. **ಅಂದಾಜು ಮೊತ್ತ** : ರೂ.21,25,000/- **ಇಎಂಡಿ** : ರೂ.50,000/-
2	ಜಯನಗರ ವಿಧಾನಸಭಾ ಕ್ಷೇತ್ರ (ವಾರ್ಡ್ ಸಂ.12, 13, 14, 15 ಮತ್ತು 16) ರ್‍ಯಾಪಿಡ್ ರೆಸ್ಪಾನ್ಸ್ ಟೀಮ್. **ಇಂಡೆಂಟ್ ಸಂ.** ಬಿಎಸ್‌ಸಿ/2025-26/ಎಸ್‌ಇ0074/ಕರೆ-2. **ಅಂದಾಜು ಮೊತ್ತ** : ರೂ.21,25,000/- **ಇಎಂಡಿ** : ರೂ.50,000/-

ವೇಳಾಪಟ್ಟಿ : (1) ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಿಂದ ಆರ್‌ಎಫ್‌ಪಿ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭಿಕ ದಿನಾಂಕ : **11-06-2026 ರಿಂದ (2)** ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **15-06-2026** ರಂದು ಸಂಜೆ **5:00** ಗಂಟೆಯವರೆಗೆ **(3)** ಕೆಪಿಪಿ ಪೋರ್ಟಲ್‌ನಲ್ಲಿ ಆರ್‌ಎಫ್‌ಪಿಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **20-06-2026** ರಂದು ಸಂಜೆ **5:00** ಗಂಟೆಯವರೆಗೆ **(4)** ಕೆಪಿಪಿ ಪೋರ್ಟಲ್‌ನಲ್ಲಿ ಆರ್‌ಎಫ್‌ಪಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : **22-06-2026** ರಂದು ಸಂಜೆ **5:10** ಗಂಟೆ **(5)** ಆನ್‌ಲೈನ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್‌ನ ಅನುಮೋದನೆಯಾದಾಗ **(6)** ಆರ್‌ಎಫ್‌ಪಿ ತೆರೆಯುವ ಸ್ಥಳ : ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ **(7)** ಸಂಪರ್ಕಿಸುವ ವಿಳಾಸ : ಎಸಿಎಫ್ ರವರ ಕಛೇರಿ, ಬೆದನಪಾ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಪಾಲಿಕೆ ಕಟ್ಟಡ, ಬೆಂಗಳೂರು - 560011. ಇಮೇಲ್ : acfbbmpsouth@yahoo.co.in
ದೂ : 7019464699

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ದಕ್ಷಿಣ ನಗರ ಪಾಲಿಕೆ

ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿಕೆಶಿ, ಸುರ್ಜೇವಾಲಾ ಅಂತಿಮ ದರ್ಶನ

ಸರಕಾರಿ ಗೌರವಗಳೊಂದಿಗೆ ಸೂರಜ್ ಹೆಗ್ಡೆ ಅಂತ್ಯಕ್ರಿಯೆ

ಬೆಂಗಳೂರು: ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಮಂಗಳವಾರ ಸರಕಾರಿ ಗೌರವಗಳೊಂದಿಗೆ ಭಾವಪೂರ್ಣ ಅಂತಿಮ ವಿದಾಯ ಸಲ್ಲಿಸಲಾಯಿತು.

ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸೂರಜ್ ಹೆಗ್ಡೆ ಅವರಿಗೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ಸಿಎಂ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರುಗಳು ಬಿಇಎಲ್ ರಸ್ತೆ ನಿವಾಸದಲ್ಲಿ ಅಂತಿಮ ನಮನ ಸಲ್ಲಿಸಿದರು.

ರಾಹುಲ್ ಗಾಂಧಿ ಅವರು ಸೂರಜ್ ಹೆಗ್ಡೆ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಪುಷ್ಪ ನಮನ ಸಲ್ಲಿಸಿದರು. ಸೂರಜ್ ಹೆಗ್ಡೆ ಅವರ ಪತ್ನಿ ಶಿಲ್ಪಾ, ಪುತ್ರರಾದ ಸಮೃದ್ಧ್, ವಿಶ್ರುತ್ ಹಾಗೂ ಕುಟುಂಬ ಸದಸ್ಯರಿಗೆ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಸಾಂತ್ವನ ಹೇಳಿದರು. ನಂತರ ಸೂರಜ್ ಹೆಗ್ಡೆ ಅವರ ನಿವಾಸದ ಬಳಿಯೇ ಸಕಲ ಸರಕಾರಿ ಗೌರವ ಅರ್ಪಿಸಲಾಯಿತು.

ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಪೊಲೀಸ್ ಬಂದೂಕು ಪಡೆ ಗೌರವ ಸಲ್ಲಿಸಿತು. ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂರಜ್ ಅವರ ಪತ್ನಿ ಶಿಲ್ಪಾ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು. ಇಡೀ ಪಕ್ಷ ನಿಮ್ಮ ದುಃಖದಲ್ಲಿ ಭಾಗಿಯಾಗಿದೆ, ನಿಮ್ಮ ಕುಟುಂಬದ ಜತೆ ನಾವಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಸಂತೈಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಎಐಸಿಸಿ ಕಾರ್ಯದರ್ಶಿ ಸೂರಜ್ ಹೆಗ್ಡೆ ಅವರ ಅಂತಿಮ ದರ್ಶನವನ್ನು ಪಡೆದು ನಮನ ಸಲ್ಲಿಸಿದರು. ಸಿಎಂ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಇನ್ನಿತರರು ಇದ್ದರು.

ಕುಟುಂಬಸ್ಥರಿಗೆ ರಾಹುಲ್ ಸಾಂತ್ವನ

ಸೂರಜ್ ಹೆಗ್ಡೆ ಕಾಂಗ್ರೆಸ್ ಪಕ್ಷದ ವಿಚಾರಧಾರೆಯಲ್ಲಿ ಅತಿಯಾದ ನಂಬಿಕೆ ಇಟ್ಟಿದ್ದರು. ಯುವ ಕಾಂಗ್ರೆಸ್‌ನಲ್ಲಿದ್ದಾಗ ಅವರು ಯುವ ಭಾರತೀಯರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿಧನ ಕಾಂಗ್ರೆಸ್ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬ, ಸ್ನೇಹಿತರಿಗೆ ಅವರ ಅಗಲಿಕೆಯ ನೋವು ಭರಿಸುವ ಶಕ್ತಿ ಸಿಗಲಿ ರಾಹುಲ್ ಗಾಂಧಿ ಸಂತಾಪ ಸೂಚಿಸಿದ್ದರು. ಇದಕ್ಕೂ ಮೊದಲು ಸಿಎಂ ಡಿ.ಕೆ. ಶಿವಕುಮಾರ್ ಅವರು ಅಂತಿಮ ಗೌರವ ಸಲ್ಲಿಸಲು ಆಗಮಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಜತೆ ಬರಮಾಡಿಕೊಂಡರು. ಅಂತಿಮ ನಮನದ ನಂತರ ವಿಮಾನ ನಿಲ್ದಾಣಕ್ಕೆ ಮತ್ತೆ ತೆರಳಿ ಬೀಳ್ಕೊಟ್ಟರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂರಜ್ ಅವರ ಪತ್ನಿ ಶಿಲ್ಪಾ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು.

ಲೋಕಧ್ವನಿಯ ಧ್ವನಿಯಾಗಿದ್ದ ಪಿ.ಎಸ್. ಸದಾನಂದ ಇನ್ನಿಲ್ಲ

ಮುಂಡಗೋಡ: ಉತ್ತರ ಕನ್ನಡ ಜಿಲ್ಲೆಯ ಹಿರಿಯ ಪತ್ರಕರ್ತ ಹಾಗೂ 'ಲೋಕಧ್ವನಿ' ದಿನಪತ್ರಿಕೆಯ ಮಾಜಿ ಸಂಪಾದಕ ಪಿ.ಎಸ್. ಸದಾನಂದ (68) ಮಂಗಳವಾರ ಹೃದಯಸ್ತಂಭನದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರಿ, ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.ಮೂಲತಃ ಮುಂಡಗೋಡ ತಾಲೂಕಿನ ನ್ಯಾಸರ್ಗಿ ಗ್ರಾಮದವರಾದ ಪಿ.ಎಸ್. ಸದಾನಂದ ಮುಂಡಗೋಡಿನಲ್ಲಿ ಝುರಾಕ್ಸ್ ಅಂಗಡಿ ನಡೆಸುತ್ತಿದ್ದರು. ಅಲ್ಲದೆ, ಅಲ್ಲಿನ ವರದಿಯನ್ನು ಲೋಕಧ್ವನಿಗೆ ಕಳುಹಿಸುತ್ತ ಇದ್ದರು. ಇವರಲ್ಲಿರುವ ಬರವಣಿಗೆಯ ಪ್ರತಿಭೆ ಗಮನಿಸಿದ 'ಲೋಕಧ್ವನಿ' ಪತ್ರಿಕೆಯ ಸಂಸ್ಥಾಪಕರಾಗಿದ್ದ ಗೋಪಾಲಕೃಷ್ಣ ಅನವಟ್ಟಿ ಅವರು ಸದಾನಂದ ಅವರನ್ನು ಮುಂಡಗೋಡ ತಾಲೂಕು ವರದಿಗಾರರನ್ನಾಗಿ ನೇಮಿಸಿದರು. ಮುಂಡಗೋಡ ಭಾಗದಲ್ಲಿ ಪತ್ರಿಕೆಯ ಪ್ರಸರಣಕ್ಕೆ ಹೆಚ್ಚಿನ ಶ್ರಮವನ್ನು ಸದಾನಂದ ಹಾಕಿದ್ದರು. ನಂತರ ಆನವಟ್ಟಿ ಅವರು 1987ರಲ್ಲಿ ಸದಾನಂದ ಅವರನ್ನು ಉಪಸಂಪಾದಕರನ್ನಾಗಿ ನೇಮಿಸಿಕೊಂಡರು. ಅಲ್ಲಿಂದ 37 ವರ್ಷ ಕಾಲ ಲೋಕಧ್ವನಿಗೆ ಸೇವೆ ಸಲ್ಲಿಸಿ, ಅಲ್ಲಿಯೇ ಸಂಪಾದಕರಾದರು. ಅವರ ನಿರಂತರ ಪತ್ರಿಕಾ ಸೇವೆ ಮೆಚ್ಚಿ ರಾಜ್ಯ ಮಟ್ಟ, ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟದ ವಿವಿಧ ಪ್ರಶಸ್ತಿ, ಗೌರವ ಪುರಸ್ಕಾರಗಳನ್ನು ನೀಡಿ ಸತ್ಕರಿಸಲಾಗಿತ್ತು.

ಶಿರಸಿಯ 'ಲೋಕಧ್ವನಿ' ದೈನಿಕದಲ್ಲಿ ಸುಮಾರು ಮೂವತ್ತೇಳು ವರ್ಷಗಳಿಗಿಂತ ಅಧಿಕ ಕಾಲ ವರದಿಗಾರರಾಗಿ, ಉಪಸಂಪಾದಕರಾಗಿ, ನಂತರ ಸಂಪಾದಕರಾಗಿ ಸೇವೆ ಸಲ್ಲಿಸಿದ ಪಿ. ಎಸ್. ಸದಾನಂದ ಅವರು ಹೃದಯಾಘಾತದಿಂದ ನಿಧನರಾಗಿದ್ದು ಅತ್ಯಂತ ದುಃಖದ ಸಂಗತಿ. 'ಲೋಕಧ್ವನಿ' ಆರಂಭದಿಂದಲೂ ಜತೆಯಾಗಿದ್ದ ಸದಾನಂದ ಅವರ ಅನುಪಮ ಸೇವೆಯನ್ನು ನೆನೆಯುತ್ತಾ, ಅವರಿಗೆ ಸದ್ಗತಿ ಸಿಗಲಿ ಎಂದು ಕೋರುವೆ.
ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕರು ವಿಶ್ವವಾಣಿ

ಮೋದಿ: ಸುಂದರ ಕಮಲದಲ್ಲಿ ಅರಳಿದ ಮತ್ತೊಂದು ಕಮಲ

← ಮೊದಲಪುಟದಿಂದ

ಪ್ರಸ್ತುತ ಸೌರಶಕ್ತಿ ಸಾಮರ್ಥ್ಯ 150 ಗಿಗಾವ್ಯಾಟ್ ಗಡಿ ದಾಟಿದ್ದು, 2014ಕ್ಕೆ ಹೋಲಿ ಸಿದರೆ 56 ಪಟ್ಟು ಅಧಿಕವಾಗಿದೆ. 40 ಲಕ್ಷ ಮನೆಗ ಳಿಗೆ ಸೌರ ಬೆಳಕು ಬೀರಿರುವ 'ಸೂರ್ಯಘರ್' 1 ಕೋಟಿ ಸೌರ ಮೇಲ್ಛಾವಣಿ ಗುರಿ ಸಾಧನೆಗೆ ಸನಿಹದಲ್ಲೇ ಸಾಗುತ್ತಿದೆ. ಪರಿಸರ ಸಂರಕ್ಷಣೆ ಮತ್ತು ಆ ನಿಟ್ಟಿನ ಪ್ರಯತ್ನಕ್ಕಾಗಿ ವಿಶ್ವಸಂಸ್ಥೆಯಿಂದ 'ಚಾಂಪಿಯನ್ಸ್ ಆಫ್ ದಿ ಅರ್ಥ್ ಪ್ರಶಸ್ತಿ'ಗೆ ಪಾತ್ರರಾಗಿದ್ದಾರೆ ಮೋದಿ.

ಆಡಳಿತದಲ್ಲಿ ಹೊಸ ಅಧ್ಯಾಯ: ಬುದ್ಧನ ನಾಡಿನಲ್ಲಿ ಜನಿಸಿ ಸರ್ವರ ಪ್ರೀತಿ-ಸ್ನೇಹ, ಶ್ರೀಸಾಮಾನ್ಯರ ಬದುಕು-ಬವಣೆ, ಕಠಿಣ ಪರಿಶ್ರಮ-ಪರಿತಾಪಗಳ ನಡುವಣ ಅನನ್ಯ ಜೀವನ ಾನುಭವ-ಆಡಳಿತಾನುಭವವುಳ್ಳ ವಿಶ್ವಶ್ರೇಷ್ಠ ನಾಯಕರಾಗಿ ಹೊರಹೊಮ್ಮಿದ್ದಾರೆ. 'ಭಾರತದ ಸುದೀರ್ಘಾವಧಿ ಚುನಾಯಿತ ಪ್ರಧಾನ ಮಂತ್ರಿ' ಹೆಗ್ಗಳಿಕೆಗೂ ಪಾತ್ರರಾಗಿ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿದ್ದಾರೆ. ಭಾರತದ ಪ್ರಜಾಪ್ರಭುತ್ವದಲ್ಲಿ ಇದೊಂದು ಅಭೂತಪೂರ್ವ ಘಳಿಗೆಯಾಗಿ ಉಳಿಯಲಿದೆ. ವಿಶ್ವದ ಅತಿ ದೊಡ್ಡ ಪಕ್ಷದ ನೇತಾರರಾಗಿ 2014ರ ಮೇ 26ರಂದು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ನರೇಂದ್ರ ಮೋದಿ (ಔಟ್ಟಜಭಿಠಿ ಖಟ್ಟಿಡಜ್ಞಿಜ ಕಖ) ಆಡಳಿತದಲ್ಲಿ 2026ರ ಜೂನ್ 10ಕ್ಕೆ 4,399 ದಿನಗಳನ್ನು ಪೂರೈಸುತ್ತಿದ್ದಾರೆ. 2001ರಿಂದ ಮೇ 2014ರವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿ ಸಾರ್ವಜನಿಕ ಅಧಿಕಾರಾವಧಿಯಲ್ಲಿ ಒಟ್ಟು 8,930 ದಿನಗಳನ್ನು ದಾಟುವ ಮೂಲಕ ಜನರಿಂದ ಚುನಾಯಿತರಾದ ಸುದೀರ್ಘಾವಧಿ 'ಸರ್ಕಾರದ ಮುಖ್ಯಸ್ಥರು' ಎಂಬ ಜಾಗತಿಕ ಮನ್ನಣೆಗೂ ಪಾತ್ರರಾಗಿದ್ದಾರೆ.

ಇಂದಿರಾ, ನೆಹರು ದಾಖಲೆ ನೇಪಥ್ಯಕ್ಕೆ: ಸ್ವತಂತ್ರ ಭಾರತದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಂತರ ಸತತ 4,398 ದಿನಗಳ ಕಾಲ ದೇಶವಾಳಿದ ಜವಾಹರಲಾಲ್ ನೆಹರೂ ಅವರ ಆರು ದಶಕದ ದಾಖಲೆ ಹಾಗೂ ಇಂದಿರಾ ಗಾಂಧಿ ಅವರ 4,077 ದಿನಗಳ ಅಧಿಕಾರವಧಿ ದಾಖಲೆಯನ್ನು ಮೀರಿಸಿದ ಏಕೈಕ ಪ್ರಧಾನಿಯಾಗುಳಿದಿದ್ದಾರೆ. ಭಾರತದಂತಹ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ, ಅದರಲ್ಲೂ ಅತ್ಯಧಿಕ 744 ರಾಜಕೀಯ ಪಕ್ಷಗಳಿರುವ ಪ್ರಸ್ತುತ ಕಾಲಘಟ್ಟದಲ್ಲಿ ಸತತ 3ನೇ ಅವಧಿ ಆಡಳಿತದ ಚುಕ್ಕಾಣಿ ಹಿಡಿದ 'ಕಾಂಗ್ರೆಸ್ಸೇತರ ಮೊದಲ ನಾಯಕ' ಎಂಬ ಹೆಗ್ಗಳಿಕೆ. ಇದು ಮೋದಿ ಅವರ ರಾಜಕೀಯ ಬದ್ಧತೆ, ಪ್ರಬುದ್ಧತೆ ಹಾಗೂ ಭಾರತೀಯರಿಗಿರುವ ಪ್ರಜಾಪ್ರಭುತ್ವದ ಮೇಲಿನ ಗೌರವ-ವಿಶ್ವಾಸಕ್ಕೆ ಕೈಗನ್ನಡಿ.

ಟೆಕ್ನೋ ಸೇವಿ ನಾಯಕ: ಆಧುನಿಕ ಭಾರತದ ಪ್ರಧಾನಿಯಾಗಿ ಅಂತರ್ಜಾಲ ಮೂಲಕವೇ ವರ್ಚಸ್ಸು ವೃದ್ಧಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರ ಜನಸಂಪರ್ಕದ ಪಥವೇ ವಿಶಿಷ್ಟ. ಯಾವತ್ತೂ ನೇರವಾಗಿ ಜನಸಂಪರ್ಕಕ್ಕೆ, ಸಂದೇಶ ರವಾನಿಸಲು ಆರಿಸಿಕೊಂಡ ಮಾರ್ಗ ಸಾಮಾಜಿಕ ಜಾಲತಾಣ. ಸರಕಾರದೊಂದಿಗೆ ಜನರ ನೇರ ಸಹಭಾಗಿತ್ವವನ್ನು ಯೋಚಿಸಿ "MyGov' ಮೂಲಕ ಅದಕ್ಕೊಂದು ವೇದಿಕೆ ಕಲ್ಪಿಸಿಕೊಟ್ಟರು. ಮನ್‌ಕೀ ಬಾತ್, ಪರೀಕ್ಷಾ ಚರ್ಚಾ ಮೂಲಕ ನೇರ ಸಂವಾದ ರಚಿಸಿದರು. ಇದೀಗ 4 ಕೋಟಿ ನೋಂದಣಿಗಳನ್ನು ದಾಟಿದ್ದು, ಮತ್ತೊಂದು ಗಿನ್ನೆಸ್ ವಿಶ್ವ ದಾಖಲೆ ಬರೆದಿದೆ. ವೆಬ್, ಫೇಸ್ಬುಕ್, ಟ್ವೀಟರ್, ಲಿಂಕ್ಡ್‌ಇನ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್, ವಾಟ್ಸಪ್ ಹೀಗೆ 'ಡಿಜಿಟಲ್ ಇಂಡಿಯಾ' ಉಪಕ್ರಮಗಳಲ್ಲಿ ಮುಖ್ಯವಾಹಿನಿಗೆ ಬಂದು ಜನತೆಯ ಜೊತೆ ಸಂಪರ್ಕ ಹೊಂದುತ್ತಾರೆ. ಹೀಗಾಗಿ ಮೋದಿಜಿ ಅವರನ್ನು ದೇಶದ ಅತ್ಯಂತ ಟೆಕ್ನೋ ಸೇವಿ ನಾಯಕ ಎಂದೇ ಬಿಂಬಿಸಲಾಗಿದೆ. ತಮ್ಮೊಂದಿಗೆ ಜನರ ಜೀವನದಲ್ಲೂ ಡಿಜಿಟಲ್ ಸಾಕ್ಷರತೆ ಬಿತ್ತುತ್ತಿರುವ ಮೋದಿ ಅವರ 'ಡಿಜಿಟಲ್ ಇಂಡಿಯಾ' ಆಡಳಿತ ಶೈಲಿಯು ಆಧಾರ್, ಈಆಖ, ಖಿಕಐ, ಈಜಿಜಜಿಔಟ್ಟುಛಿಟ್ಟಿ, ಖಿುಅಫೆಎ, ಎಉಖ, ಣಫೆಈಇ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಸೋರಿಕೆ ತಡೆಗಟ್ಟಿ ಪಾರದರ್ಶಕತೆಯನ್ನು ಹಾಸು ಹೊಕ್ಕಾಗಿಸಿದೆ ಎನ್ನುವುದಲ್ಲಿ ಎರಡು ಮಾತಿಲ್ಲ.

ಹುಳಿ ಹಿಂಡುವ ಕೆಲಸ ಮಾಡಬೇಡಿ: ಸಿಎಂಗೆ ಎಚ್‌ಡಿ ಕುಮಾರಸ್ವಾಮಿ ಟಾಂಗ್

← ಮೊದಲಪುಟದಿಂದ

ಗೌಡರನ್ನು ಕಾಡಿದ ಕಾಂಗ್ರೆಸ್: ಬಿಜೆಪಿ: ದೇಶದ ಪ್ರಧಾನ ಮಂತ್ರಿ ಸ್ಥಾನ ಅಲಂಕರಿಸಿದ್ದ ಹೆಮ್ಮೆಯ ಕನ್ನಡಿಗ ಎಂದು ಎನಿಸಿಕೊಂಡಿರುವ ದೇವೇಗೌಡರ ಕುರಿತು ಕಾಂಗ್ರೆಸ್ ಪಕ್ಷದ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರು ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ದೇವೇಗೌಡರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಪಕ್ಷದ ಮೇಲಿರುವುದನ್ನು ಕಾಂಗ್ರೆಸ್ ಮುಂದಾಳುಗಳು ಮರೆತಂತಿದೆ.ದೇವೇಗೌಡರನ್ನು ರಾಜಕೀಯ ಜೀವನದುದ್ದಕ್ಕೂ ಕಾಡಿದ್ದು, ಅವರ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ದೇವೇಗೌಡರನ್ನು ಬಿಜೆಪಿ ಅತ್ಯಂತ ಗೌರವದಿಂದ ನಡೆಸಿಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡ ಬಿಜಪಿ ಬೆಂಬಲಿಸಿ, ಎನ್‌ಡಿಗೆ ತಮ್ಮ ಜೆಡಿಎಸ್ ಪಕ್ಷ ಸೇರಿಸಿದ್ದಾರೆ. ಇದನ್ನು ಕಂಡು ಸಹಿಸಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸಿಗರು ದೇವೇಗೌಡರ ಹೆಸರನ್ನು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಗೇಡಿತನದ ಪರಮಾವಧಿಯಾಗಿದೆ. ಅವರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ಭಾವುಕವಾಗಿ ಮಾತನಾಡಿ ಅವರ ಕೊಡುಗೆ, ಸಾಧನೆ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ರಾಷ್ಟವನ್ನು ಮುನ್ನಡೆಸುವ ನಿಟ್ಟಿನಲ್ಲಿ ಅವರ ಮಾರ್ಗದರ್ಶನ ಸದಾ ನಮಗೆ ಬೇಕೆಂದು ಹೇಳಿದ್ದಾರೆ. ಅತ್ಯುತ್ತಮ ರಾಜಕೀಯ ಹಾಗೂ ವ್ಯಕ್ತಿಗತ ಗೌರವಗಳ ಬಾಂಧವ್ಯವಿರುವ ದೇವೇಗೌಡರೊಂದಿಗಿನ ಸಂಬಂಧಕ್ಕೆ ಹುಳಿ ಹಿಂಡುವ ಮಾತುಗಳು ಕಾಂಗ್ರೆಸಿನಗರ ವಿಕೃತ ನಡೆ ಎಂದು ಟೀಕಿಸಿದ್ದಾರೆ

ಪಿಓಕೆಯಲ್ಲಿ ಪಾಕಿಸ್ತಾನ ನರಮೇಧ: 35 ಜನ ಸಾವು

← ಮೊದಲಪುಟದಿಂದ

ಪರಿಸ್ಥಿತಿ ನಿಯಂತ್ರಿಸುವ ಹೆಸರಲ್ಲಿ ಪಾಕಿಸ್ತಾನ ಭದ್ರತಾ ಪಡೆಗಳು ಪ್ರತಿಭಟನಾಕಾರರ ಮೇಲೆ ದೌರ್ಜನ್ಯ ಎಸಗುತ್ತಿವೆ ಎಂದು ವರದಿಯಾಗಿದೆ. ರಾವಲಕೋಟ್ ಮತ್ತು ಮುಜಫರಾಬಾದ್‌ನಲ್ಲಿ ಪ್ರತಿಭಟನಾಕಾರರು ಮತ್ತು ಪಾಕಿಸ್ತಾನಿ ಭದ್ರತಾ ಪಡೆಗಳ ನಡುವೆ ಘರ್ಷಣೆ ಸಂಭವಿಸಿದ್ದು, ಇಂಟ ರ್ನೆಟ್ ಮತ್ತು ಮೊಬೈಲ್ ಸೇವೆಗಳು ಕಡಿತ ಗೊಂಡು, ಬಂದ್ ಮುಂದುವರಿದಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಹಲವು ಭಾಗಗಳಲ್ಲಿ ಪರಿಸ್ಥಿತಿ ಕೈ ಮೀರುತ್ತಿದ್ದು, ನೂರಾರು ಪ್ರತಿಭಟನಾಕಾರರು ಬೀದಿಗಳಿದು ಪಾಕಿಸ್ತಾನದ ವಿರುದ್ಧ ಪ್ರತಿಭಟನೆಗೆ ಸಜ್ಜಾಗಿದ್ದಾರೆ. ಭೀಂಬರ್ ಮತ್ತು ಕೊಟಿಲ್‌ನಂತಹ ಹಲವು ನಗರಗಳಲ್ಲಿ ಬಂದ್ ಮುಂದುವರಿದಿದೆ.

ಪ್ರತಿಭಟನೆ ಏಕೆ?: 45 ಸದಸ್ಯರ ಪಿಓಕೆ ಶಾಸಕಾಂಗ ಸಭೆಯಲ್ಲಿ 12 ಸ್ಥಾನಗಳನ್ನು ಕಾಶ್ಮೀರದ ಹೊರಗೆ ಆದರೆ ಪಾಕಿಸ್ತಾನದ ಇತರೆಡೆ ವಾಸಿಸುವ ನಿರಾಶ್ರಿತರಿಗೆ ಮೀಸಲಿಡುವ ಪಾಕ್ ಸರಕಾರದ ಆಡಳಿತದ ನಿರ್ಧಾರದಿಂದ ಇತ್ತೀಚಿನ ಅಶಾಂತಿ ಉಂಟಾಗಿದೆ.

ಈ ಕ್ರಮವು ಸ್ಥಳೀಯ ಪ್ರಾತಿನಿಧ್ಯವನ್ನು ದುರ್ಬಲಗೊಳಿಸುತ್ತದೆ ಎಂಬುದು ಅವಾಮಿ ಕ್ರಿಯಾ ಸಮಿತಿ ವಾದವಾಗಿದೆ. ಅಲ್ಲದೇ ಮೀಸಲು ಸ್ಥಾನಗಳನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದೆ. ರಾವಲಕೋಟ್‌ನಲ್ಲಿ ಸರಕಾರ ಹತ್ಯಾಕಾಂಡ ನಡೆಸುತ್ತಿದೆ ಎಂದು ಅವಾಮಿ ನಾಯಕ ಶೌಕತ್ ನವಾಜ್ ಮಿರ್ ಆರೋಪಿಸಿದ್ದಾರೆ. ನಿಷೇಧದ ಹೊರತಾಗಿಯೂ ಪ್ರತಿಭಟನೆ ಮುಂದುವರಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕೊಪ್ಪಳ
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ-ಮೇಲ್ : eepredkpl@gmail.com
ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2026-27/499 ದಿನಾಂಕ: 08-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆಡ್ಲ್ಯೂ-1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ, ಮಾನ್ಯ ಮುಖ್ಯ ಮಂತ್ರಿಗಳ ಮೂಲಕ ಸೌಕರ್ಯ ಅಭಿವೃದ್ಧಿ 2023-24/2024-25 ಎಸ್ ಸಿ ಪಿ ಟಿ ಎಸ್ ಪಿ, 2024-25, ಮಳೆ ಹಾನಿ 2025-26 CMIDP,2024-25 ಪದವಿ ಪೂರ್ವ ಕಾಲೇಜು ಅನುದಾನ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕಾರಟಗಿ ತಾಲ್ಲೂಕಿನ ಚಳ್ಳೂರು ಗ್ರಾಮದಿಂದ ಸೋಮನಾಳ ಕ್ಯಾಂಪ್‌ವರೆಗೆ ರಸ್ತೆ ಡಾಂಬರೀಕರಣ (CAT-II A) INDENT NO:24594 CALL-2 ಟೆಂಡರಗಿಟ್ಟ ಮೊತ್ತ ರೂ 57.73 ಲಕ್ಷ ,ಇಎಂಡಿ 58000.00 6 ತಿಂಗಳು 2) ಕಾರಟಗಿ ತಾಲ್ಲೂಕಿನ ಹುಳ್ಕಿಹಾಳ ಕ್ಯಾಂಪ್ನಿಂದ ಜೂರಟಗಿ ವರೆಗೆ ರಸ್ತೆ ಡಾಂಬರೀಕರಣ. (SC) INDENT NO:24585 CALL-2 ಟೆಂಡರಗಿಟ್ಟ ಮೊತ್ತ ರೂ 71.28 ಲಕ್ಷ, ಇಎಂಡಿ 72000.00 6 ತಿಂಗಳು 3) ಕನಕಗಿರಿ ತಾಲೂಕಿನ ಮುಸಲಾಪೂರ ಗ್ರಾಮದ ಭೋವಿ ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಾಣ (SC) INDENT NO:25707 ಟೆಂಡರಗಿಟ್ಟ ಮೊತ್ತ ರೂ 20.74 ಲಕ್ಷ, ಇಎಂಡಿ 21000.00 6 ತಿಂಗಳು 4) ಕನಕಗಿರಿ ತಾಲೂಕಿ ಇಂಗಳದಾಳ ತಾಂಡಾದಲ್ಲಿ ಸಿಸಿ ರಸ್ತೆ ನಿರ್ಮಾಣ. (SC) INDENT NO:25719 ಟೆಂಡರಗಿಟ್ಟ ಮೊತ್ತ ರೂ 16.74 ಲಕ್ಷ, ಇಎಂಡಿ 17000.00 6 ತಿಂಗಳು 5) ಕುಷ್ಟಗಿ ವಿಧಾನಸಭಾ ಕ್ಷೇತ್ರದ ಬೆಂಚಮಟ್ಟಿ ಗ್ರಾಮದ ದಿಂದ ಕೊರಡಕೇರಾ ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು. INDENT NO:25972 ಟೆಂಡರಗಿಟ್ಟ ಮೊತ್ತ ರೂ 83.39 ಲಕ್ಷ ಇಎಂಡಿ 167000.00 6 ತಿಂಗಳು 6) ಕುಷ್ಟಗಿ ವಿಧಾನಸಭಾ ಕ್ಷೇತ್ರದ ವಕ್ಕಂದುರ್ಗ ಗ್ರಾಮದಿಂದ ತಾಲೂಕಾ ಬಾರ್ಡ ವರೆಗೆ (ಗಿಡ್ಡನಾಯಕನಹಾಳ) ರಸ್ತೆ ಅಭಿವೃದ್ದಿಪಡಿಸುವುದು (ಕಿ.ಮೀ.0.00 ದಿಂದ ಕಿ.ಮೀ.1.50 ರವರೆಗೆ) INDENT NO:25971 ಟೆಂಡರಗಿಟ್ಟ ಮೊತ್ತ ರೂ 83.42ಲಕ್ಷ ಇಎಂಡಿ 167000.00 6 ತಿಂಗಳು 7) ಸರ್ಕಾರಿ ಪದವಿ ಪೂರ್ವ ಕಾಲೇಜು ನವಲಿ ಶೌಚಾಲಯ ಕನಕಗಿರಿ ತಾ; INDENT NO:25970 ಟೆಂಡರಗಿಟ್ಟ ಮೊತ್ತ ರೂ 7.15ಲಕ್ಷ ಇಎಂಡಿ 18000.00 3 ತಿಂಗಳು 8) ಎಂ.ಎನ್.ಎಂ ಬಾಲಕೀಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಗಂಗಾವತಿ RK-0057. INDENT NO:25969 ಟೆಂಡರಗಿಟ್ಟ ಮೊತ್ತ ರೂ 7.15ಲಕ್ಷ ,ಇಎಂಡಿ 18000.00 3 ತಿಂಗಳು 9) ಸರ್ಕಾರಿ ಪದವಿ ಪೂರ್ವ ಕಾಲೇಜು ಹನುಮಸಾಗರ ತಾ:ಕುಷ್ಟಗಿಗೆ ಶೌಚಾಲಯ ನಿರ್ಮಾಣ; INDENT NO:25140 ಟೆಂಡರಗಿಟ್ಟ ಮೊತ್ತ ರೂ 7.15ಲಕ್ಷ ,ಇಎಂಡಿ 18000.00 3 ತಿಂಗಳು 10) ಕುಕನೂರು ತಾಲೂಕ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಗಳೂರು ಶೌಚಾಲಯ ನಿರ್ಮಾಣ; INDENT NO:26298 ಟೆಂಡರಗಿಟ್ಟ ಮೊತ್ತ ರೂ 7.15ಲಕ್ಷ ಇಎಂಡಿ 18000.00 3 ತಿಂಗಳು

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: 1) ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: 10-06-2026 ಸಮಯ 10.00 ಗಂಟೆ ನಂತರ ದಿಂದ 24-06-2026 ಸಮಯ 16.00 ಗಂಟೆವರೆಗೆ 2) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: 10-06-2026 ಸಮಯ 11.00 ಗಂಟೆ ನಂತರ ದಿಂದ: 24-06-2026 ಸಮಯ 16.30 ಗಂಟೆವರೆಗೆ 3) ಟೆಂಡರ್ ತೆರೆಯುವ ದಿನಾಂಕ: 25-06-2026 ಕಚೇರಿ ಸಮಯದಲ್ಲಿ 4) ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸೂಚನೆ: ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/145/ಮಣಿಪಾಲ್/2026-27

ರೈಲು ಮಾರ್ಗ ವಿದ್ಯುತ್‌ಗೆ 162.57 ಕೋಟಿ

ಬೆಂಗಳೂರು: ರೈಲು ಮಾರ್ಗದ ವಿದ್ಯುತ್ ಎಳೆತ (ಟ್ರಾಕ್ಷನ್) ವ್ಯವಸ್ಥೆಯ ಉನ್ನತೀಕರಣಕ್ಕೆ ಭಾರತೀಯ ರೈಲ್ವೆಯಿಂದ ಅನುಮೋದನೆ ದೊರೆತಿದೆ ಎಂದು ಕೇಂದ್ರ ರೈಲ್ವೆ ಸಚಿವ ಸದಸ್ಯ ವಿ.ಸೋಮಣ್ಣ ತಿಳಿಸಿದ್ದಾರೆ.

ರಾಜ್ಯದ ಅತ್ಯಂತ ಜನನಿಬಿಡ ರೇಲ್ವೆ ಕಾರಿಡಾ ರ್‌ಗಳಲ್ಲಿ ಒಂದಾದ ಬೆಂಗಳೂರು-ತುಮಕೂರು ರೇಲ್ವೆ ಮಾರ್ಗದಲ್ಲಿ ರೈಲು ಸಾಮರ್ಥ್ಯ ಮತ್ತು ಕಾರ್ಯಚರಣೆಯ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಟ್ರಾಕ್‌ನ ವ್ಯವಸ್ಥೆ 162.57 ಕೋಟಿ ರು. ವೆಚ್ಚದಲ್ಲಿ ಉನ್ನತೀಕರಣಗೊಳಿಸಲಾಗುತ್ತಿದೆ. ಈ ಯೋಜನೆಯಿಂದ ಬೆಂಗಳೂರು - ತುಮಕೂರು ರೇಲ್ವೆ ಮಾರ್ಗದಲ್ಲಿ 120 ಕಿ.ಮೀ ಟ್ರಾಕ್ ವ್ಯಾಪ್ತಿಯಲ್ಲಿ ಪ್ರಸ್ತುತ 1X25 ಕೆವಿ ವಿದ್ಯುತ್ ಎಳೆತ ವ್ಯಾಪ್ತಿಯಲ್ಲಿ 2X25 ಕೆವಿ ವಿದ್ಯುತ್ ಎಳೆತ ವ್ಯವಸ್ಥೆಯಾಗಿ ಪರಿವರ್ತಿಸಲಾಗುತ್ತದೆ. ಬೆಂಗಳೂರು- ತುಮಕೂರು ಭಾಗವು ಹೆಚ್ಚಿನ ಬಳಕೆಯಲ್ಲಿರುವ ಮಾರ್ಗವಾಗಿದೆ. ಪುಣೆ, ಹುಬ್ಬಳ್ಳಿ ಚಿಕ್ಕಜಾಜೂರು ಬೀರೂರು-ತುಮಕೂರು- ಬೆಂಗಳೂರು- ಸೇಲಂ- ಕನ್ಯಾಕುಮಾರಿ ಕಾರಿಡಾರ್ ಕೈಗಾರಿಕೆ ಕೇಂದ್ರಗಳನ್ನು ಸಂಪರ್ಕಿಸುತ್ತದೆ. ಈ ಯೋಜನೆಯನ್ನು ತುಮಕೂರಿನ ಅಭಿವೃದ್ಧಿಗಾಗಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ರನ್ನು ತುಮ ಕೂರಿನ ಜನತೆ ಪರವಾಗಿ ವಿ. ಸೋಮಣ್ಣ ಅಭಿನಂದಿಸಿದ್ದಾರೆ.

ಪತ್ರಿಕೆಗಳಲ್ಲಿ ಆಹಾರ ಪದಾರ್ಥ ಪ್ಯಾಕ್ ನಿಷಿದ್ಧ

ಬೆಂಗಳೂರು: ಇತ್ತೀಚೆಗೆ ಪ್ರಸಿದ್ಧ ವಡಪಾವ್ ಮಾರಾಟಗಾರರೊಬ್ಬರು ಆಹಾರವನ್ನು ಪ್ಯಾಕ್ ಮಾಡಲು ಮತ್ತು ಬಡಿಸಲು ಪತ್ರಿಕೆ ಬಳಸುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ ಮತ್ತು ಗ್ರೇಟರ್ ಮುಂಬೈ ಪಾಲಿಕೆ ಕ್ರಮ ಕೈಗೊಂಡಿವೆ. ಆಹಾರ ಮಾರಾಟಗಾರರು ಪತ್ರಿಕೆಗಳನ್ನು ಪ್ಯಾಕ್ ಮಾಡಲು ಮತ್ತು ಆಹಾರ ಅಥವಾ ಇತರ ಯಾವುದೇ ಆಹಾರ ಸಂಪರ್ಕ ಸಾಮಗ್ರಿಗಳನ್ನು ಸಂಬಂಧಿತ ರೀತಿ ಯಲ್ಲಿ ಬಡಿಸುವುದನ್ನು ನಿಲ್ಲಿಸುವಂತೆ ಒತ್ತಾ ಯಿಸುತ್ತದೆ. ಮುದ್ರಣ ಶಾಯಿಗಳು ಬಹು ಹಾನಿಕಾರಕ ಬಣ್ಣಗಳು, ವರ್ಣ ದ್ರವ್ಯಗಳು, ಬೈಂಡರ್‌ಗಳು ಮತ್ತು ರಾಸಾಯನಿಕಗಳನ್ನು ಹೊಂದಿರುತ್ತವೆ. ನಿರ್ದಿಷ್ಟವಾಗಿ ಸೀಸ ಮತ್ತು ಇತರ ಭಾರ ಲೋಹಗಳನ್ನು ಒಳಗೊಂಡಿರುತ್ತವೆ, ಇದು ಆಹಾರ ಪದಾರ್ಥಗಳಲ್ಲಿ ಸೋರಿಕೆಯಾಗಬಹುದು, ಇದು ಗಂಭೀರ ದೀರ್ಘಕಾಲದ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆ ಆಹಾರ ಸುರಕ್ಷತೆ ಮತ್ತು ಮಾನದಂಡಗಳು (ಪ್ಯಾಕೇಜಿಂಗ್) ನಿಯಮಗಳು, 2018, ಆಹಾರ ಸಂಗ್ರಹಣೆ ಮತ್ತು ಆಹಾರವನ್ನು ಸುತ್ತಲು ಪತ್ರಿಕೆ ಅಥವಾ ಅಂತಹ ಯಾವುದೇ ವಸ್ತುಗಳನ್ನು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ.

ಕೃಷಿ ಇಲಾಖೆ ಸಾವುಗಳ ತಪ್ಪು ಲೆಕ್ಕ, ಪರಿಹಾರ ಕೈ ತಪ್ಪುವ ಆತಂಕ | ತಂತಿ ಬೇಲಿ ಹಾಕಿಸಲು ಒತ್ತಾಯ

ಕೃಷಿ ಹೊಂಡದಲ್ಲಿ ಬಿದ್ದು ಸಾವು: ಪರಿಹಾರಕ್ಕೆ ಆಗ್ರಹ

ಕೋಲಾರ: ಕೃಷಿ ಹೊಂಡದಲ್ಲಿ ಮುಳುಗಿ ಸಾವನ್ನಪ್ಪುತ್ತಿರುವವರ ಸಂಖ್ಯೆ ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆ ಆಗುತ್ತಿವೆ.

ಕಳೆದ 15 ದಿನದಲ್ಲಿ ಜಿಲ್ಲೆಯ ಹಲವೆಡೆ ಕೃಷಿ ಹೊಂಡದಲ್ಲಿ ಬಿದ್ದು 9 ಮಂದಿ ಮೃತಪಟ್ಟಿದ್ದಾರೆ. ಆದರೆ ಸರಕಾರದ ಲೆಕ್ಕದಲ್ಲಿ ಕೇವಲ ಐವರು ಸಾವಿಗೀಡಾಗಿದ್ದಾರೆಂದು ತೋರಿಸಲಾಗಿದೆ. ಸಾವಿನ ಸಂಖ್ಯೆ ಕಡಿಮೆ ತೋರಿಸುವ ಮೂಲಕ ಕೃಷಿ ಇಲಾಖೆ ಸಾವಿನ ಲೆಕ್ಕ ಮರೆಮಾಚುತ್ತಿದೆ.

ಬಂಗಾರಪೇಟೆ ತಾಲೂಕಿನಲ್ಲಿ ಇಬ್ಬರು ಮತ್ತು ಮಾಲೂರು ತಾಲೂಕಿನಲ್ಲಿ ಮೂವರು ಸೇರಿದಂತೆ ನಾಲ್ವರು ಪುರುಷರು ಹಾಗೂ ಒಬ್ಬರು ಮಹಿಳೆ ಅಸುನೀಗಿದ್ದು, ಉಳಿದದ್ದು ರೈತರು ಅನಧೀಕೃತವಾಗಿ ತೋಡಿಕೊಂಡ ಹೊಂಡಗಳಾಗಿದ್ದು ಅದಕ್ಕೂ ನಮಗೂ ಸಂಬಂಧವಿಲ್ಲ ಎಂಬ ಸ್ಪಷ್ಟನೆ ಕೃಷಿ ಇಲಾಖೆ ಅಧಿಕಾರಿಗಳು ಕೊಡುತ್ತಿದ್ದಾರೆ. ರೈತರು ಕೃಷಿ ಹೊಂಡದ ಲೆಕ್ಕದಲ್ಲಿ ಅನಧೀಕೃತವಾಗಿ ಹೊಂಡ ನಿರ್ಮಾಣ ಮಾಡಿದಾಗ ಸುಮ್ಮನಿದ್ದ ಕೃಷಿ ಇಲಾಖೆ ಸಾವು-ನೋವಾದ ನಂತರ ಅನಧೀಕೃತ ಎಂದು ಹೇಳುವ ಮೂಲಕ ಜವಾಬ್ದಾರಿಯಿಂದ ವಿಮುಖ ಆಗುತ್ತಿರುವ ನಿಲುವು ಜನರಲ್ಲಿ ಆತಂಕ ಮೂಡಿಸಿದೆ.

ಕೃಷಿ ಹೊಂಡದಲ್ಲಿ ಬಿದ್ದು ಸತ್ತಿರುವ ಐವರಿಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ ಎಂಬುದು ಮತ್ತೊಂದು ಅಂಶವಾಗಿದ್ದು, ಎಫ್‌ಎಸ್‌ಎಲ್ ವರದಿ ಬಂದ ನಂತರ ಪರಿಹಾರದ ಬಗ್ಗೆ ಸಮಿತಿ ನಿರ್ಧಾರ ಮಾಡುತ್ತದೆ ಎಂಬುದು ಅಧಿಕಾರಿಗಳ ಸಮಜಾಯಿಷಿ ಆಗಿದೆ. ಕೃಷಿ ಚಟವಟಿಕೆಯಲ್ಲಿ ತೊಡಗಿಸಿ ಕೊಂಡಿದ್ದಾಗ ಕೃಷಿ ಹೊಂಡಕ್ಕೆ ಆಕಸ್ಮಿಕವಾಗಿ ಬಿದ್ದರೆ ಮಾತ್ರ ಪರಿಹಾರ ಸಿಗುತ್ತದೆ. ಆದರೆ ಬಹುತೇಕ ಪ್ರಕರಣಗಳಲ್ಲಿ ಈಜಲು ನೀರಿಗಿಳಿದು ಮೃತಪಟ್ಟಿರುವುದರಿಂದಾಗಿ ಯಾರಿಗೂ ಪರಿಹಾರ ಸಿಗುವುದಿಲ್ಲ ಎಂಬುದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಅಳಲಾಗಿದ್ದು, ಹೀಗಾಗಿ ಜಿಲ್ಲೆಯ 9 ಮೃತರ ಕುಟುಂಬಕ್ಕೂ ಸರಕಾರದ ನಿಯಮಾವಳಿಯಂತೆ ತಲಾ 2 ಲಕ್ಷ ರು. ಪರಿಹಾರ ಒದಗಿಸುವ ಮೂಲಕ ಮಾನವೀಯತೆ ತೋರಿಸಬೇಕೆಂದು ಆಗ್ರಹಿಸಿದ್ದಾರೆ.

2023ರಿಂದ ಈವರೆಗೆ ಜಿಲ್ಲೆಯಲ್ಲಿ 1400ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ತೋಡಲಾಗಿದ್ದು, ಕಳೆದ ವರ್ಷದಲ್ಲಿ ಮಾತ್ರವೇ 446 ನಿರ್ಮಾಣವಾಗಿದೆ. ಜೆಸಿಬಿ ಕೆಲವೇ ಗಂಟೆಗಳಲ್ಲಿ ಹೊಂಡಾ ತೋಡುತ್ತದೆ. ತಕ್ಷಣ ಕಂಪನಿಯವರು ಪ್ಲಾಸ್ಟಿಕ್ ಶೀಟ್ ಹಾಸುವುದರಿಂದಾಗಿ ರೈತರು ನೀರು ತುಂಬಿಸಿ ಪೂಜೆ ಮಾಡುವ ಭರಾಟೆಯಲ್ಲಿ ತೊಡಗುತ್ತಾರೆ. ಹೀಗಾಗಿ ಸುತ್ತಮುತ್ತ ಮುಳ್ಳುತಂತಿ ಬೇಲಿ ಹಾಕಿಸಲು ಮುಂದಾಗುವುದಿಲ್ಲ. ಬೇಸಿಗೆಯ ಝಳಕ್ಕೆ ತಾಳಲಾರದೆ ಈಜಾಡಲು ನೀರಿಗಿಳಿಯುವ ಯುವಜನತೆ ಮೇಲೆ ಬರಲು ಸಾಧ್ಯವಾಗದೆ ಮುಳುಗುತ್ತಿದ್ದಾರೆ. ಈಜಾಡಲು ಕಲಿತವರೂ ಕೃಷಿ ಹೊಂಡದಿಂದ ಮೇಲೆ ಬರಲು ಸಾಧ್ಯವಾಗುವುದಿಲ್ಲ. ಅಲ್ಲಲ್ಲಿ ಬಿಟ್ಟಿರುವ ಪ್ಲಾಸ್ಟಿಕ್ ವೈರ್‌ಗಳ ಮೇಲೆ ಪಾಚಿ ಬೆಳೆದಿರುವುದರಿಂದ ಜಾರುತ್ತದೆ. ಹೀಗಾಗಿ ಸಾವು ನಿಶ್ಚಿತ ಎಂದು ನುರಿತ ಈಜುಪಟುಗಳು ತಮ್ಮ ಅನುಭವ ಹಂಚಿಕೆ ಮಾಡಿದ್ದಾರೆ.



ಕೃಷಿ ಇಲಾಖೆ ಅಧಿಕಾರಿಗಳಿಂದ ಕೃಷಿ ಹೊಂಡ ಪರಿಶೀಲನೆ ಮಾಡುತ್ತಿರುವುದು.

ಕೋಲಾರ ಜಿಲ್ಲೆಯಲ್ಲಿನ ಶೇ.50 ಕೃಷಿಹೊಂಡಗಳಿಗೆ ತಂತಿಬೇಲಿ ಇಲ್ಲವಾಗಿದೆ. ರೈತರಿಗೆ ನೋಟಿಸ್ ಕೊಡಲು ಸಾಧ್ಯವಿಲ್ಲ, ಹೀಗಾಗಿ ಕಡ್ಡಾಯವಾಗಿ ಕೃಷಿಹೊಂಡಗಳಿಗೆ ಬೇಲಿ ಹಾಕಿಸಿಕೊಳ್ಳುವಂತೆ ಕೃಷಿ ಇಲಾಖೆ ಸಿಬ್ಬಂದಿ ಪ್ರತಿಯೊಬ್ಬ ರೈತರನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳುತ್ತಿದ್ದಾರೆ.
-ಮಂಜುಳಾ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ

ರೈತರಲ್ಲಿನ ಜಾಗೃತಿ ಕೊರತೆಯಿಂದಾಗಿ ಕೃಷಿ ಹೊಂಡದಲ್ಲಿ ಸಾವುಗಳಾಗುತ್ತಿವೆ. ಕೃಷಿ ಅಧಿಕಾರಿಗಳು ಕಾಟಾಚಾರಕ್ಕಾಗಿ ಕೆಲಸ ಮಾಡುತ್ತಿದ್ದು ಕಾನೂನು ಪಾಲನೆ ಆಗದ ಕೃಷಿ ಹೊಂಡಗಳನ್ನು ಜೆಸಿಬಿಯಿಂದ ಮುಚ್ಚಬೇಕು. ಇದು ಈಜುವ ಸ್ಥಳವಲ್ಲ. ನೀರಿಗಿಳಿದರೆ ಪ್ರಾಣ ಕಳೆದುಕೊಳ್ಳುತ್ತೀರಿ ಎಂದು ಅಪಾಯದ ಬೋರ್ಡ್ ಹಾಕಬೇಕು. ಕೃಷಿ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು, ತಂತಿಬೇಲಿ ಅಳವಡಿಸುವಂತೆ ನೋಡಿಕೊಳ್ಳಬೇಕು. ಬೀಟ್ ಪೊಲೀಸರು ಮುನ್ನೆಚ್ಚರಿಕೆ ವಹಿಸಿ ರೈತರಿಗೆ ತಿಳಿವಳಿಕೆ ನೀಡಬೇಕು. ಕೃಷಿಹೊಂಡದಲ್ಲಿ ಮೃತಪಟ್ಟವರಿಗೆ ಪರಿಹಾರ ನೀಡಬೇಕು.
-ಕೆ.ನಾರಾಯಣಗೌಡ, ರಾಜ್ಯ ಉಪಾಧ್ಯಕ್ಷರು, ರೈತ ಸಂಘ

ಸಮಾಚಾರ ಸಣ್ಣದಲ್ಲ

ಹಿಟ್ನಾಳಗೆ ಸಚಿವ ಸ್ಥಾನ ನೀಡಲು ಶ್ರೀಗಳ ಆಗ್ರಹ



ರಾಯಚೂರು: ಕೊಪ್ಪಳ ಕ್ಷೇತ್ರದ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರಿಗೆ ಸಿಎಂ ಡಿ.ಕೆ.ಶಿವ ಕುಮಾರ್ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠ ತಿಂತಿಣಿ ಬ್ರಿಡ್ಜ್‌ನ ಶ್ರೀ ಶಿವ ಸಿದ್ದೇಶ್ವರ ಮಹಾಸ್ವಾಮೀಜಿ ಆಗ್ರಹಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ 40 ಕ್ಷೇತ್ರಗಳ ಪೈಕಿ ಕುರುಬ ಸಮಾಜದಿಂದ ಆಯ್ಕೆಯಾದ ಏಕೈಕ, ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಅವರು. ಸತತವಾಗಿ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿ ಜನ ಮನ್ನಣೆ ಪಡೆದ ಜನಪ್ರಿಯ ಶಾಸಕರು. ಈ ಭಾಗದಲ್ಲಿ ಎರಡು ಬಾರಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ ಮೂರು ಬಾರಿ ಕೊಪ್ಪಳ ಕ್ಷೇತ್ರದ ಶಾಸಕರಾಗಿ ಸೋಲಿಲ್ಲದ ಸರದಾರರಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೆ ಕೊಪ್ಪಳವನ್ನು ಕಾಂಗ್ರೆಸ್ ಭದ್ರಕೋಟೆಯನ್ನಾಗಿ ಮಾಡುವಲ್ಲಿ ಅವರ ಶ್ರಮ ಅಪಾರ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡಬೇಕ. ಒಂದು ವೇಳೆ ನೀಡದಿದ್ದರೆ, ಮುಂದಿನ ಚುನಾವಣೆಯಲ್ಲಿ ಕುರುಬ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ಐಸಿಎಐಗೆ ವಿನಯ್ ಮೃತ್ಯುಂಜಯ ನೇಮಕ



ಬೆಂಗಳೂರು: ಭಾರತೀಯ ಲೆಕ್ಕ ಪರಿಶೋಧಕರ ಸಂಘದ (ಐಸಿಎಐ) ಮೌಲ್ಯ ಮಾಪನ ಮಂಡಳಿ ಸಮಿತಿಗೆ ಬೆಂಗಳೂರು ಮೂಲದ ವಿನಯ್ ಮೃತ್ಯುಂಜಯ ಅವರನ್ನು 2026-27ನೇ ಸಾಲಿಗೆ ನಾಮನಿರ್ದೇಶನ ಮಾಡಲಾಗಿದೆ. ದೆಹಲಿಯ ಇನ್ಸ್ಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಅಧ್ಯಕ್ಷ ಪ್ರಸನ್ನ ಕುಮಾರ್ ಅವರು ಬೆಂಗಳೂರು ಮೂಲದ ಚಾರ್ಟರ್ಡ್ ಅಕೌಂಟೆಂಟ್ ಮತ್ತು ಇನ್ಸಾಲ್ವೆನ್ಸಿ ವೃತ್ತಿಪರ ವಿನಯ್ ಮೃತ್ಯುಂಜಯ ಅವರನ್ನು 2026-27ನೇ ಸಾಲಿಗೆ ಐಸಿಎಐ ಕೌನ್ಸಿಲ್‌ನ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ. ಈ ನಾಮ ನಿರ್ದೇಶನವು ವಿನಯ್ ಅವರ ವ್ಯಾಪಕ ವೃತ್ತಿಪರ ಅನುಭವ ಮೌಲ್ಯಮಾಪನ ಮತ್ತು ಕಾರ್ಪೊರೇಟ್ ಸಲಹಾ ಸೇವೆಗಳ ಕ್ಷೇತ್ರಗಳಿಗೆ ನೀಡಿದ ಮಹತ್ವದ ಕೊಡುಗೆಗಳನ್ನು ಗುರುತಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸಂಡೂರು: ಕಾರ್ತಿಕೇಯ ಘೋರ್ಪಡೆ ನಿಧನ



ಬಳ್ಳಾರಿ: ಜಿಲ್ಲೆಯ ಸಂಡೂರು ರಾಜವಂಶಕ್ಕೆ ಸೇರಿದ ಕಾರ್ತಿಕೇಯ ಘೋರ್ಪಡೆ ಅವರು ಮಂಗಳವಾರ ನಿಧನರಾಗಿದ್ದಾರೆ. ಬೆಂಗಳೂರಿನ ನಿವಾಸದಲ್ಲಿ ಬೆಳಗ್ಗೆ 6 ಗಂಟೆ ಸುಮಾರಿಗೆ ಹೃದಯಾಘಾತದಿಂದ ಅವರು ಮೃತಪಟ್ಟರು. ಕಾರ್ತಿಕೇಯ ಘೋರ್ಪಡೆ ಅವರು ಸಂಡೂರು ಸಂಸ್ಥಾನದ ರಾಜ ಹಾಗೂ ಮಾಜಿ ಸಚಿವ ಎಮ್, ವೈ, ಘೋರ್ಪಡೆ ಅವರ ಪುತ್ರರಾಗಿದ್ದರು. ರಾಜಕೀಯ ಕ್ಷೇತ್ರದಲ್ಲೂ ಅವರು ಗುರುತಿಸಿಕೊಂಡಿದ್ದರು. ಬಳ್ಳಾರಿ ಜಿಲ್ಲಾ ಬಿಜೆಪಿಯಲ್ಲಿ ಕಾರ್ತಿಕೇಯ ಘೋರ್ಪಡೆ ಅವರ ಸಾಕಷ್ಟು ಪ್ರಭಾವ ಇತ್ತು. ಪಕ್ಷದ ಹಲವು ಚಟುವಟಿಕೆಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮಂಗಳವಾರ ಸಂಜೆ ಸಂಡೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
10.06.2026
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಹರಿಭಕ್ತಿಸಾರ

vishwavani.news

ದಿನ ವಿಶೇಷ

10 ಜೂನ್ 2026 ಬುಧವಾರ

» ಸೂರ್ಯೋದಯ	: 5-41
» ಸೂರ್ಯಾಸ್ತ	: 7-10
» ತಿಥಿ	: ದಶಮಿ
» ನಕ್ಷತ್ರ	: ಉತ್ತರಭಾದ್ರಪದ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ

ಆರ್‌ಎಸ್‌ಎಸ್‌ನ ನೊಂದಣಿ ದಾಖಲೆ ಸಿದ್ಧಪಡಿಸಿಕೊಳ್ಳಿ ಎಂದು ಸಚಿವ ಖರ್ಗೆ ಟ್ವೀಟ್: ಬಿಜೆಪಿ ಕಿಡಿ
ನಿಮ್ಮಪ್ಪನಿಂದಲೇ ಏನು ಮಾಡಲಾಗಿಲ್ಲ, ನೀವೇನು ಮಾಡುವಿರಿ ಎಂದು ತಿರುಗೇಟು ಕೊಟ್ಟ ಸಿ.ಟಿ.ರವಿ

ಸಂಘದ ವಿರುದ್ಧ ಪ್ರಿಯಾಂಕ್ ಮತ್ತೆ ಕಹಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರೀಯ ಸ್ವಯಂಸೇವಾ ಸಂಘ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ನಡುವಿನ ಕಿತ್ತಾಟ ಮುಂದುವರಿದಿದ್ದು, ನೊಂದಣಿಗೆ ಅಗತ್ಯ ದಾಖಲೆಗಳನ್ನು ಆರ್‌ಎಸ್‌ಎಸ್ ಸಿದ್ಧವಾಗಿಟ್ಟುಕೊಳ್ಳಲಿ ಎಂದು ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಗೃಹ ಇಲಾಖೆ ಒಬ್ಬರು ಅಸಮರ್ಥ ಸಚಿವರ ಕೈಯಲ್ಲಿ ಸಿಲುಕಿಕೊಂಡಿದೆ ಎನ್ನುವ ಬಿಜೆಪಿ ಟೀಕಿಸಿದ್ದರು. ಇದಕ್ಕೆ ತಿರುಗೇಟು ನೀಡಿರುವ ಖರ್ಗೆ, 'ನೊಂದಣಿಗೆ ಅಗತ್ಯವಿರುವ ದಾಖಲೆಗಳನ್ನು ರೆಡಿಯಾಗಿ ಇಟ್ಟುಕೊಳ್ಳಲು 'ಆರ್‌ಎಸ್‌ಎಸ್‌ಗೆ ತಿಳಿಸಿ' ಎಂದಿದ್ದಾರೆ.

ಸುಧೀರ್ ಬಂಗೇರ ಎಂಬ ವ್ಯಕ್ತಿಯಿಂದ ಬಂದ ಜೀವ ಬೆದರಿಕೆಯ ಟ್ವೀಟ್ ರೀ ಪೋಸ್ಟ್ ಮಾಡಿದ್ದು, ನಾನು ಗೃಹ ಸಚಿವನಾಗಿ ಅಧಿಕಾರ ವಹಿಸಿಕೊಂಡು 48 ಗಂಟೆಗಳು ಕೂಡ ಆಗಿಲ್ಲ, ನಿಮ್ಮ ಭಯ, ನಿಮ್ಮಲ್ಲಿನ ಆತಂಕ, ನಿಮ್ಮಲ್ಲಿನ ದುಗುಡ ಎಲ್ಲವೂ ವ್ಯಕ್ತವಾಗುತ್ತಿದೆ ಮತ್ತು ಈಗಾಗಲೇ ಆರ್‌ಎಸ್‌ಎಸ್ ಅನ್ನು ಬಳಸಿಕೊಂಡು ನನ್ನನ್ನು ನಿಂದಿಸುತ್ತಿದ್ದೀರಿ. ನನಗೆ ಜೀವ ಬೆದರಿಕೆ ಹಾಕುತ್ತಿದ್ದೀರಿ. ನೀವು ಮಾಡುವುದನ್ನು ಮಾಡಿ. ಮುಖ್ಯವಾಗಿ, ನಿಮ್ಮ ರಾಜಕೀಯ ಮೇಲಾಧಿಕಾರದ ಸಂಘಟನೆಯ ನೊಂದಣಿಗಾಗಿ ದಾಖಲೆಗಳನ್ನು ಸಿದ್ಧವಾಗಿಡಲು ಹೇಳಿ ಎಂದು ತಿರುಗೇಟು ನೀಡಿದ್ದಾರೆ.

ಕಳೆದ ವರ್ಷದ ವಿಜಯದಶಮಿಯ ಸಂಘದ ಪಥಸಂಚಲನದ ಕಾರ್ಯಕ್ರಮದ ನಂತರ ಪ್ರಿಯಾಂಕ್ ಖರ್ಗೆ ಮತ್ತು ಆರ್‌ಎಸ್‌ಎಸ್, ಬಿಜೆಪಿ ನಡುವಿನ ಸಂಘರ್ಷ ತಾರಕಕ್ಕೇರಿತ್ತು. ಯಾವುದೇ ಸರಕಾರಿ ಸ್ಥಳಗಳಲ್ಲಿ, ಮುಜರಾಯಿ ದೇವಾಲಯಗಳ ವ್ಯಾಪ್ತಿಯಲ್ಲಿ ಕಾರ್ಯಕ್ರಮ ನಡೆಸುವ ಮುನ್ನ, ಸರಕಾರದ ಅನುಮತಿಯನ್ನು ಪಡೆಯಬೇಕು ಎಂದು ಅಂದಿನ ಸಿದ್ದರಾಮಯ್ಯ ಸರಕಾರ ಕಾನೂನು ಜಾರಿಗೆ ತಂದಿತ್ತು. ಇದು, ಪ್ರಿಯಾಂಕ್ ಮತ್ತು ಬಿಜೆಪಿ ನಡುವಿನ ತಿಕ್ಕಾಟಕ್ಕೆ ಕಾರಣವಾಗಿತ್ತು.

ಪ್ರಿಯಾಂಕ್ ಟ್ವೀಟ್‌ಗೆ ತಿರುಗೇಟು ನೀಡಿದ ಸಿ.ಟಿ.ರವಿ, ಅಕ್ರಮ ಬಾಂಗ್ಲಾ ನಿವಾಸಿಗಳಿದ್ದಾರೆ. ಮಾದಕ ವ್ಯಸನ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಆ ಕಡೆ ಗಮನ ಕೊಡಿ. ಮಹಿಳೆಯರು ನಾಪತ್ತೆ ಆಗುತ್ತಿದ್ದಾರೆ. ಇಲ್ಲೇ ಇದ್ದು ಬಾಂಬ್ ತಯಾರು ಮಾಡುವವರ ಬಗ್ಗೆ ಗಮನ ಕೊಡಿ. ಆರ್‌ಎಸ್‌ಎಸ್ ದೇಶದ್ರೋಹಿ ಸಂಘಟನೆ ಅಲ್ಲ. ಅದ ರಿಂದ ಅಪಾಯವೂ ಇಲ್ಲ. ನೀವು ಗೃಹ ಸಚಿವರು, ಗೂಂಡಾ ಅಲ್ಲ. ಗೃಹ ಸಚಿವರತರ ವರ್ತಿಸಿ. ದಬ್ಬಾಳಿಕೆ ಮಾಡಿದರೆ ಪಶ್ಚಿಮ ಬಂಗಾಳದ ರೀತಿ ಆಗಬಹುದು ಎಂಬ ಎಚ್ಚರಿಕೆ ವಹಿಸಿ. ಮಹಾರಾಷ್ಟ್ರ ಪೊಲೀಸರು ಬಂದು ಇಲ್ಲಿ ಅಕ್ರಮ ಪತ್ತೆ ಮಾಡುತ್ತಾರೆ. ಆ ಬಗ್ಗೆ ಪೊಲೀಸರಿಗೆ ಕೇಳಿ. ಬೆಂಕಿ ಹಚ್ಚುವ ಕೆಲಸ ಮಾಡಬೇಡಿ ಎಂದು ಎಚ್ಚರಿಸಿದ್ದಾರೆ.

ಸಂಘವನ್ನು ಏನೂ ಮಾಡಲಾಗಲ್ಲ

ಪ್ರಿಯಾಂಕ್ ಖರ್ಗೆ ಎಚ್ಚರಿಕೆಗೆ ತಿರುಗೇಟು ನೀಡಿರುವ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆ ಅವರ ಅಪ್ಪನಿಂದಲೇ ಏನೂ ಮಾಡಲು ಆಗಿಲ್ಲ. ಬೆಂಕಿ ಹಚ್ಚೋ ಕೆಲಸ ಮಾಡಬೇಡಿ. ಆ ಬೆಂಕಿ ನಿಮ್ಮನ್ನೂ ಸುಡುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. 'ಐ ವಿಲ್ ಕ್ರಶ್ ಆರ್‌ಎಸ್‌ಎಸ್' ಎಂದು ನೆಹರು ಹೇಳಿದ್ದರು. ಪ್ರಿಯಾಂಕ್ ಖರ್ಗೆ ಅವರ ಅಪ್ಪನಿಂದಲೇ ಏನೂ ಮಾಡಲು ಆಗಿಲ್ಲ. ಇವು ನಿಮ್ಮ ಪಕ್ಷದ ಅಧಿಕಾರದ ಕೊನೆ ದಿನಗಳು. ನಿಮ್ಮಪ್ಪನಾಣೆ ಮತ್ತೆ ಅಧಿಕಾರಕ್ಕೆ ಬರಲ್ಲ. ಆರ್‌ಎಸ್‌ಎಸ್ ರಾಜಕೀಯಪ್ರೇರಿತ ಅಲ್ಲ. ನೋಂದಣಿ ಮಾಡಿಕೊಳ್ಳಲು ಅದು ವ್ಯವಹಾರಿಕ ಸಂಘಟನೆಯಲ್ಲ ಎಂದು ಟೀಕಿಸಿದ್ದಾರೆ.

ಪ್ರಿಯಾಂಕ್ ರೀ ಪೋಸ್ಟ್

- ಬಂಗೇರ ಎಂಬಾತನಿಂದ ಜೀವ ಬೆದರಿಕೆ ಟ್ವೀಟ್
- ನಿಮ್ಮಲ್ಲಿನ ದುಗುಡ ವ್ಯಕ, ಇದಕ್ಕೆ ಪ್ರಿಯಾಂಕ್ ರೀ ಪೋಸ್ಟ್
- ಗೃಹ ಸಚಿವನಾದ ಬೆನ್ನಲ್ಲೇ ಜೀವ ಬೆದರಿಕೆ ಹಾಕುತಿದ್ದೀರಿ
- ಆರ್‌ಎಸ್‌ಎಸ್ ನೊಂದಣಿ ದಾಖಲೆ ಸಿದ್ಧವಾಗಿಡಲು ಹೇಳಿ ಎಂದು ಪೋಸ್ಟ್

ಶ್ರೀ ರಾಮ ದಶರಥನ ಮಗನಲ್ಲ: ಭಗವಾನ್

ದಾವಣಗೆರೆ: ಪ್ರೊ.ಭಗವಾನ್ ಮತ್ತೊಮ್ಮೆ ಭಗವಂತ ಶ್ರೀರಾಮನ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಶ್ರೀರಾಮ ದಶರಥನಿಗೆ ಹುಟ್ಟಿದವ ಅಲ್ಲ. ದಶರಥ ಪುತ್ರ ಕಾಮೇಷ್ಠಿ ಪೂಜೆ ಮಾಡುತ್ತಾನೆ. ಆ ಪೂಜೆಯಲ್ಲಿ ರಾಣಿ ಪುರೋಹಿತರ ಜತೆ ರಾತ್ರಿ ಮಲಗಬೇಕು. ಅಂದರೆ ನೀವೇ ಅರ್ಥ ಮಾಡಿಕೊಳ್ಳಿ ಎಂದು ಹೇಳಿದ್ದಾರೆ.

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿರುವ ಬಿ.ಕೃಷ್ಣಪ್ಪ ಮೈತ್ರಿವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಭಗವಾನ್, ರಾಮಮಂದಿರ ಏಕೆ ಬೇಕು ಎನ್ನುವ ಪುಸ್ತಕದಲ್ಲಿ ನಾನು ಈ ಬಗ್ಗೆ ಬರೆದಿದ್ದೇನೆ. ವಾಲ್ಮೀಕಿ ರಾಮಾಯಣದಲ್ಲಿ ಇದರ ಬಗ್ಗೆ ಉಲ್ಲೇಖಿಸಿರೋದಾಗಿ ಹೇಳಿದ್ದಾರೆ. ಶೂದ್ರನಾದ ಶಂಭೂಕನನ್ನು ರಾಮ ಸಾಯಿಸಿದ್ದಾನೆ. ಇಂಥವರು ನಮಗೆ ಆದರ್ಶ ವ್ಯಕ್ತಿಯಾಗಬೇಕಾ? ಮೊದಲು ನಿಮ್ಮ ಮೇಲೆ ನೀವು ನಂಬಿಕೆ ಬೆಳಸಿಕೊಳ್ಳಿ. ಶೂದ್ರರೆಲ್ಲರೂ ಬ್ರಾಹ್ಮಣರ ಗುಲಾಮರು ಎಂದು ಮನಸ್ಮೃತಿ ಹೇಳುತ್ತೆ. ಅಂಬೇಡ್ಕರ್ ಈ ಗುಲಾಮಗಿರಿಯಿಂದ ಜನತೆಗೆ ಮುಕ್ತಿ ಕೊಡಿಸಿದ್ದಾರೆ ಎಂದು ಭಗವಾನ್ ಹೇಳಿದರು. ಸ್ವಾಮಿ ವಿವೇಕಾನಂದರು ತಾವು ಬೌದ್ಧ ಧರ್ಮಕ್ಕೆ ಸೇರಿದವರು ಎಂದು ಹೇಳಿಕೊಂಡಿದ್ದಾರೆ ಎಂದು ಉಚ್ಚರಿಸಿದರು.

ದಕ್ಷಿಣ ಭಾರತದ ಶ್ರೀಲಂಕಾ ಡೆಪ್ಯೂಟಿ ಹೈಕಮಿಷನರ್ ಡಾ.ಗಣೇಶನಾಥನ್ ಗೆತಿಶ್ವರನ್ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದ ಕಚೇರಿಯಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.



ಪುದುಚೇರಿ ಮಾಜಿ ಸಿಎಂ ನಾರಾಯಣಸ್ವಾಮಿ ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ವಿಧಾನಸೌಧದ ಕಚೇರಿಯಲ್ಲಿ ಮಂಗಳವಾರ ಭೇಟಿ ಮಾಡಿ ಹೂ ಗುಚ್ಛ ನೀಡಿ ಅಭಿನಂದಿಸಿದರು.

ಡಿಕೆಶಿ ನಾಯಕತ್ವ ಪಕ್ಷ ಸಂಪೂರ್ಣವಾಗಿ ಒಪ್ಪಿಲ್ಲ



ಹಾವೇರಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಾಯಕತ್ವವನ್ನು ಕಾಂಗ್ರೆಸ್‌ನಲ್ಲಿ ಸಂಪೂರ್ಣ ಒಪ್ಪಿಕೊಂಡಿಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಡಿಕೆಶಿ ಅವರು ತೆಗೆದುಕೊಳ್ಳುವ ನಿರ್ಣಯಗಳ ಮೇಲೆ ಅವರಿಗೆ ಸವಾಲುಗಳು ಎದುರಾಗುತ್ತವೆ. ಅವರನ್ನು ಟ್ರಬಲ್ ಶೂಟರ್ ಅನ್ನುತ್ತಾರೆ. ಆದರೆ ಅವರಿಗೇ ಟ್ರಬಲ್ ಶೂಟರ್ ಯಾರೂ ಇಲ್ಲ, ಈಗ ಅವರ ನಿರ್ಣಯಗಳೇ ಅಂತಿಮ, ಅವರು ಇನ್ನೂ ವಿಶ್ವಾಸಾರ್ಹತೆ ಗಳಿಸಬೇಕು ಎಂದರು.

ಸಿದ್ದರಾಮಯ್ಯ ಅವರ ನಾಯಕತ್ವವನ್ನು ಹೇಗೆ ಸಾಮೂಹಿಕವಾಗಿ ಒಪ್ಪಿಕೊಂಡಿದ್ದರೋ ಹಾಗೆ ಇವರನ್ನು ಪೂರ್ತಿ ಒಪ್ಪಿಕೊಂಡಿಲ್ಲ. ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಾರೋ ಇಲ್ಲವೋ ನೋಡಬೇಕು ಎಂದು ಹೇಳಿದರು.

ಬಿಜೆಪಿಯ ಕೆಲ ಸಂಸದರು ರಾಜ್ಯ ರಾಜಕಾರಣಕ್ಕೆ ಬರುತ್ತಿದ್ದಾರಾ ಎನ್ನುವ ಪ್ರಶ್ನೆಗೆ, ವಾಟ್ಸಾಪ್ ಯುನಿವರ್ಸಿಟಿಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವುದಿಲ್ಲ. ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಬಿಜೆಪಿ ಮುಂದಿನ ದಿನಗಳಲ್ಲಿ ಅಧಿಕಾರಕ್ಕೆ ಬಂದೇ ಬರುತ್ತದೆ. ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಮ್ಮದು ಸಂಘಟಿತ ಹೋರಾಟ ಇರುತ್ತದೆ ಎಂದು ಹೇಳಿದರು.

ಜೆಡಿಎಸ್-ಬಿಜೆಪಿ ಮೈತ್ರಿ ಸಮಸ್ಯೆಯಾಗಿಲ್ಲ. ಪಕ್ಷದ ಹೈಕಮಾಂಡ್ ಎಲ್ಲವನ್ನು ತೀರ್ಮಾನ ಮಾಡಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚೆ ಆಗಿಲ್ಲ. ನಾವು ವಿಶೇಷವಾಗಿ ಒಬಿಸಿ, ಎಸ್ಸಿ ಎಸ್ಟಿ ಸಂಘಟಿಸಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ ಎಂದರು.

ಹಾವೇರಿಗೆ ಸಚಿವ ಸ್ಥಾನ ನೀಡಲಿ

ಹಾವೇರಿಯಲ್ಲಿ ತಮ್ಮಿಂದ ಕಿರುಕುಳ ಆಗುತ್ತಿದೆ ಎಂಬ ಕಾಂಗ್ರೆಸ್ ಶಾಸಕರ ಆರೋಪ ಕುರಿತು, ಇಲ್ಲಿ ಸಚಿವರಾಗುವುದಕ್ಕೂ ನಮಗೂ ಏನೂ ಸಂಬಂಧ ಇಲ್ಲ. ನಮ್ಮ ರಾಜಕಾರಣ ಎಲ್ಲರಿಗೂ ಗೊತ್ತಿದೆ. ನನ್ನ ಹೆಸರು ಬಳಸಿಕೊಂಡು ಸ್ಥಾನ ಗಿಟ್ಟಿಸುವ ಪಯತ್ನ ನಡೆಯುತ್ತಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾವೇರಿ ಜಿಲ್ಲೆಗೆ ಸಚಿವ ಸ್ಥಾನ ಕೊಡಬೇಕು. ಸ್ಥಳೀಯರಿಗೆ ಜಿಲ್ಲಾ ಉಸ್ತುವಾರಿ ನೀಡಬೇಕು. ಆಗ ಜಿಲ್ಲೆಯ ಸಮಸ್ಯೆಗಳಿಗೆ ಸ್ಪಂದನೆ ಆಗುತ್ತದೆ. ಕಳೆದ ಬಾರಿ ಜಿಲ್ಲೆ ವಂಚಿತ ಆಗಿದೆ. ಯಾರಿಗೆ ಸಚಿವ ಸ್ಥಾನ ಕೊಡಬೇಕು ಎನ್ನುವುದು ಅವರಿಗೆ ಅವರ ಪಕ್ಷಕ್ಕೆ ಬಿಟ್ಟಿದ್ದು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಯುವ ಕಾಂಗ್ರೆಸ್ ಮುಖಂಡ ಸೇರಿ ಇಬ್ಬರ ಸೆರೆ
ಹನಿಟ್ರ್ಯಾಪ್: ₹2.77 ಕೋಟಿ ಲೂಟಿ

ಮಂಗಳೂರು: ನಗರದಲ್ಲಿ ಗುತ್ತಿಗೆ ಕಂಪನಿ ನಡೆಸುತ್ತಿದ್ದ ಉದ್ಯಮಿಗೆ ಕಂಪನಿಯ ಇಬ್ಬರು ಕೆಲಸಗಾರರೇ ಹನಿಟ್ರ್ಯಾಪ್ ಹಾಗೂ ಬ್ಲ್ಯಾಕ್ ಮೇಲ್ ಮಾಡಿ 2.77 ಕೋಟಿ ರು.ವಸೂಲಿ ಮಾಡಿ, ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುವ ಬಗ್ಗೆ ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿತೇಶ್ ಮತ್ತು ನಿಜಾಮ್ ಅಲಿಯಾಸ್ ಇಬ್ರಾಹಿಂ ಹನಿಟ್ರ್ಯಾಪ್ ಮಾಡಿರುವ ಆರೋಪಿಗಳು. ಇವರಲ್ಲಿ ನಿಜಾಮ್ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ. ಆರೋಪಿಗಳಿಬ್ಬರನ್ನು ಉರ್ವ ಪೊಲೀಸರು ಬಂಧಿಸಿದ್ದಾರೆ.

2024ರಿಂದ ಬೆದರಿಕೆ: 2024ರ ಜನವರಿಯಲ್ಲಿ ಜಿತೇಶ್ ಎಂಬಾತ ಉದ್ಯಮಿಯ ಮೊಬೈಲ್‌ಗೆ ಕರೆ ಮಾಡಿ ಅವರು ಮತ್ತು ಆತ ಒಟ್ಟಿಗೆ ಇರುವ ಅಶ್ಲೀಲ ಫೊಟೊವನ್ನು ಕಳುಹಿಸಿ, ವಿಡಿಯೊ ಕೂಡಾ ಇರುವುದಾಗಿ ಹೇಳಿದ್ದಲ್ಲದೆ, ಅದನ್ನು ವೈರಲ್ ಮಾಡುವುದಾಗಿ ಜತೆಗೆ ಅವರ ಹೆಂಡತಿಗೂ ಕಳುಹಿಸುವುದಾಗಿ ಬೆದರಿಕೆ ಹಾಕಿ 35 ಲಕ್ಷ ರು.ಗೆ ಬೇಡಿಕೆಯಿಟ್ಟಿದ್ದ. ದೂರುದಾರರು ಮರ್ಯಾದೆ ಹೋಗುತ್ತದೆ ಎಂದು ಆತ ತಿಳಿಸಿದಂತೆ ಫೆಬ್ರವರಿಯಲ್ಲಿ ಕದ್ರಿ ಬಳಿಯ ಹೋಟೆಲ್‌ವೊಂದಕ್ಕೆ ಹೋಗಿದ್ದಾರೆ. ಅಲ್ಲಿ ಜಿತೇಶ್ 35 ಲಕ್ಷ ರು. ಕೊಡದಿದ್ದರೆ ಸುಮ್ಮನೆ ಬಿಡುವುದಿಲ್ಲ ಮತ್ತು ಕೊಲೆ ಮಾಡುವುದಾಗಿ ಬೆದರಿಸಿದ್ದಾನೆ.

ಆತನಿಗೆ ಹೆದರಿ ತನ್ನ ಬ್ಯಾಂಕ್ ಖಾತೆಯ 10 ಲಕ್ಷ ರು. ಮೊತ್ತದ 2 ಚೆಕ್ ಮತ್ತು 15 ಲಕ್ಷದ ಒಂದು ಚೆಕ್ ನೀಡಿದ್ದಾರೆ. ಅದರಲ್ಲಿ 10 ಲಕ್ಷದ 2 ಚೆಕ್‌ನಲ್ಲಿದ್ದ 20 ಲಕ್ಷ ರುಪಾಯಿಯನ್ನು ಜಿತೇಶ್ ವರ್ಗಾಯಿಸಿಕೊಂಡಿದ್ದಾನೆ. ಅಲ್ಲದೇ ಆರೋಪಿಗಳಿಬ್ಬರು ಇನ್ನು ಹೆಚ್ಚಿನ ಹಣಕ್ಕೆ ಬೇಡಿಕೆ ನಿರಂತರವಾಗಿ ಬೇಡಿಕೆ ಇಟ್ಟಿದ್ದಾರೆ. ಇವರ ಕಿರುಕುಳ ತಾಳದೇ ಉದ್ಯಮಿ ಪೊಲೀಸರ ಮೊರೆ ಹೋಗಿದ್ದರು. ಸದ್ಯ ಇಬ್ಬರನ್ನು ಬಂಧಿಸಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಪಕ್ಷದ ಸದಸ್ಯತ್ವದಿಂದ ನಿಜಾಮ್‌ನ ಉಚ್ಚಾಟನೆ

ಹನಿಟ್ರ್ಯಾಪ್ ಪ್ರಕರಣದಲ್ಲಿ ಬಂಧಿತನಾಗಿರುವ ನಿಜಾಮ್ ಅವರನ್ನು ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಮತ್ತು ಯುವ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ ಎಂದು ಯುವ ಕಾಂಗ್ರೆಸ್ ದ.ಕ ಜಿಲ್ಲಾ ಅಧ್ಯಕ್ಷ ಇಬ್ರಾಹಿಂ ನವಾಜ್ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮೋದಿ ಆಡಳಿತ ದಾಖಲೆ: ರಾಜ್ಯಾದ್ಯಂತ ಪೂಜೆ

ಬೆಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿರುವ ಸಂಬಂಧಧಿಂದು ರಾಜ್ಯಾದ್ಯಂತ ದೇವಸ್ಥಾನಗಳಲ್ಲಿ ಮೋದಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನೆರವೇರಿಸಲಾಗುವುದು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಉಪಸ್ಥಿತರಿರುವರು. ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗ್ರವಾಲ್ ಅವರು ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ, ಸಹ ಉಸ್ತುವಾರಿ ಸುಧಾಕರ ರೆಡ್ಡಿ ಅವರು ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ಪ್ರತಿಪಕ್ಷ ನಾಯಕ ಆರ್. ಅಶೋಕ ಬನಶಂಕರಿಯಲ್ಲಿ ಪೂಜೆ ಸಲ್ಲಿಸಲಿದ್ದಾರೆ ಎಂದರು.

ಮೋದಿ ಅವರು 4398 ದಿನಗಳ ಯಶಸ್ವಿ ಆಡಳಿತದ ಮೂಲಕ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನಡೆಸಲಾಗುತ್ತಿದೆ. ಶಾಸಕ ಗೋಪಾಲಯ್ಯ ಮಹಾಲಕ್ಷ್ಮಿ ಲೇಔಟ್‌ನ ಶ್ರೀವೀರಾಂಜನೇಯ ದೇವಸ್ಥಾನದಲ್ಲಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಶಾಂತಿನಗರ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆಯಲ್ಲಿ ಭಾಗವಹಿಸುವರು.

ವಿಭೂತಿ ಫಾಲ್ಸ್‌ಗೆ ನಿರ್ಬಂಧ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಸತತವಾಗಿ ಸುರಿಯುತ್ತಿರುವ ಮಳೆ ಹಿನ್ನೆಲೆ ಪ್ರವಾಸಿಗರ ಹಿತದೃಷ್ಟಿಯಿಂದ ಅಂಕೋಲ ತಾಲೂಕಿನ ವಿಭೂತಿ ಜಲಪಾತಕ್ಕೆ ಪ್ರವಾಸಿಗರಿಗೆ ತಾತ್ಕಾಲಿಕ ನಿರ್ಬಂಧ ಹೇರಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ವಿಭೂತಿ ಫಾಲ್ಸ್ ಯಾಣದ ಸಮೀಪ ಬರುತ್ತದೆ. ಹೆಚ್ಚು ಪ್ರವಾಸಿಗರು ಬರುವುದರಿಂದ ಅಪಾಯ ಸಾಧ್ಯತೆ ಹಿನ್ನಲೆಯಲ್ಲಿ ಜಿಲ್ಲಾಡಳಿತದ ಸೂಚನೆಮೇರೆಗೆ ಹೊಸಕಂಬಿ ಅರಣ್ಯ ಇಲಾಖೆ ವತಿಯಿಂದ ನಿರ್ಬಂಧ ಆದೇಶ ಮಾಡಲಾಗಿದೆ. ಮಳೆಗಾಲದಲ್ಲಿ ದುಮ್ಮಿಕ್ಕುವ ವಿಭೂತಿ ಜಲಪಾತ ಪ್ರವಾಸಿಗರನ್ನ ಹೆಚ್ಚು ಸೆಳೆಯುತ್ತದೆ. ಪ್ರಸಿದ್ಧ ಯಾಣ ಭಾಗದಲ್ಲಿ ಇರುವುದರಿಂದ ಪ್ರವಾಸಿಗರು ಹೆಚ್ಚು ಬರುತಿದ್ದರು. ಈ ವರ್ಷವೂ ಜೂನ್ ಎರಡನೇ ವಾರದಲ್ಲೇ ನಿರ್ಬಂಧ ಹೇರಲಾಗಿದೆ.

ದಾವಣಗೆರೆ: ಮಹಿಳೆಯ ವಿಡಿಯೊ, ಫೋಟೊ ರೆಕಾರ್ಡ್ ಮಾಡಿ ವಿಕೃತಿ
ಗ್ಯಾಂಗ್ ರೇಪ್: 10 ಮಂದಿ ಸೆರೆ

ದಾವಣಗೆರೆ: ಪತಿಯೊಂದಿಗೆ ಜಗಳವಾಡಿ ತವರಿಗೆ ತೆರಳುತ್ತಿದ್ದ ಮಹಿಳೆಯ ಮೇಲೆ ದುರುಳರು ಸಾಮೂಹಿಕ ಅತ್ಯಾಚಾರವೆಸಗಿದ ಘಟನೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಬಸವಾ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

41 ವರ್ಷದ ಮಹಿಳೆಯ ಮೇಲೆ ದುರುಳರು ಅತ್ಯಾಚಾರವೆಸಗಿದ್ದಾರೆ. ಜೂನ್ 3ರಂದು ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಘಟನೆ ಸಂಬಂಧ ಮಂಗಳವಾರ ದೂರು ದಾಖಲಿಸಲಾಗಿದೆ. ಮಹಿಳೆ ಪತಿ ಜತೆ ಜಗಳವಾಡಿ ತವರಿಗೆ ಹೊರಟ್ಟಿದ್ದರು. ಈ ವೇಳೆ ಹಂದಿ ಬೇಟೆಗೆ ತೆರಳಿದ್ದ ಯುವಕರು ಮಹಿಳೆಯನ್ನು ಗಮನಿಸಿ, ಸುಸ್ತಾಗಿದಿಯಾ ಕೂಲ್ ಡ್ರಿಂಕ್ಸ್ ಕುಡಿ ಅಕ್ಕ ಎಂದು ಕೂಲ್ ಡ್ರಿಂಕ್ಸ್‌ನಲ್ಲಿ ಮದ್ಯ ಬೆರೆಸಿ ಕುಡಿಸಿದ್ದರು. ಬಳಿಕ ತೋಟಕ್ಕೆ ಕರೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ. ರಾತ್ರಿಯಿಂದ ಮುಂಜಾನೆಯವರೆಗೂ ಯುವಕರ ಗುಂಪು ವಿಕೃತಿ ಮೆರೆದಿತ್ತು. ಬಳಿಕ ಬೆತ್ತಲೆ ಫೋಟೊ, ವಿಡಿಯೊ ಮಾಡಿಕೊಂಡು ಆರೋಪಿಗಳು ವಿಕೃತ ಸಂತೋಷ ಪಟ್ಟಿದ್ದರು. ಅಲ್ಲದೇ ಫೋಟೊ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು.

ಸ್ಥಳಕ್ಕೆ ಎಸ್‌ಪಿ ಡಾ.ಎಚ್.ಟಿ. ಶೇಖರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸಂತ್ರಸ್ತ ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಬಂಧಿತ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ತಮ್ಮ ಕಸ್ಟಡಿಗೆ ಪೊಲೀಸರು ತೆಗೆದುಕೊಂಡು ಪ್ರಕರಣದ ತನಿಖೆ ನಡೆಸಿದ್ದಾರೆ.

ನಡೆದದ್ದೇನು?

- ಜೂ.3 ರಂದು ಗಂಡನ ಜತೆ ಗಲಾಟೆ
- ಸಿಟ್ಟಿನಲ್ಲಿ ತವರು ಮನೆಗೆ ಹೊರಟಮಹಿಳೆ
- ದಾರಿಯಲ್ಲಿ ಮಹಿಳೆಯ ಅಡ್ಡಗಟ್ಟಿದ ಗುಂಪು
- ಕೂಲ್ ಡ್ರಿಂಕ್ಸ್‌ನಲ್ಲಿ ಮದ್ಯ ಬೆರೆಸಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ಯಲೋದಹಳ್ಳಿಯವರು

ಪ್ರಕರಣ ಗಂಭೀರವಾಗುತ್ತಿದ್ದಂತೆ ಆರೋಪಿಗಳು ವಿಡಿಯೊ ಡಿಲೀಟ್ ಮಾಡಿದ್ದಾರೆ. ಪ್ರಕರಣ ಸಂಬಂಧ ಇಸ್ತ್ರಿ ನಾಗರಾಜ್, ನಾಗರಾಜ್, ಅರ್ಜುನಾ, ಬಸವಂತ, ಕುಂದೂರು ಮಾರುತಿ, ಹೆಗ್ಗ ಮಾರುತಿ, ಮನು, ಸುನೀಲ್, ಪ್ರದೀಪ್, ಮಧು ಬಂಧನ. ಆರೋಪಿಗಳೆಲ್ಲ ಯಲೋದಹಳ್ಳಿಯವರು.

ಬೈಲಹೊಂಗಲದಲ್ಲಿ 8 ಮನೆಗಳು ನೆಲಸಮ | ಸಂತ್ರಸ್ತರ ಪರದಾಟ, ಸೂಕ್ತ ಪರಿಹಾರಕ್ಕೆ ಆಗ್ರಹ
ಬೆಳಗಾವಿ ಜಿಲ್ಲೆಯ ಹಲವೆಡೆ ವರುಣಾರ್ಭಟ

ಬೈಲಹೊಂಗಲ (ಬೆಳಗಾವಿ): ಜಿಲ್ಲೆಯ ಬೈಲಹೊಂಗಲ, ಸವದತ್ತಿ, ಕಿತ್ತೂರು ಸೇರಿದಂತೆ ವಿವಿಧ ತಾಲೂಕುಗಳಲ್ಲಿ ಸೋಮವಾರ ತಡರಾತ್ರಿವರೆಗೂ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಮಳೆಯ ಆರ್ಭಟಕ್ಕೆ ಬೈಲಹೊಂಗಲದಲ್ಲಿ ಎಂಟು ಮನೆಗಳು ನೆಲಕ್ಕುರುಳಿದ್ದು ಜನರ ಬದುಕು ಬೀದಿಗೆ ಬಿದ್ದಿದೆ.

ಬೈಲಹೊಂಗಲ ಪಟ್ಟಣದಲ್ಲಿ ಸುರಿದ ಧಾರಾಕಾರ ಮಳೆಯ ಪರಿಣಾಮ ರಸ್ತೆಗಳು ನದಿಯಂತೆ ಪರಿವರ್ತನೆಗೊಂಡವು. ನಗರದ ಬಹುತೇಕ ಚರಂಡಿಗಳು ಕಸ ಹಾಗೂ ಮಣ್ಣಿನಿಂದ ಮುಚ್ಚಿಕೊಂಡಿದ್ದ ಪರಿಣಾಮ ಮಳೆ ನೀರು ಸರಾಗವಾಗಿ ಹರಿಯದೇ ರಸ್ತೆ ಮೇಲೆಯೇ ಹೊಳೆಯಂತೆ ಹರಿಯಿತು. ಬೆಳಗಾವಿ ರಸ್ತೆಯ ಗ್ರಂಥಾಲಯದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಒಂದು ಬದಿಯ ರಸ್ತೆ ಸಂಪೂರ್ಣ ನೀರಿನಿಂದ ಆವೃತಗೊಂಡು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಪರಿಣಾಮವಾಗಿ ಒಂದೇ ಮಾರ್ಗದಲ್ಲಿ ವಾಹನಗಳ ಸಂಚಾರ ನಡೆದಿದ್ದು, ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡುವಂತಾಯಿತು.

ಮಳೆಯ ರಭಸಕ್ಕೆ ನಗರದ ಅನೇಕ ಬಡಾವಣೆಗಳು ಮತ್ತು ಪ್ರಮುಖ ರಸ್ತೆಗಳು ನೀರಿನಿಂದ ಆವೃತಗೊಂಡವು. ಹರಳಯ್ಯ ಕಾಲೋನಿಯಲ್ಲಿನ ಹಲವು ಮನೆಗಳಿಗೆ ಮಳೆ ನೀರು ನುಗ್ಗಿ ನಿವಾಸಿಗಳು ತೀವ್ರ ತೊಂದರೆ ಅನುಭವಿಸಿದರು. ಮನೆಯೊಳಗೆ ನುಗ್ಗಿದ ನೀರನ್ನು ಪಾತ್ರೆಗಳು ಹಾಗೂ ಬಕೆಟ್‌ಗಳ ಮೂಲಕ ಹೊರ ಹಾಕಲು ಮಹಿಳೆಯರು ಮತ್ತು ಕುಟುಂಬಸ್ಥರು ಹರಸಾಹಸ ಪಟ್ಟ ದೃಶ್ಯಗಳು ಕಂಡುಬಂದವು. ಬಸ್ ನಿಲ್ದಾಣದ ಬಳಿ ನೀರಿನ ಹರಿವು ಅಪಾರ ಪ್ರಮಾಣದಲ್ಲಿ ಹೆಚ್ಚಾಗಿ ನಿಲ್ಲಿಸಿದ್ದ ಕೆಲ ಬೈಕ್‌ಗಳು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿರುವ ಘಟನೆ ನಡೆದಿದೆ. ತಟವಟಿ ಹೀರೋ ಶೋ ರೂಂ ಆವರಣವೂ ಸಂಪೂರ್ಣ ನೀರಿನಿಂದ ಆವೃತಗೊಂಡು ಆಸ್ತಿಪಾಸ್ತಿಗೆ ತುಸು ಹಾನಿಯಾಗಿದೆ.

ಧರೆಗುರುಳಿದ ಮನೆ: ಬೈಲಹೊಂಗಲ ಪಟ್ಟಣದಲ್ಲಿ ಸುರಿದ ಧಾರಾಕಾರ ಮಳೆಯ ಪರಿಣಾ ಮ ಎಂಟಕ್ಕೂ ಅಧಿಕ ಮನೆಗಳು ಧರೆಗುರುಳಿದ್ದು ಸೂರು ಕಳೆದುಕೊಂಡವರ ಬದುಕು ಬೀದಿಗೆ ಬಿದ್ದಿದೆ. ಈ ವೇಳೆ ಮನೆಯಲ್ಲಿದ್ದ ಕಾಗದ ಪತ್ರಗಳು ಸೇರಿದಂತೆ ಮಹತ್ವದ ದಾಖಲೆಗಳು, ಹಣ ಸೇರಿದಂತೆ ದಿನಬಳಕೆಯ ವಸ್ತುಗಳು ನೀರುಪಾಲಾಗಿವೆ. ಇದರಿಂದ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದ್ದು ಸೂಕ್ತ ಪರಿಹಾರಕ್ಕೆ ಸಂತ್ರಸ್ತರು ಆಗ್ರಹಿಸಿದ್ದಾರೆ.

ಬೈಲಹೊಂಗಲ ಪಟ್ಟಣದಲ್ಲಿ ಮನೆಗಳು ಕುಸಿದಿರುವುದು.

ಮನೆಗೆ ನುಗ್ಗಿದ ಮಳೆ ನೀರು ಹೊರ ಹಾಕಲು ಮಹಿಳೆ ಹರಸಾಹಸ.



ಸಂಪಾದಕೀಯ

ದಾಖಲೆ ಬರೆದ ಪ್ರಧಾನಿ

ನರೇಂದ್ರ ಮೋದಿ ಅವರು ಇಂದು ಪ್ರಧಾನ ಮಂತ್ರಿ ಪದವಿಯಲ್ಲಿ ದಾಖಲೆ ಬರೆದಿದ್ದಾರೆ. ಹುದ್ದೆಯಲ್ಲಿ 12 ವರ್ಷ ಪೂರೈಸಿ ಜವಹರಲಾಲ್ ನೆಹರೂ, ಇಂದಿರಾ ಗಾಂಧಿ ಅವರನ್ನು ಮೀರಿಸಿ ಅತಿ ದೀರ್ಘ ಕಾಲ ದೇಶವನ್ನಾಳಿದ ಪ್ರಧಾನಿ ಎನಿಸಿಕೊಂಡಿದ್ದಾರೆ. ಅವರ ಆಡಳಿತದ ಕಾಲ ಭಾರತದ ಉನ್ನತಿಯ ಕಾಲ ಎನ್ನಲು ಅಡ್ಡಿಯಿಲ್ಲ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂಬ ತಮ್ಮ ಧ್ಯೇಯಮಂತ್ರವನ್ನು ನನಸಾಗಿಸುವ, ವಿಕಸಿತ ಭಾರತದತ್ತ ಹೆಜ್ಜೆ ಹಾಕುವ ನಡಿಗೆಯಲ್ಲಿ ಅವರು ವಿಚಲಿತರಾಗಿಲ್ಲ. ಅವರ ಡಿಜಿಟಲ್ ಇಂಡಿಯಾ ಕನಸು

ಬಹುತೇಕ ಸಾಕಾರಗೊಳ್ಳುತ್ತಿದೆ. ಮನೆಮನೆಗೂ ವಿದ್ಯುತ್ ಹಾಗೂ ಅಡುಗೆ ಅನಿಲ ಕಲ್ಪಿಸುವ ಕಾರ್ಯದಲ್ಲಿ ಭಾರಿ ಪ್ರಗತಿ ಆಗಿದೆ. ಹೆದ್ದಾರಿಗಳು ಹಾಗೂ ರೈಲ್ವೆ ಜಾಲಗಳು ಸಾಕಷ್ಟು ವಿಸ್ತರಿಸಿದ್ದು, ಮೂಲಸೌಕರ್ಯದಲ್ಲಿ ಪ್ರಗತಿಯಾಗಿದೆ. ಭಾರತ ಅಂತಾರಾಷ್ಟ್ರೀಯ ಸೌರ ಒಕ್ಕೂಟದ ನಾಯಕತ್ವ ವಹಿಸಿಕೊಂಡಿದ್ದು, ಸೌರಶಕ್ತಿ ಉತ್ಪಾದನೆಯಲ್ಲಿ ಜಾಗತಿಕವಾಗಿ 2ನೇ ಸ್ಥಾನದಲ್ಲಿದೆ. 'ಮೇಕ್ ಇನ್ ಇಂಡಿಯಾ'ವನ್ನು ಪ್ರಮುಖ ಹಂತಕ್ಕೆ ಕೊಂಡೊಯ್ದು ಶೇ.65ರಷ್ಟು ರಕ್ಷಣಾ ಸಾಮಗ್ರಿಗಳನ್ನು ದೇಶೀಯವಾಗಿ ಉತ್ಪಾದಿಸಿ, ಬಹಳಷ್ಟನ್ನು ರಫ್ತು ಮಾಡುತ್ತಿದೆ. ವೈಜ್ಞಾನಿಕವಾಗಿ ಇಸ್ರೋದ ಸಾಹಸಗಳು ಗಮನ ಸೆಳೆದಿವೆ. ಆದರೆ ಮೋದಿಯವರ ಆಡಳಿತ ಟೀಕೆ, ವಿಮರ್ಶೆಗಳಿಂದ ಹೊರತಾಗಿಲ್ಲ. ಅಮೆರಿಕ- ಇಸ್ರೇಲ್- ಇರಾನ್ ಯುದ್ಧದ ಸಂದರ್ಭದಲ್ಲಿ ಭಾರತದ ಹಿತಾಸಕ್ತಿಯನ್ನು ನಿಭಾಯಿಸಲು ಮೋದಿ ಸರಕಾರಕ್ಕೆ ಸಾಧ್ಯವಾಗಿಲ್ಲ ಎಂಬ ಟೀಕೆ ಇದೆ. ಸುಸ್ಥಿರ ಇಂಧನದ ಮೂಲಕ ಸ್ವಾವಲಂಬನೆ ಸಾಧಿಸಬೇಕು, ಇ-ವಾಹನ ಪ್ರಗತಿ ಸಾಧಿಸಬೇಕು ಎಂಬ ಮಾತು ಮಾತಾಗಿಯಷ್ಟೇ ಉಳಿದಿದೆ. ಜಿಎಸ್‌ಟಿಯಲ್ಲಿ ತಮ್ಮ ಪಾಲನ್ನು ಕೊಡಿ ಎಂಬ ರಾಜ್ಯಗಳ ಅಹವಾಲನ್ನು ಕೇಂದ್ರ ಕೇಳಿಸಿಕೊಂಡಿಲ್ಲ. ಡಿಮಾನಿಟೈಸೇಷನ್ ತಂದ ರೀತಿ ಹಾಗೂ ಕೊರೊನಾ ಕಾಲವನ್ನು ನಿಭಾಯಿಸಿದ ರೀತಿಯ ಬಗ್ಗೆ ಕಟು ಟೀಕೆಗಳಿವೆ. ನಿರುದ್ಯೋಗ ಬಹುದೊಡ್ಡ ಸಮಸ್ಯೆಯಾಗಿದೆ. ಮಣಿಪುರದಲ್ಲಿ ಆಂತರಿಕ ದಂಗೆಗಳನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ನೀಟ್‌ನಂಥ ಉನ್ನತ ಪರೀಕ್ಷೆಗಳಲ್ಲಿ ಪೇಪರ್ ಸೋರಿಕೆಯಾಗುತ್ತಿದೆ. ಗಲ್ವಾನ್ ಸಂಘರ್ಷ, ಪುಲ್ವಾಮಾ ದಾಳಿ, ಪೆಹಲ್ಗಾಂ ದಾಳಿ ಇತ್ಯಾದಿಗಳ ಸಂದರ್ಭದಲ್ಲಿ ಭಾರತದ ಭದ್ರತೆ ಪ್ರಶ್ನೆಗೊಳಗಾಗಿದೆ. ಹಣದುಬ್ಬರವನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ವಿದೇಶಿ ವಿನಿಮಯ ಸಂಗ್ರಹ ಸಾಕಷ್ಟಿಲ್ಲ. ಆಪರೇಶನ್ ಸಿಂದೂರ್ ಬಗ್ಗೆ ಸ್ಪಷ್ಟ ಚಿತ್ರಣ ನೀಡಿಲ್ಲ. ಇವುಗಳಿಗೆಲ್ಲ ನರೇಂದ್ರ ಮೋದಿಯವರು ಇನ್ನಷ್ಟು ಉತ್ತರದಾಯಿಯಾಗಿ ಸ್ಪಂದಿಸಿದರೆ ಚೆನ್ನಾಗಿರುತ್ತದೆ.

ಸೊಂಪಾದಕೀಯ

ಮತ್ತು ತರಿಸಿದ ಸಿನಿಮಾ

ಪವನ್ ಕಲ್ಯಾಣ್ ತೆಲುಗು ನಟ, ಜೊತೆಗೆ ರಾಜಕಾರಣಿ, ಆಂಧ್ರ ಪ್ರದೇಶದ ಡಿಸಿಎಂ ಎಂಬುದಷ್ಟೇ ನಮಗೆ ಗೊತ್ತಿತ್ತು. ಆದರೀಗ ಅವರು ಮೆದುಳು ಸರ್ಜರಿ ಮಾಡುವವರಾಗಿ ಹೊಮ್ಮಿದ್ದಾರೆ. ಆದದ್ದು ಇನ್ನೇನಿಲ್ಲ, ಆಂಧ್ರ ಪ್ರದೇಶದ ಖಾಸಗಿ ಆಸ್ಪತ್ರೆಯೊಂದರಲ್ಲಿ ಮೆದುಳು ಶಸ್ತ್ರ ಚಿಕಿತ್ಸೆಗೆ ಒಳಗಾದ ಮಹಿಳೆಯೊಬ್ಬರು ಆಪರೇಶನ್ ವೇಳೆ ಪವನ್ ಕಲ್ಯಾಣ್ ನಟನೆಯ 'ದೇ ಕಾಲ್ ಹಿಮ್ ಓಜಿ' ಎಂಬ ಸಿನಿಮಾ ನೋಡುತ್ತಾ ಮಲಗಿದ್ದರಂತೆ. ಆಪರೇಶನ್‌ನ ನೋವು ಅವರಿಗೆ ಗೊತ್ತೇ ಆಗಲಿಲ್ಲವಂತೆ. ಕೋಟೀಶ್ವರಮ್ಮ ಎಂಬ ಈ ಮಹಿಳೆಗೆ ಮಾತು ಹಾಗೂ ಚಟುವಟಿಕೆಯನ್ನು ನಿಯಂತ್ರಿಸುವ ಮೆದುಳಿನ ಒಂದು ಭಾಗದಲ್ಲಿ ಗಡ್ಡೆ ಇತ್ತು. ಈ ಗಡ್ಡೆ ತೆಗೆಯುವ ಶಸ್ತ್ರಚಿಕಿತ್ಸೆ ರೋಗಿಯನ್ನು ಎಚ್ಚರದಲ್ಲಿ ಇರಿಸಿಕೊಂಡೇ ನಡೆಯಬೇಕಿತ್ತಂತೆ. ಹೀಗಾಗಿ ಸಿನಿಮಾ ತೋರಿಸುತ್ತಾ ಚಿಕಿತ್ಸೆ ಮಾಡಲಾಯಿತಂತೆ. ಪವನ್ ಕಲ್ಯಾಣ್ ಅವರ ಮೆಚ್ಚಿನ ನಟನಂತೆ. ಏನಿದ್ದರೂ ಪವನ್ ಕಲ್ಯಾಣ್ ಅವರನ್ನು ತನಗೆ ಮರುಜೀವ ನೀಡಿದ ವೈದ್ಯರಿಗಿಂತಲೂ ಮಿಗಿಲು ಎಂದು ಈ ರೋಗಿ ಕೊಂಡಾಡಿದರೆ ಆಶ್ಚರ್ಯವಿಲ್ಲ. ಅರಿವಳಿಕೆಯನ್ನೂ ಮೀರಿಸುವಂತೆ ಮತ್ತು ಬರಿಸಿದ ಆ ಸಿನಿಮಾ ಹೇಗಿರಬಹುದು. ಇನ್ನು ಮುಂದೆ ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಇತರ ರೋಗಿಗಳ ಮೇಲೂ ಈ ಸಿನಿಮಾವನ್ನು ಪ್ರಯೋಗಿಸಬಹುದೇ? ವೈದ್ಯರು ಪರಿಶೀಲಿಸಬೇಕು. ಹಾಗೇ ಜೀಪುಗಳನ್ನೇ ಎತ್ತಿ ಎಸೆಯುವ, ಚಲಿಸುವ ರೈಲನ್ನು ಕೈಯೊಡ್ಡಿ ನಿಲ್ಲಿಸುವ ತೆಲುಗು ನಟ ಬಾಲಕೃಷ್ಣ ಅವರ ಸಿನಿಮಾಗಳನ್ನೂ ಈ ನಿಟ್ಟಿನಲ್ಲಿ ಪರಿಶೀಲಿಸಬಹುದು. ಈ ನಟರ ಅಭಿಮಾನಿಗಳು ಈ ಸಿನಿಮಾ ನೋಡುವಾಗ ಯಾವುದೋ ಟ್ರಾನ್ಸ್‌ನಲ್ಲಿ ಇರುವಂತೆ ವರ್ತಿಸುವುದರ ಹಿನ್ನೆಲೆ ಈಗ ಗೊತ್ತಾಯಿತು!

ಸಂಪಾದಕರ ಸದ್ಯಶೋಧನೆ

ಜಪಾನಿನ ವೃದ್ಧರ ಡೈಪರ್

ಜಪಾನಿನ ಮಾರುಕಟ್ಟೆಯಲ್ಲಿ ವಯಸ್ಸಾದವರ ಡೈಪರ್‌ಗಳ (Adult Diapers) ವಿನ್ಯಾಸ ಮತ್ತು ತಂತ್ರಜ್ಞಾನದಲ್ಲಿ ಆಗಿರುವ ಕ್ರಾಂತಿ ನಿಜಕ್ಕೂ ರೋಚಕವಾದದ್ದು. ವೃದ್ಧರ ಘನತೆ, ಸ್ವಾಭಿಮಾನ ಮತ್ತು ಸ್ವಾವಲಂಬನೆಯನ್ನು ಕಾಪಾಡುವ ನಿಟ್ಟಿನಲ್ಲಿ ಜಪಾನಿ ಕಂಪನಿಗಳು ನಡೆಸಿರುವ ಸಂಶೋಧನೆಗಳು ಜಗತ್ತಿಗೆ ಮಾದರಿಯಾಗಿವೆ. ವಯಸ್ಸಾದವರಿಗೆ 'ನಾವು ಮಕ್ಕಳಂತೆ ಡೈಪರ್ ಧರಿಸುತ್ತಿದ್ದೇವೆ' ಎಂಬ ಕೀಳರಿಮೆ ಬರಬಾರದು ಎಂಬುದು ಜಪಾನಿ ಕಂಪನಿಗಳ ಮೊದಲ ಆದ್ಯತೆಯಾಗಿತ್ತು. ಅದಕ್ಕಾಗಿಯೇ ಅವರು ಜಾಹೀರಾತುಗಳಲ್ಲಿ ಮತ್ತು ಪ್ಯಾಕೆಟ್‌ಗಳ ಮೇಲೆ 'ಡೈಪರ್' (Diaper) ಎಂಬ ಪದದ ಬಳಕೆಯನ್ನು ಕಡಿಮೆ ಮಾಡಿ, ಅವುಗಳನ್ನು 'ಲೈಫ್ ಪ್ಯಾಂಟ್ಸ್' ಅಥವಾ 'ಅಡಲ್ಟ್ ಅಂಡರ್‌ವೇರ್' ಎಂದು ಮರುನಾಮಕರಣ ಮಾಡಿದರು. ಇದು ವೃದ್ಧರಲ್ಲಿ ಇದ್ದ ಮಾನಸಿಕ



ಹಿಂಜರಿಕೆಯನ್ನು ಸಂಪೂರ್ಣವಾಗಿ ಹೋಗಲಾಡಿಸಿತು ಮತ್ತು ಅವರು ಇದನ್ನು ಸಾಮಾನ್ಯ ಒಳ ಉಡುಪಿನಂತೆ ಸಹಜವಾಗಿ ಸ್ವೀಕರಿಸಲು ನೆರವಾಯಿತು. ಹಳೆಯ ಮಾದರಿಯ ಅಡಲ್ಟ್ ಡೈಪರ್‌ಗಳು ದಪ್ಪಗಿದ್ದು, ಉಡುಪಿನ ಹೊರಗಡೆಯಿಂದ ಎದ್ದು ಕಾಣಿಸುತ್ತಿದ್ದವು. ಆದರೆ ಇಂದಿನ ಜಪಾನಿ ತಂತ್ರಜ್ಞಾನವು ಇವುಗಳನ್ನು ಅತ್ಯಂತ ತೆಳುವಾಗಿ ರೂಪಿಸಿದೆ. ಇವುಗಳನ್ನು ಧರಿಸಿದಾಗ ಸಾಮಾನ್ಯ ಹತ್ತಿ ಒಳ ಉಡುಪುಗಳನ್ನು ಧರಿಸಿದಂತೆಯೇ ಭಾಸವಾಗುತ್ತದೆ. ಪ್ಯಾಂಟ್ ಅಥವಾ ಸಾಂಪ್ರದಾಯಿಕ ಜಪಾನಿ ಕಿಮೋನೋ ಧರಿಸಿದರೂ ಹೊರಗಿನವರಿಗೆ ಡೈಪರ್ ಧರಿಸಿರುವುದು ತಿಳಿಯುವುದೇ ಇಲ್ಲ. ಅತ್ಯಂತ ಮೃದುವಾದ ಮತ್ತು ವಿಸ್ತಾರವಾಗಬಲ್ಲ ನೂಲಿನ ಎಳೆಗಳನ್ನು ಬಳಸಿ ಇವುಗಳನ್ನು ತಯಾರಿಸುವುದರಿಂದ, ಸೊಂಟದ ಭಾಗದಲ್ಲಿ ಯಾವುದೇ ಒತ್ತಡ ಅಥವಾ ಗಾಯಗಳಾಗುವುದಿಲ್ಲ. ಬಹಳಷ್ಟು ವೃದ್ಧರು ಬೇರೆಯವರ ಸಹಾಯ ಪಡೆದು ಡೈಪರ್ ಧರಿಸಲು ಇಷ್ಟಪಡುವುದಿಲ್ಲ. ಜಪಾನಿ ವಿನ್ಯಾಸಕರು ಈ ಮನೋಭಾವವನ್ನು ಅರಿತು, ವೃದ್ಧರು ತಾವಾಗಿಯೇ, ಯಾರದೇ ಸಹಾಯವಿಲ್ಲದೆ ಸುಲಭವಾಗಿ ಪ್ಯಾಂಟ್‌ನಂತೆ ಎಳೆದು ಧರಿಸಬಹುದಾದ 'ಪುಲ್-ಅಪ್' (Pull- up) ಮಾದರಿಯನ್ನು ಜನಪ್ರಿಯಗೊಳಿಸಿದರು. ಇವುಗಳನ್ನು ತೆಗೆಯುವುದು ಕೂಡ ಅಷ್ಟೇ ಸುಲಭ; ಬದಿಗಳಲ್ಲಿರುವ ಜಾಯಿಂಟ್‌ಗಳನ್ನು ಸುಲಭವಾಗಿ ಹರಿದು (Tear- away sides) ವಿಲೇವಾರಿ ಮಾಡಬಹುದು. ಇದು ವೃದ್ಧರಲ್ಲಿ 'ನಾನು ಯಾರ ಮೇಲೂ ಅವಲಂಬಿತನಲ್ಲ' ಎಂಬ ಆತ್ಮವಿಶ್ವಾಸವನ್ನು ತುಂಬುತ್ತದೆ. ತೆಳುವಾಗಿದ್ದರೂ ಸಹ, ಅತಿ ಹೆಚ್ಚು ದ್ರವವನ್ನು ಹೀರಿಕೊಳ್ಳುವ ಸಾಮರ್ಥ್ಯ ಇವುಗಳಿಗಿದೆ. ಇದಕ್ಕಾಗಿ ಜಪಾನಿ ಕಂಪನಿಗಳು 'ಸೂಪರ್ ಅಬ್ಸಾರ್ಬೆಂಟ್ ಪಾಲಿಮರ್ಸ್' ತಂತ್ರಜ್ಞಾನವನ್ನು ಬಳಸುತ್ತವೆ. ಇದು ದ್ರವವನ್ನು ತಕ್ಷಣವೇ ಜೆಲ್ ರೂಪಕ್ಕೆ ಬದಲಾಯಿಸುತ್ತದೆ. ಇದರಿಂದಾಗಿ ಚರ್ಮವು ಒಣದಾಗಿಯೇ (ಡ್ರೈ) ಉಳಿಯುತ್ತದೆ ಮತ್ತು ವೃದ್ಧರಲ್ಲಿ ಹೆಚ್ಚಾಗಿ ಕಂಡುಬರುವ 'ಬೆಡ್ ಸೋರ್ಸ್' (ರಕ್ತಗಾಯಗಳು) ಅಥವಾ ಚರ್ಮದ ಅಲರ್ಜಿಯನ್ನು ಸಂಪೂರ್ಣವಾಗಿ ತಡೆಯುತ್ತದೆ. ವಯಸ್ಸಾದವರಲ್ಲಿ ಮೂತ್ರದ ದುರ್ವಾಸನೆ (Ammonia Odor) ಹೆಚ್ಚಾಗಿರುತ್ತದೆ, ಇದು ಅವರಿಗೆ ಮುಜುಗರ ಉಂಟುಮಾಡಬಹುದು. ಜಪಾನಿ ಸಂಶೋಧಕರು ಡೈಪರ್‌ನ ನಾರಿನಲ್ಲೇ (Fibers) ವಿಶೇಷವಾದ ಅಮೋನಿಯಾ-ನ್ಯೂಟ್ರಲೈಸಿಂಗ್ ತಂತ್ರಜ್ಞಾನ ಮತ್ತು ನೈಸರ್ಗಿಕ ಹಸಿರು ಚಹಾದ (Green Tea) ಸಾರಗಳನ್ನು ಅಳವಡಿಸಿದ್ದಾರೆ. ಇದು ಯಾವುದೇ ದುರ್ವಾಸನೆ ಹೊರಬರದಂತೆ ತಕ್ಷಣವೇ ಲಾಕ್ ಮಾಡುತ್ತದೆ. ಇದರಿಂದಾಗಿ ವೃದ್ಧರು ಯಾವುದೇ ಹಿಂಜರಿಕೆಯಿಲ್ಲದೆ ಸಭೆ-ಸಮಾರಂಭಗಳು, ಪ್ರಯಾಣ ಹಾಗೂ ವಾಕಿಂಗ್‌ಗೆ ಹೋಗಲು ಸಾಧ್ಯವಾಗಿದೆ. ಜಪಾನಿ ಕಂಪನಿಗಳು ತಂತ್ರಜ್ಞಾನವನ್ನು ಕೇವಲ ವ್ಯಾಪಾರಕ್ಕಾಗಿ ಬಳಸದೇ, ಮಾನವೀಯ ನೆಲೆಗಟ್ಟಿನಲ್ಲಿ ವೃದ್ಧರ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಬಳಸಿದ್ದರಿಂದಲೇ ಇಂದು ಜಪಾನಿನಲ್ಲಿ ಅಡಲ್ಟ್ ಡೈಪರ್‌ಗಳ ಮಾರುಕಟ್ಟೆ ವ್ಯಾಪಕವಾಗಿ ಬೆಳೆದಿದೆ. ವೃದ್ಧರು ತಮ್ಮ ಮುಪ್ಪಿನ ದಿನಗಳಲ್ಲೂ ಸ್ವಾಭಿಮಾನದಿಂದ, ಸಕ್ರಿಯವಾಗಿ ಜೀವಿಸಲು ಈ ತಂತ್ರಜ್ಞಾನವು ದೊಡ್ಡ ಶಕ್ತಿಯಾಗಿ ನಿಂತಿದೆ.

ಮಮತಾ ರಾಜಕೀಯ ಪತನ ಕಾಂಗ್ರೆಸ್‌ಗೆ ವರದಾನ

ಎಡಪಕ್ಷಗಳು ಕರಾಳ ರಾಜಕೀಯ ಹಿಂಸಾಚಾರದ ಭೀಕರ ಇತಿಹಾಸ ಹೊಂದಿರುವುದರಿಂದ ಅವರನ್ನು ಜನರು ಮತ್ತೆ ಸ್ವೀಕರಿಸುತ್ತಾರಾ ಎಂಬ ಬಗ್ಗೆ ಅನುಮಾನಗಳಿವೆ. ಹೀಗಾಗಿ, ಮಮತಾ ಬ್ಯಾನರ್ಜಿ ರಾಜಕೀಯ ಪತನ ಕಾಂಗ್ರೆಸ್‌ಗೆ ವರದಾನ. ಇದನ್ನು ರಾಹುಲ್ ಗಾಂಧಿ ಮತ್ತವರ ವಂದಿಮಾಗಧರು ಅರ್ಥ ಮಾಡಿಕೊಳ್ಳಬೇಕಷ್ಟೇ.

ಜನಪಥ
ರಾಘವ ಶರ್ಮಾ ನಿಡ್ಲೆ
vveditoped@gmail.com

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಐತಿಹಾಸಿಕ ಜಯಭೇರಿ ಸಾಧಿಸಿದ ನಂತರ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳು ಅನಿರೀಕ್ಷಿತವೇನಲ್ಲ. ಟಿಎಂಸಿ ಮತ್ತು ಮುಖ್ಯವಾಗಿ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಮತ್ತು ಸೋದರಳಿಯ ಅಭಿಷೇಕ್ ಬ್ಯಾನರ್ಜಿ ತಮ್ಮ ಅಧಿಕಾರಾವಧಿಯಲ್ಲಿ ಇಡೀ ರಾಜ್ಯವನ್ನು ಅರಾಜಕ ಸ್ಥಿತಿಗೆ ತಳ್ಳಿದ್ದರ ಫಲವನ್ನೀಗ ಉಣ್ಣುತ್ತಿದ್ದಾರೆ. ಮಮತಾ ಬ್ಯಾನರ್ಜಿ ಸರ್ವಾಧಿಕಾರ ಹಾಗೂ ಅಭಿಷೇಕ್ ಬ್ಯಾನರ್ಜಿ ದರ್ಪ, ದುರಹಂಕಾರದ ರಾಜಕೀಯ ನಡೆಗಳು ಅವರಿಗೇ ತಿರುಗುಬಾಣವಾಗುತ್ತಿವೆ. ತಾನು ಸ್ಥಾಪಿಸಿದ್ದ ಪಕ್ಷದಲ್ಲಿ ತನ್ನ ಮಾತೇ ನಡೆಯದ ಶೋಚನೀಯ ಸ್ಥಿತಿ ನಿರ್ಮಾಣವಾಗಬಹುದು ಎಂದು ಬಹುಶಃ ಮಮತಾ ಬ್ಯಾನರ್ಜಿ ಕಲ್ಪಿಸಿಯೂ ಇರಲಿಕ್ಕಿಲ್ಲ. ರಾಜಕೀಯ ಅಸ್ತಿತ್ವ ರಕ್ಷಣೆಗೆ ಹೆಣಗಾಡುತ್ತಿರುವ ಮಮತಾ ಬ್ಯಾನರ್ಜಿ, ದೆಹಲಿಗೆ ಹೋಗಿ ಸೋನಿಯಾ ಗಾಂಧಿಯವರನ್ನು ಬಿಗಿದಪ್ಪಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.

ಯಾವಾಗ ಮಮತಾ ಬ್ಯಾನರ್ಜಿ ಅವರು ಪಕ್ಷದಲ್ಲಿ ತಮ್ಮ ಸೋದರಳಿಯ ಅಭಿಷೇಕ್ ಬ್ಯಾನರ್ಜಿಗೆ ಹೆಚ್ಚಿನ ಅಧಿಕಾರ ನೀಡಲು ಶುರುಮಾಡಿದ್ದರೋ ಆಗಲೇ ಟಿಎಂಸಿ ಒಂದಲ್ಲಾ ಒಂದು ದಿನ ಒಡೆದುಹೋಗುವುದು ನಿಶ್ಚಿತ ಎಂಬ ಚರ್ಚೆ ಬಂಗಾಳದ ರಾಜಕೀಯ ಕಾರಿಡಾರ್‌ನಲ್ಲಿ ಆರಂಭವಾಗಿದ್ದವು. ಟಿಎಂಸಿಯ ಒಂದು ಗುಂಪು ಮಮತಾ ಬ್ಯಾನರ್ಜಿಗೆ ವಿಧೇಯವಾಗಿತ್ತೇ ವಿನಃ ಯುವಕ ಅಭಿಷೇಕ್‌ರನ್ನು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಆದರೆ, ತನ್ನ ಉತ್ತರಾಧಿಕಾರಿ ಅಭಿಷೇಕ್ ಬ್ಯಾನರ್ಜಿ ಎಂದು ಮಮತಾ ತೀರ್ಮಾನ ಮಾಡಿದ್ದರು ಮತ್ತು ತಮ್ಮ ನಂತರ ಅಭಿಷೇಕ್‌ಗೆ ಪೂರ್ಣ ನಾಯಕತ್ವ ಎಂಬ ಸುಳಿವನ್ನು ಆಗಾಗ್ಗೆ ನೀಡುತ್ತಿದ್ದರು. ಪಕ್ಷದ ಏಳಿಗೆಗೆ ಕಾರಣರಾದ ಇತರೆ ನಾಯಕರು ಸಹಜವಾಗಿಯೇ ಇದನ್ನು ಆಂತರಿಕವಾಗಿ ವಿರೋಧಿಸಿದ್ದರು. ಆದರೆ, ರಾಜಕೀಯ ಅಸ್ತಿತ್ವದ ಪ್ರಶ್ನೆ ಬಂದಾಗ ಮೌನವಾಗಿರುವುದು ಅವರಿಗೆ ಅನಿವಾರ್ಯವಾಗಿತ್ತು. ಅವಕಾಶಕ್ಕಾಗಿ ಕಾದಿದ್ದ ಅವರೆಲ್ಲರೂ ಈಗ ಬಂಡೆದ್ದಿದ್ದಾರೆ. ಟಿಎಂಸಿಯ ಹಿರಿಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಸೇರಿ ಅನೇಕರು ಅಭಿಷೇಕ್ ಕಾರಣಕ್ಕಾಗಿಯೇ ಮೂಲ ಟಿಎಂಸಿ ಮೇಲೆ ತಮ್ಮ ಹತೋಟಿ ಸಾಧಿಸಲು ಮುಂದಾಗಿದ್ದಾರೆ. ಮಮತಾ ಬ್ಯಾನರ್ಜಿ ರಾಜಕೀಯ ಜೀವನ ಬಹುತೇಕ ಅಂತ್ಯದ ಸನಿಹದಲ್ಲಿದೆ. ಅವರ ಪ್ರಭಾವಲಯ ನೆಲಕಚ್ಚಿದೆ. ಜನರು ರಾಜಕೀಯ ಚಿತ್ರಣವನ್ನೇ ಬದಲಿಸಿದ್ದಾರೆ. ಅಭಿಷೇಕ್ ಬ್ಯಾನರ್ಜಿ ಕಾರ್ಯವೈಖರಿ ವಿರುದ್ಧ ಜನರೇ ಮತಹಾಕಿದ್ದಾರೆ. ಹಿಂಸಾತ್ಮಕ ಆಡಳಿತದಿಂದ ಬೇಸತ್ತ ಜನರು, ಅಭಿವೃದ್ಧಿಗಾಗಿ ಬಿಜೆಪಿಯನ್ನು ಆಯ್ಕೆ ಮಾಡಿದ್ದಾರೆ. ಹೀಗಿದ್ದಾಗ ಅಭಿಷೇಕ್ ನಾಯಕತ್ವ ನಂಬಿಕೊಂಡು ರಾಜ್ಯದಲ್ಲಿ ರಾಜಕೀಯ ಮಾಡಲು ಸಾಧ್ಯವಿದೆಯೇ? ಈಗಾಗಲೇ ಹಣಕಾಸು ಅವ್ಯವಹಾರ ಹಲವು ಕೇಸುಗಳಲ್ಲಿ ಸಿಲುಕಿರುವ ಅವರನ್ನು ಜನ ಮತ್ತೆ ಸ್ವೀಕರಿಸಿಯಾರೇ? ಮೇಲಾಗಿ, ಕೇಂದ್ರ, ಬಿಜೆಪಿ ಸುಮ್ಮನಿರುವುದೇ? ಇವೆಲ್ಲವನ್ನೂ ಅಳೆದು-ತೂಗಿ ಲೆಕ್ಕ ಹಾಕಿರುವ ಟಿಎಂಸಿಯ ಒಂದು ಗುಂಪು, ಎನ್‌ಡಿಎ ಮೈತ್ರಿಕೂಟದ ಪರ ವಾಲಿದೆ. ಬಹುಶಃ ಬಿಜೆಪಿ ನಾಯಕರ ಒತ್ತಡವೂ ಇವರ ಮೇಲಿದ್ದಿರಬಹುದು. ಇಂದಿನ ರಾಜಕೀಯದಲ್ಲಿ ಇದು ಸರ್ವೇಸಾಮಾನ್ಯವಾಗಿದೆ.

ಸದ್ಯ 28 ಟಿಎಂಸಿ ಸಂಸದರಲ್ಲಿ 20 ಮಂದಿ ಸಂಸತ್ತಿನಲ್ಲಿ ಎನ್‌ಡಿಎಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಈ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ. ಹಾಗಾಗಿ, ಟಿಎಂಸಿ ಎನ್‌ಡಿಎಯ ಅಧಿಕೃತ ಮಿತ್ರಪಕ್ಷವಾಗಿ ಹೊರಹೊಮ್ಮುವ ಕಾಲ ದೂರದಲ್ಲಿಲ್ಲ. ಅಗತ್ಯ ಸಂಖ್ಯಾಬಲವಿಲ್ಲದ ಮಮತಾ ಬ್ಯಾನರ್ಜಿ ನೇತೃತ್ವದ ಗುಂಪಿಗೆ ಮೂಲ ಟಿಎಂಸಿ ಪಕ್ಷ ಎಂಬ ಮಾನ್ಯತೆ ಸಿಗುವುದೂ ಅನುಮಾನ. ರಾಜ್ಯ ವಿಧಾನಸಭೆಯಲ್ಲೂ ಮಮತಾ ಮತ್ತು ಅಭಿಷೇಕ್ ವಿರುದ್ಧ ಬಂಡಾಯ ಬಿರುಸಾಗಿದ್ದು, ಅದರ ಪರಿಣಾಮವಾಗಿಯೇ ಸಿಗ್ನೇಚರ್ ಫೋರ್ಜರಿ ಪ್ರಕರಣದ ವಿಚಾರಣೆಗಾಗಿ ಮಂಗಳವಾರದಂದು ಟಿಎಂಸಿ ಕೇಂದ್ರ ಕಚೇರಿ ಮುಂದೆ ಸಿಐಡಿ ಅಧಿಕಾರಿಗಳು ಬಂದು ನಿಂತಿದ್ದಾರೆ. ವಿಧಾನಸಭೆಯಲ್ಲಿ ವಿಪಕ್ಷ ನಾಯಕನನ್ನಾಗಿ ತಮ್ಮ ಆಪ್ತ ಶಾಸಕ ಸೋವಂದೇಬ್ ಚಟ್ಟೋಪಾಧ್ಯಾಯ ಅವರನ್ನು ಆಯ್ಕೆ ಮಾಡಿದ ಮಮತಾ ಬ್ಯಾನರ್ಜಿ ತೀರ್ಮಾನ ವಿರೋಧಿಸಿರುವ ಟಿಎಂಸಿಯ ಬಹುಪಾಲು ಶಾಸಕರು (80 ಶಾಸಕರಲ್ಲಿ 58 ಮಂದಿ ಇದ್ದಾರೆ ಎಂದು ಬಂಡಾಯ ಗುಂಪು ಹೇಳುತ್ತಿದೆ) ಸೋವಂದೇಬ್ ಬದಲಿಗೆ ಉಚ್ಚಾಟಿತ ಶಾಸಕಿ ರಿತಬ್ರಿತಾ ಬ್ಯಾನರ್ಜಿ ಅವರನ್ನು ಆ ಹುದ್ದೆಗೆ ನೇಮಕ ಮಾಡಬೇಕು ಎಂದು ಒತ್ತಾಯಿಸಿದ್ದರು. ಆದರೆ, ಮಮತಾ-ಅಭಿಷೇಕ್ ಇದಕ್ಕೊಪ್ಪಿರಲಿಲ್ಲ. ಇದರಿಂದಾಗಿ ಬಂಡಾಯ ಗುಂಪು ಶಾಸಕಾಂಗ ಪಕ್ಷವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಶಾಸಕಿ ರಿತಬ್ರಿತಾ ಬ್ಯಾನರ್ಜಿಯನ್ನು ವಿಪಕ್ಷ ನಾಯಕಿಯಾಗಿ ಆಯ್ಕೆ ಮಾಡಿದೆ. ಇದಕ್ಕೆ ವಿಧಾನಸಭಾ ಸ್ಪೀಕರ್ ಮಾನ್ಯತೆಯೂ ಸಿಕ್ಕಿದೆ. ಅಲ್ಲಿಗೆ, 1998ರಲ್ಲಿ ಸ್ಥಾಪನೆಗೊಂಡ ಟಿಎಂಸಿಯಲ್ಲಿ ಮೊದಲ ಅಧಿಕೃತ ವಿಭಜನೆಗೆ ಚಾಲನೆ ಸಿಕ್ಕಿದೆ. 2021ರಲ್ಲಿ ಮಮತಾ ನಂದಿಗ್ರಾಮದಲ್ಲಿ ಸೋತಿದ್ದಾಗ ಕೋಲ್ಕತ್ತಾದ ಭವಾನಿಪುರ ಸೀಟು ಬಿಟ್ಟುಕೊಟ್ಟಿದ್ದ ಸೋವಂದೇಬ್, ಮಮತಾರ ವಿಧೇಯ ಶಿಷ್ಯನಾಗಿ ಗುರುತಿಸಿಕೊಂಡಿದ್ದರು. ಶಿಷ್ಯನಿಗೆ ಅಧಿಕಾರ ನೀಡುವ ಮಮತಾ ನಿರ್ಧಾರ ಉಳಿದವರಿಗೆ ಪಥ್ಯವಾಗಿಲ್ಲ.

2011ರಿಂದ ಬಂಗಾಳದಲ್ಲಿ ಪ್ರಶ್ನಾತೀತ ನಾಯಕಿಯಾಗಿದ್ದ ಮಮತಾ ಬ್ಯಾನರ್ಜಿ, 2014ರಿಂದ ಕೇಂದ್ರದಲ್ಲಿ ಪಿಎಂ ಮೋದಿ ಆಡಳಿತ ಶುರುವಾದಲ್ಲಿಂದ ಆಕ್ರಮಣಕಾರಿ ರಾಷ್ಟ್ರೀಯ ವಿಪಕ್ಷ ನಾಯಕಿಯಾಗಿ ಕಾಣಿಸಿಕೊಂಡವರು. ಬಂಗಾಳದಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಅಧಿರ್ ರಂಜನ್ ಚೌಧುರಿ ಒಬ್ಬಂಟಿಯಾಗಿ ಹೋರಾಟ ನಡೆಸುತ್ತಿದ್ದಾಗಲೂ, ಕಾಂಗ್ರೆಸ್ ದಿಲ್ಲಿ ದೊರೆಗಳು ಮಾತ್ರ ಮಮತಾ ವಿರುದ್ಧ ಸಣ್ಣ ಧ್ವನಿಯನ್ನೂ ಎತ್ತಿದವರಲ್ಲ. ಅಷ್ಟರಮಟ್ಟಿಗೆ ವಿಪಕ್ಷಗಳ ಮೈತ್ರಿಕೂಟಕ್ಕೆ ಮತ್ತು ಕೇಂದ್ರ ಕಾಂಗ್ರೆಸ್‌ಗೆ ಮಮತಾ ಅನಿವಾರ್ಯವಾಗಿದ್ದರು. 2024ರ ಲೋಕಸಭೆ ಚುನಾವಣೆಗೆ ಇಂಡಿ ಒಕ್ಕೂಟದ ಸಂಚಾಲಕರಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ನೇಮಕ ಮಾಡಬೇಕು ಎಂದು ಹೇಳಿದ್ದ ಮಮತಾ, ಕಾಂಗ್ರೆಸನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಮೈತ್ರಿಕೂಟದ ಸಂಚಾಲಕರನ್ನಾಗಿ ನಿತೀಶ್ ಕುಮಾರ್ ಅವರನ್ನು ನೇಮಿಸಬೇಕು ಎಂಬ ಹಿಂದಿನ ನಿರ್ಧಾರಕ್ಕೆ ತದ್ವಿರುದ್ಧ ನಡೆ ಪ್ರದರ್ಶಿಸಿದ್ದ ಮಮತಾ, ಮೈತ್ರಿಕೂಟದ ಒಗ್ಗಟ್ಟಿನಲ್ಲಿ ಒಡಕು ಮೂಡಿಸಿದ್ದವರು. ಇದೇ ಕಾರಣಕ್ಕೆ, ಮಮತಾ ಅವರ ಇಂದಿನ ದುಸ್ಥಿತಿಯನ್ನು ಕಂಡು ಕೇವಲ ಬಿಜೆಪಿ ಮಾತ್ರವಲ್ಲ, ಬಹುಪಾಲು ವಿಪಕ್ಷಗಳೂ ಇದು ಮಮತಾಗೆ ಆಗಬೇಕಾದ್ದೇ ಎಂದು ಮಾತನಾಡಿಕೊಳ್ಳುತ್ತಿವೆ. ನಾವು ನಿಮ್ಮೊಂದಿಗಿದ್ದೇವೆ ಎಂದು ವಿಪಕ್ಷಗಳು ಬಹಿರಂಗ ಬೆಂಬಲ ನೀಡಿದರೂ, ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ರಾಜಕೀಯ ಜೀವನ ಸಂಧ್ಯಾಕಾಲ ತಲುಪಿದೆ. ಒಂದರ್ಥದಲ್ಲಿ, ಇದು ಬಂಗಾಳದಲ್ಲಿ ಕಾಂಗ್ರೆಸ್‌ಗೆ ವರದಾನವೂ ಹೌದು. ಬಂಗಾಳ ಕಾಂಗ್ರೆಸ್ ಪುನರುಜ್ಜೀವನಕ್ಕೆ ಇದಕ್ಕಿಂತ ಒಳ್ಳೆಯ ಅವಕಾಶ ಕಾಂಗ್ರೆಸ್‌ಗೆ ಮತ್ತೊಂದು ಇರದು.

1947ರ ದೇಶ ವಿಭಜನೆ ನಂತರ ಬಂಗಾಳದಲ್ಲಿ ರಾಜಕೀಯ ಪ್ರಾಬಲ್ಯ ಸಾಧಿಸಿದ್ದ ಕಾಂಗ್ರೆಸ್, ಮಾಜಿ ಸಿಎಂ ಬಿ.ಸಿ. ರಾಯ್ ಅವರ ನೇತೃತ್ವದಲ್ಲಿ ಗಣನೀಯ ರಾಜಕೀಯ ಪ್ರಗತಿ ಸಾಧಿಸಿತ್ತು. 1960ರ ದಶಕದಲ್ಲಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಆಹಾರ ಉತ್ಪಾದನೆ ಪ್ರಮಾಣವನ್ನು ಶೇ.50ರಷ್ಟು ಹೆಚ್ಚಿಸಿದ್ದ ಕಾಂಗ್ರೆಸ್‌ಗೆ ನಂತರದಲ್ಲಿ ಬಂಗಾಳಿ ನಿರಾಶ್ರಿತರ ಬಿಕ್ಕಟ್ಟು, ನಕ್ಸಲ್ ಚಳವಳಿಯ ಆರಂಭಗಳು ದೊಡ್ಡ ಸವಾಲಾಗಿ ಕಾಡಲಾರಂಭಿಸಿದ್ದವು. ಅನಿಶ್ಚಿತ ಮೈತ್ರಿಕೂಟವೂ 1967-70ರ ದಶಕದಲ್ಲಿ ರಾಜಕೀಯ ಬಿಕ್ಕಟ್ಟಿಗೆ ಎಡೆಮಾಡಿತ್ತು. ಸೋಮೇನ್ ಮಿತ್ರ, ಪ್ರಿಯರಂಜನ್ ದಾಸ್ ಮುಂಶಿ ಅವರಂತಹ ಅಂದಿನ ಯುವ ನಾಯಕರು ಯುವ

ಕಾಂಗ್ರೆಸ್ ಮೂಲಕ ಎಡಪಕ್ಷಗಳ ಪ್ರಾಬಲ್ಯಕ್ಕೆ ಬ್ರೇಕ್ ಹಾಕುವ ಯತ್ನ ಮಾಡಿದರೂ, ತುರ್ತು ಪರಿಸ್ಥಿತಿ ಕಾಂಗ್ರೆಸ್‌ನ ರಾಜಕೀಯ ಬೇರನ್ನೇ ಬುಡಮೇಲು ಮಾಡಿತು. ಇದು 1977ರ ನಂತರ ರಾಜ್ಯದಲ್ಲಿ ಎಡಪಕ್ಷಗಳ ಅಧಿಪತ್ಯಕ್ಕೆ ಕಾರಣವಾಯಿತು. 1982ರಲ್ಲಿ 49% ಮತ ಗಳಿಕೆ ಮೂಲಕ ಪುನಶ್ಚೇತನ ಕಂಡರೂ, ಆಂತರಿಕ ಬಿಕ್ಕಟ್ಟು ಮತ್ತು ದುರ್ಬಲ ಮೈತ್ರಿಕೂಟ ಕಾಂಗ್ರೆಸ್‌ನ ಬಲವನ್ನು ಮತ್ತೆ ತಗ್ಗಿಸಿತ್ತು.

ಕಾಂಗ್ರೆಸ್ ನಾಯಕರು ಎಡಪಕ್ಷಗಳ ವಿರುದ್ಧ ಮೃದು ಧೋರಣೆ ತಾಳುತ್ತಿದ್ದಾರೆ ಎಂಬ ಅಸಮಾಧಾನ 1998ರಲ್ಲಿ ರಾಜ್ಯ ಕಾಂಗ್ರೆಸ್‌ನ ಬಹುದೊಡ್ಡ ವಿಭಜನೆಗೆ ಕಾರಣವಾಗಿ, ಯುವ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ತೃಣಮೂಲ ಕಾಂಗ್ರೆಸ್ ಸ್ಥಾಪನೆಗೆ ಮುಂದಾದರು. ದಿಲ್ಲಿ ನಾಯಕ ಸೀತಾರಾಮ್ ಕೇಸರಿ, ಪ್ರಣಬ್ ಮುಖರ್ಜಿ, ರಾಜ್ಯ ಕಾಂಗ್ರೆಸ್ ನಾಯಕ ಸೋಮೇನ್ ಮಿತ್ರ ಕಾರ್ಯವೈಖರಿಯಿಂದ ಬೇಸತ್ತಿದ್ದ ಮಮತಾ ಬ್ಯಾನರ್ಜಿ, ಪಕ್ಷದ ವಿರುದ್ಧ ಬಂಡೆದ್ದು ಸ್ವಂತ ಪಕ್ಷ ಕಟ್ಟಿದರು. ಮಮತಾ ಕಾಂಗ್ರೆಸ್ ತೊರೆದ ಪರಿಣಾಮ ಎಷ್ಟಿತ್ತೆಂದರೆ, 1996ರ ವಿಧಾನಸಭೆ ಚುನಾವಣೆಯಲ್ಲಿ 82 ಸೀಟು ಗೆದ್ದಿದ್ದ ಕಾಂಗ್ರೆಸ್ 2001ರಲ್ಲಿ ಕೇವಲ 26ಕ್ಕೆ ಸೀಮಿತಗೊಂಡಿತ್ತು. ತನ್ನ 29ನೇ ವಯಸ್ಸಿನಲ್ಲೇ ಹಿರಿಯ ರಾಜಕಾರಣಿ ಸೋಮನಾಥ್ ಚಟರ್ಜಿಯವರನ್ನು ಸೋಲಿಸಿದ್ದ ಮಮತಾ, ಎಡಪಕ್ಷಗಳ ವಿರುದ್ಧ ಹೋರಾಡುತ್ತಲೇ ತಮ್ಮ ರಾಜಕೀಯ ನೆಲೆ ಬಿಗಿಗೊಳಿಸಿದ್ದವರು. ಆದರೆ, ಎಡಪಕ್ಷಗಳ ರಾಜಕೀಯ ಹಿಂಸಾಚಾರ ಕಂಡೂ ಕಾಣದಂತೆ ಕುಳಿತಿದ್ದ ಕಾಂಗ್ರೆಸ್ ನಾಯಕತ್ವವನ್ನು ನಂಬಿ ರಾಜಕಾರಣ ಮಾಡಲು ಸಾಧ್ಯವಿಲ್ಲ ಎಂದೇ ಅವರು ಪಕ್ಷದಿಂದ ಪ್ರತ್ಯೇಕಗೊಂಡರು. ನಂತರದ ವರ್ಷಗಳಲ್ಲಿ, ಕಾಂಗ್ರೆಸ್ ಪಕ್ಷ ಟಿಎಂಸಿ ಜತೆ ಮೈತ್ರಿ ಸಾಧಿಸಿತು ಮತ್ತು 2011ರ ಚುನಾವಣೆಯನ್ನು ಗೆದ್ದಾಗ ಕಾಂಗ್ರೆಸ್ ಟಿಎಂಸಿಯ ಮಿತ್ರಪಕ್ಷವಾಗಿತ್ತು ಕೂಡ. ಆದರೆ, ಈ ಮೈತ್ರಿ ಹೆಚ್ಚು ದಿನ ಬಾಳಲಿಲ್ಲ. 2016ರ ಚುನಾವಣೆಗೆ ಕಾಂಗ್ರೆಸ್ಸಿಗರು ಎಡಪಕ್ಷದೊಂದಿಗೆ ಮಿತ್ರತ್ವ ಸಾಧಿಸಿದ್ದರು. 2011ರಲ್ಲಿ ಕಾಂಗ್ರೆಸ್ 42 ಸೀಟು ಗೆದ್ದಿದ್ದರೆ 2016ರಲ್ಲಿ 44 ಸೀಟು ಗೆದ್ದಿತ್ತು. ಆದರೆ, 2021ರ ನಂತರ ಕಾಂಗ್ರೆಸ್‌ನದ್ದು ಹೆಚ್ಚು-ಕಡಿಮೆ ಶೂನ್ಯ ಸಾಧನೆ. ಈಗಲೂ ಅದೇ ಮುಂದುವರಿದಿದೆ.

ಟಿಎಂಸಿ ಎಂದಿಗೂ ಕೇಡರ್ ಆಧಾರಿತ ಪಕ್ಷವಾಗಿರಲಿಲ್ಲ. ಬಿಜೆಪಿ ಅಥವಾ ಎಡಪಕ್ಷಗಳಂತೆ ಸಂಘಟನಾತ್ಮಕವಾಗಿ ಈ ಪಕ್ಷ ರೂಪುಗೊಂಡದ್ದಲ್ಲ. ಇಂದಿನ ಟಿಎಂಸಿ ವಿಭಜನೆಗೆ ಮುಖ್ಯ ಕಾರಣ ಕೂಡ ಅದೇ ಆಗಿದೆ. ಕಮ್ಯುನಿಸ್ಟರ ಹೋರಾಟ ಅಥವಾ ಆರ್‌ಎಸ್‌ಎಸ್‌ನ ಹಿಂದುತ್ವ ಮಾದರಿಯ ರಾಜಕೀಯ ಸಾಮರ್ಥ್ಯದ ದೃಢ ಸೈದ್ಧಾಂತಿಕ ಜಾಲ ಟಿಎಂಸಿಯಲ್ಲಿ ಸೃಷ್ಟಿಯಾಗಲೇ ಇಲ್ಲ. ಮಮತಾ ಬ್ಯಾನರ್ಜಿಯವರ ವೈಯಕ್ತಿಕ ವರ್ಚಸ್ಸಿನ ಆಕರ್ಷಣೆ ಮತ್ತು ಅವರ ಆಡಳಿತವು ಪಕ್ಷದ ಬೆನ್ನೆಲುಬಾಗಿತ್ತು. ಮಮತಾ ಬ್ರ್ಯಾಂಡ್ ಮೌಲ್ಯ ಮತ್ತು ಸರಕಾರಿ ಸಂಪನ್ಮೂಲಗಳೇ ಪಕ್ಷದ ಆಸ್ತಿಯಾಗಿತ್ತು. ಟಿಎಂಸಿ ನಾಯಕರು ತಮ್ಮ ಬೆಂಬಲಿಗರ ಮೂಲಕ ಹಿಂಸಾಚಾರ ಪ್ರೇರೇಪಿಸಿದರೆ ವಿನಃ ಸಂಘಟನೆ ಕಟ್ಟುವ ಕಾಯಕ್ಕೆ ಮುಂದಾಗಲಿಲ್ಲ. ಇಂದು ಮಮತಾ ಪ್ರಭಾವಲಯ ದುರ್ಬಲಗೊಂಡಿರುವುದು ಈ ಕಾರಣದಿಂದಲೇ.

ಮಮತಾ ಕಟ್ಟಿದ ಟಿಎಂಸಿಯ ಅವನತಿ ಬಹುಶಃ ರಾಜ್ಯದಲ್ಲಿ ಎಡಪಕ್ಷಗಳ ಪುನರುತ್ಥಾನಕ್ಕೆ ಅಥವಾ ಕಾಂಗ್ರೆಸ್ ರಾಜಕೀಯ ಪುನಶ್ಚೇತನಕ್ಕೆ ಪೂರಕ ವಾತಾವರಣ ರೂಪಿಸಬಹುದು. ಬಂಗಾಳದ ಪ್ರತಿ ಗ್ರಾಮಗಳಲ್ಲಿ ಈಗಲೂ ಹಳೆ ತಲೆಮಾರಿನ 7-8 ಮಂದಿ ಪ್ರಭಾವಿ ಕಮ್ಯುನಿಸ್ಟ್ ನಾಯಕರಿದ್ದಾರೆ. ಮಮತಾ ಪ್ರಾಬಲ್ಯದಿಂದಾಗಿ ಅವರೆಲ್ಲಾ ಮೌನಕ್ಕೆ ಶರಣಾಗಿದ್ದರು. ಆದರೆ, ರಾಜ್ಯ ರಾಜಕೀಯವೀಗ ಬದಲಾವಣೆಗೆ ತೆರೆದು ನಿಂತಿದ್ದು, ಎಡಪಕ್ಷಗಳು ಈಗಾಗಲೇ ಕಾಲೇಜುಗಳಲ್ಲಿ ಸಂಘಟನೆ ಬಲಗೊಳಿಸುವ ತಂತ್ರ ಹೆಣೆಯಲಾರಂಭಿಸಿದ್ದಾರೆ. ಭಾರೀ ಪ್ರಮಾಣದಲ್ಲಿರುವ ಅಲ್ಪಸಂಖ್ಯಾತ ಮುಸ್ಲಿಂ ಮತಗಳು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಹಂಚಿಕೆಯಾಗಬಹುದು. ಎಡಪಕ್ಷಗಳಿಗೆ ಕರಾಳ ರಾಜಕೀಯ ಹಿಂಸಾಚಾರದ ಭೀಕರ ಇತಿಹಾಸ ಹೊಂದಿರುವುದರಿಂದ ಅವರನ್ನು ಜನರು ಮತ್ತೆ ಸ್ವೀಕರಿಸುತ್ತಾರಾ ಎಂಬ ಬಗ್ಗೆ ಅನುಮಾನಗಳಿವೆ. ಹೀಗಾಗಿ, ಮಮತಾ ಬ್ಯಾನರ್ಜಿ ರಾಜಕೀಯ ಪತನ ಕಾಂಗ್ರೆಸ್‌ಗೆ ವರದಾನ. ಇದನ್ನು ರಾಹುಲ್ ಗಾಂಧಿ ಮತ್ತವರ ವಂದಿಮಾಗಧರು ಅರ್ಥ ಮಾಡಿಕೊಳ್ಳಬೇಕಷ್ಟೇ.

ಮೋತಿಲಾಲ್- ಜವಾಹರ್ ನಡುವಿನ ಐಷಾರಾಮಿ ವ್ಯತ್ಯಾಸ



ಅಕ್ಬರ್‌ನಾಮಾ
ಎಂ.ಜೆ. ಅಕ್ಬರ್
vveditoped@gmail.com

ಭಾಗ 1

ಇದು ಆಲ್ಕೋಹಾಲ್ ಕುರಿತ ಕತೆಯಲ್ಲ. ಆಷಾಢಭೂತಿತನದ ಕತೆಯೂ ಅಲ್ಲ.

ಒಮ್ಮೆ ಮೋತಿಲಾಲ್ ನೆಹರೂ ಅವರು ಕೇಂದ್ರೀಯ ಶಾಸನಸಭೆಯ ಸೀಟಿಗಾಗಿ ಪ್ರಚಾರ ಮಾಡುತ್ತಿದ್ದರು. ಅಲ್ಲಿಗೆ ಬಂದಿದ್ದ ಒಬ್ಬ ವ್ಯಕ್ತಿ ಮೋತಿಲಾಲ್ ಬಳಿ 'ನೀವು ಕುಡಿಯುತ್ತೀರಾ' ಎಂದು ಕೇಳಿದ್ದ. ಭಾರತೀಯ ಸಾಂಪ್ರದಾಯಿಕ ಪರಿಸರದಲ್ಲಿ ಆಲ್ಕೋಹಾಲ್ ಯಾವತ್ತೂ ಒಳ್ಳೆಯ ರೀತಿಯಲ್ಲಿ ಪರಿಗಣಿತವಾಗಿದ್ದೇ ಇಲ್ಲ. ಮಹಾತ್ಮ ಗಾಂಧೀಜಿಯವರಂತೂ 1920ರಲ್ಲಿ ಸ್ವಾತಂತ್ರ್ಯ ಚಳವಳಿಯ ನೇತೃತ್ವ ವಹಿಸಿಕೊಂಡ ಮೇಲೆ ಮುಲಾಜಿಲ್ಲದೆ ಮದ್ಯ ಸೇವನೆಯನ್ನು ಅಪರಾಧವೆಂದೇ ಹೇಳುತ್ತಿದ್ದರು. ಹಿಂದೂ ಮತ್ತು ಮುಸ್ಲಿಮರು ಒಗ್ಗಟ್ಟಿನಿಂದ ವಿರೋಧಿಸುತ್ತಿದ್ದ ಕೆಲವೇ ಸಂಗತಿಗಳಲ್ಲಿ ಮದ್ಯ ಕೂಡ ಒಂದಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೂ ಮೊದಲು ಕೇಂದ್ರೀಯ ಶಾಸನಸಭೆಗಾಗಿ ನಡೆಯುತ್ತಿದ್ದ ಚುನಾವಣೆ ಅದಾಗಿದ್ದರಿಂದ ಬ್ರಿಟಿಷ್ ಆಳ್ವಿಕೆಯಲ್ಲಿ ಮತದಾನದ ಹಕ್ಕು ಹೊಂದಿದ್ದ ಮತದಾರರ ಸಂಖ್ಯೆ ಬಹಳ ಕಡಿಮೆಯಿತ್ತು. ಹೀಗಾಗಿ ಒಂದೊಂದು ಮತ ಕೂಡ ತುಂಬಾ ಮುಖ್ಯವಾಗಿತ್ತು. ಅದೊಂದು ಅರೆ-ಪ್ರಜಾಪ್ರಭುತ್ವ ವ್ಯವಸ್ಥೆ. ಕೇವಲ ಶೇ.2.8ರಷ್ಟು ಭಾರತೀಯರಿಗೆ ಮಾತ್ರ ಮತದಾನದ ಹಕ್ಕಿತ್ತು. ಯಾರು ಹೆಚ್ಚು ತೆರಿಗೆ ಪಾವತಿಸುತ್ತಾರೋ ಅವರಿಗೆ ಮಾತ್ರ ಮತದಾನದ ಹಕ್ಕು ನೀಡಲಾಗುತ್ತಿತ್ತು. ಅಂದರೆ ಶ್ರೀಮಂತರಿಗಷ್ಟೇ ಮತ ಚಲಾಯಿಸುವ ಅಧಿಕಾರ.

ಮೋತಿಲಾಲ್ ನೆಹರೂ ಬಹಳ ಗಟ್ಟಿಯಾಗಿ, ಯಾವುದೇ ಅಳುಕಿಲ್ಲದೆ, 'ಹೌದು, ನಾನು ಕುಡಿಯುತ್ತೇನೆ. ನನ್ನ ಅಪ್ಪ ಕುಡಿಯುತ್ತಿದ್ದರು, ಅದಕ್ಕೂ ಮೊದಲು ನನ್ನ ಅಜ್ಜ ಕುಡಿಯುತ್ತಿದ್ದರು, ನನ್ನ ಮಗ ಕೂಡ ಕುಡಿಯುತ್ತಾನೆ, ಬಹುಶಃ ನನ್ನ ಮೊಮ್ಮಗ ಕೂಡ ಕುಡಿಯುವವನೇ ಆಗಿರುತ್ತಾನೆ. ಅದರಿಂದ ನಿಮಗೇನಾದರೂ ಸಮಸ್ಯೆಯಿದೆಯೇ?' ಎಂದು ಕೇಳಿದ್ದರು.

ಪ್ರಶ್ನೆ ಕೇಳಿದವನು ಮೌನವಾಗಿದ್ದ. ಯಾವ ಅಡೆತಡೆಯೂ ಇಲ್ಲದೆ ಮೋತಿಲಾಲ್ ಗೆದ್ದರು. ಅವರು ಮತ್ತು ಅವರ ತಲೆಮಾರು ಯಾವುದೇ ರೀತಿಯ ಆಷಾಢಭೂತಿತನ ಅಥವಾ ನಾಟಕಗಳನ್ನು ಮೀರಿ ನಿಂತಿತ್ತು.

ಈ ಕತೆ ಹೇಳಿದವರು ಬ್ರಜ್ ಕುಮಾರ್ ನೆಹರೂ. ಬಿಕೆ ಅಥವಾ ಬಿಜ್ಜು ಎಂದೂ ಅವರು ಪ್ರಸಿದ್ಧರು. ಬಿಕೆ ಬೆಳೆದಿದ್ದು ಮೋತಿಲಾಲ್ ನೆಹರೂ ಅವರ ಕೂಡು ಕುಟುಂಬದ 'ಆನಂದ ಭವನ' ಮನೆಯಲ್ಲಿ. ಬಿಕೆ ಒಂದು ಪುಸ್ತಕ ಬರೆದಿದ್ದಾರೆ. ಅದರ ಹೆಸರು 'ನೈಸ್ ಗೈಸ್ ಫಿನಿಶ್ ಸೆಕೆಂಡ್.' ಅದು ಕೇವಲ ಹತ್ತರಲ್ಲೊಂದು ಎಂಬಂತಹ ಸ್ಮರಣಿಕೆಯಲ್ಲ. ಈ ದೇಶದ ಇತಿಹಾಸದ ಅತ್ಯಂತ ಪ್ರಮುಖ ವಿದ್ಯಮಾನಗಳ ಸರೋವರದಿಂದ ಹೆಕ್ಕಿ ತೆಗೆದ ನೆನಪುಗಳು ಅದರಲ್ಲಿವೆ. 20ನೇ ಶತಮಾನದ ಉತ್ತರ ಭಾರತದ ಶ್ರೀಮಂತ ಕುಟುಂಬವೊಂದರ ಸೊಗಸಾದ ಚಿತ್ರಣವನ್ನು ಅದು ಹೊಂದಿದೆ. ಹೆಚ್ಚುಕಮ್ಮಿ ಮೂರು ದಶಕಗಳಿಂದ ಈ ಪುಸ್ತಕ ನನ್ನ ರೀಡಿಂಗ್ ಲಿಸ್ಟ್‌ನಲ್ಲಿತ್ತು. ಆದರೆ ಓದಿರಲಿಲ್ಲ. ಇತ್ತೀಚೆಗೆ ಹೇಗೋ ಕೈಗೆತ್ತಿಕೊಂಡೆ. ನಂತರ ಕೆಳಗಿರಿಸಲು ಆಗಲಿಲ್ಲ. ಮೋತಿಲಾಲರ ವ್ಯಕ್ತಿತ್ವವು ಸಾಮಾಜಿಕ ಇತಿಹಾಸಕ್ಕೆ ಹೊಸ ಆಯಾಮ ನೀಡುವ ಬೆಳಕಿದ್ದಂತೆ. ಅವರ ಬದುಕಿನಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಡಿಗಲ್ಲು ಹಾಕಿದ ಆ ತಲೆಮಾರಿನವರ ಪ್ಯಾಷನ್, ನಂಬಿಕೆಗಳು ಹಾಗೂ ಸಾಮಾಜಿಕ ನಡವಳಿಕೆಗಳು ಬಿಂಬಿತವಾಗಿದ್ದವು. 1920ರ ನಂತರ ಭಾರತದ ರಾಷ್ಟ್ರೀಯತೆಯ ಆತ್ಮವನ್ನು ರೂಪಿಸಿದ ಶಿಲ್ಪಿಯಾಗಿ ಮೋಹನದಾಸ್ ಗಾಂಧಿ ಹೊರಹೊಮ್ಮಿದರು. ಅವರು ಸ್ವಯಂ ಆಡಳಿತದ ನಿಯಮಗಳನ್ನು ರಚಿಸಿದರು. ಆದರೆ 1948ರಲ್ಲಿ ಮಹಾತ್ಮನ ಹತ್ಯೆಯಾಗಿ ಒಂದೇ ದಶಕದೊಳಗೆ ಅವು ಹೇಳಹೆಸರಿಲ್ಲದಂತೆ ಹೋದವು.

ಗಾಂಧೀಜಿಯವರ ರಾಜಕೀಯ ಸಿದ್ಧಾಂತ ಮೋತಿಲಾಲ್‌ಗೆ ಒಪ್ಪಿತವಾಗುತ್ತಿರಲಿಲ್ಲ. ಬ್ರಹ್ಮಚರ್ಯ, ಮದ್ಯಪಾನ ವಿರೋಧ, ಗುಡಿ ಕೈಗಾರಿಕೆಗಳನ್ನು ಆಧರಿಸಿದ ಗ್ರಾಮೀಣ ಆರ್ಥಿಕತೆ ಹಾಗೂ ಅಹಿಂಸಾ ತತ್ವಗಳಲ್ಲಿ ಮೋತಿಲಾಲ್‌ಗೆ ನಂಬಿಕೆಯಿರಲಿಲ್ಲ. ಭಾರತೀಯರನ್ನು ಶೋಷಿಸುತ್ತಿರುವ ಬ್ರಿಟಿಷ್ ಅಧಿಕಾರಿಗಳನ್ನು ಸಿಗಿದು ಹಾಕುತ್ತೇನೆ ಎಂದು ಮೋತಿಲಾಲ್ ತಮ್ಮ ಮನೆಯವರ ಎದುರು ಅಬ್ಬರಿಸಿದ್ದರು. ಆದರೆ ಬೇರಾವ ವಿದೇಶಿಗರ ಬಗ್ಗೆಯೂ ಅವರು ಈ ರೀತಿಯ ದ್ವೇಷಭಾವನೆ ಹೊಂದಿರಲಿಲ್ಲ. ಮೋತಿಲಾಲ್ ಪಾಶ್ಚಾತ್ಯ ಉಡುಗೆ, ಊಟವನ್ನು ಇಷ್ಟಪಡುತ್ತಿದ್ದರು. ಸಾಮಾಜಿಕ ಸುಧಾರಣೆ ಹಾಗೂ ಶಿಕ್ಷಣವನ್ನು ಉತ್ತೇಜಿಸುತ್ತಿದ್ದರು. ಅದರಿಂದ ಆರ್ಥಿಕ ಉನ್ನತಿ ಸಾಧ್ಯ ಎನ್ನುತ್ತಿದ್ದರು. ಗಾಂಧೀಜಿಯವರ ಬುದ್ಧಿವಂತಿಕೆ, ತ್ಯಾಗ, ಬದ್ಧತೆ ಹಾಗೂ ಭಾರತೀಯರ ಕಲ್ಪನಾಶಕ್ತಿಯ ಮೇಲೆ ಅವರಿಗಿರುವ ಹಿಡಿತವನ್ನು ಮೋತಿಲಾಲ್ ಮೆಚ್ಚಿಕೊಳ್ಳುತ್ತಿದ್ದರು. ಗಾಂಧೀಜಿಯವರ ನಾಯಕತ್ವವನ್ನೂ ಅವರು ಒಪ್ಪಿಕೊಳ್ಳುತ್ತಿದ್ದರು, ಆದರೆ ಪ್ರತಿಯೊಂದು ವಿಷಯದಲ್ಲೂ ಉಪದೇಶ ಮಾಡುವ ತವಕ ಹೊಂದಿರುತ್ತಿದ್ದ ಗಾಂಧೀಜಿಯ ನಡೆ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಆದರೆ ಅದಕ್ಕೆ ಪ್ರತಿಯಾಗಿ ಗಾಂಧೀಜಿ ತಾವು ಬಯಸಿದ್ದನ್ನೇ ಸ್ವತಂತ್ರ ಬೌದ್ಧಿಕ ವಲಯದಲ್ಲಿ ಇರಲು ಇಚ್ಛಿಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರ ಮೇಲೂ ಬಹಳ ಜಾಣ್ಮೆಯಿಂದ ಹೇರುತ್ತಿದ್ದರು.

ಮಗ ಜವಾಹರಲಾಲ್ ಎತ್ತರಕ್ಕೆ ಬೆಳೆದಾಗ ಮೋತಿಲಾಲ್ ಬಹಳ ಹೆಮ್ಮೆಪಟ್ಟಿದ್ದರು. ಮಗ ತನ್ನನ್ನು ಮೀರಿಸಿದಾಗ ಒಬ್ಬ ತಂದೆಗೆ ಆಗುವ ಸಂತೋಷವೇ ಅವರಿಗೂ ಆಗಿತ್ತು. ಆಗ ಮನೆಯವರು ಹಾಗೂ ಸ್ನೇಹಿತರ ಎದುರು 'ಜವಾಹರ್ ಒಬ್ಬ ವಿಧಿಯ ಮನುಷ್ಯ' ಎಂದು ಹೇಳಿದ್ದರು. 'ಮ್ಯಾನ್ ಆಫ್ ಡೆಸ್ಟಿನಿ' ಎಂಬುದು ವಿಕ್ಟೋರಿಯನ್ ಇಂಗ್ಲಿಷ್‌ನ ಪದಗಟ್ಟು. ಭಾರತದ ಮೊದಲ ಪ್ರಧಾನಿಯಾಗಿ ಜವಾಹರಲಾಲ್ ನೆಹರೂ ಅವರು ಕಾಲು ಭಾಗ ಬೆಂದ ಗಾಂಧಿ ತತ್ವಗಳು ಹಾಗೂ ಅರೆಬರೆ ಬೆಂದ ಮಾರ್ಕ್ಸಿಸ್ಟ್ ತತ್ವಗಳನ್ನು ಬಳಸಿ ಆರ್ಥಿಕತೆಯ ಮೇಲೆ ಸರಕಾರದ ಹಿಡಿತ ಸಾಧಿಸಲು ಯತ್ನಿಸಿದರು. ಅದು ಹಲವು ದಶಕಗಳ ಕಾಲ ಭಾರತದ ಆರ್ಥಿಕತೆಯನ್ನು ಲೈಸನ್ಸ್ ರಾಜ್‌ನ ಸಂಕೋಲೆಯಲ್ಲಿ ಸಿಲುಕಿ ನರಳುವಂತೆ ಮಾಡಿತು. 1980 ಹಾಗೂ 1990ರ ದಶಕದ ಆಧುನಿಕ ಯುಗ ಆರಂಭವಾದ ನಂತರವಷ್ಟೇ ಲೈಸನ್ಸ್ ರಾಜ್‌ನಿಂದ ಭಾರತ ಮುಕ್ತಿ ಪಡೆಯಿತು. ನನ್ನ ಒಳಮನಸ್ಸಿನಲ್ಲಿ ಯಾವಾಗಲೂ ಒಂದು ಪ್ರಶ್ನೆಯಿದೆ. ಜವಾಹರಲಾಲರು ಗಾಂಧೀಜಿಯವರ ಆರ್ಥಿಕ ನೀತಿ ಹಾಗೂ ಕಾರ್ಲ್ ಮಾರ್ಕ್ಸ್‌ರ ನೀತಿಗಳನ್ನು ಮಿಶ್ರಣ ಮಾಡಿ ವಿಚಿತ್ರವಾದ ಹೊಸ ಪಾಕವನ್ನು ತಯಾರಿಸುವುದರ ಬದಲಾಗಿ ಮೋತಿಲಾಲರ ಆರ್ಥಿಕ ನೀತಿಗಳನ್ನೇ ಅನುಸರಿಸಿದ್ದರೆ ಭಾರತ ಇಂದು ಇನ್ನೂ ಶಕ್ತಿಶಾಲಿಯಾದ ಆರ್ಥಿಕತೆಯಾಗಿ ಬೆಳೆದಿರುತ್ತಿತ್ತೇ? ಉತ್ತರ ನನಗೆ ಗೊತ್ತಿಲ್ಲ. ಆದರೆ ಅದರಿಂದ ಪ್ರಶ್ನೆಯ ಗಂಭೀರತೆಯೇನೂ ಕಡಿಮೆಯಾಗುವುದಿಲ್ಲ.

ಯುವಕನಾಗಿದ್ದಾಗ ಜವಾಹರಲಾಲ್ ತಮ್ಮ ತಂದೆಯ ಶ್ರೀಮಂತಿಕೆಯನ್ನು ಚೆನ್ನಾಗಿಯೇ ಅನುಭವಿಸಿದ್ದರು. ಅವರ ನಡೆ ನುಡಿಯಲ್ಲಿ ದರ್ಪವಿತ್ತು. ಮುರಬ್ಬದ ಡಬ್ಬಿಯ ಮುಚ್ಚಳ ತೆಗೆಯಲಾಗದಷ್ಟು ಬಿಗಿಯಾಗಿದೆಯೆಂದು ಒಮ್ಮೆ ಮನೆಯ ಕೆಲಸಗಾರರ ಮೇಲೇ ಆ ಡಬ್ಬಿ ಎಸೆದಿದ್ದರಂತೆ. ಮೋತಿಲಾಲರು ತಮ್ಮ ಮಕ್ಕಳಿಗೆ ಒಳ್ಳೆಯ ಪಾಶ್ಚಾತ್ಯ ಶಿಕ್ಷಣ ಕೊಡಿಸಿದ್ದರು. ಜವಾಹರಲಾಲ್ ಮತ್ತು ಸಹೋದರಿಯರಿಗೆ ಖಾಸಗಿ ಇಂಗ್ಲಿಷ್ ಶಿಕ್ಷಕರಿದ್ದರು. ಜವಾಹರಲಾಲ್ ತಮ್ಮ ಬಟ್ಟೆಯನ್ನು ಬ್ರಿಟನ್ ರಾಜನ ದರ್ಜಿಯಿಂದ ಹೊಲಿಸುತ್ತಿದ್ದರು. ಅವರು ಧೂಮಪಾನ ಆರಂಭಿಸಿದಾಗ ಅವರ ಸಿಗರೆಟ್‌ಗೆ ಗುಲಾಬಿ ಅಥವಾ ನೇರಳೆ ಫ್ಲೇವರ್‌ನ ಫಿಲ್ಟರ್ ಇರುತ್ತಿತ್ತು. ಗೆರೆ ಕೊರೆದಂತೆ ಅವರ ಮನೆಯ ದೈನಂದಿನ ಚಟುವಟಿಕೆಗಳು ಶಿಸ್ತಿನಿಂದ ನಡೆಯುತ್ತಿದ್ದವು. ಕಾಶ್ಮೀರಿ ಪಂಡಿತ ಅಡುಗೆಯವನು ಸಾಂಪ್ರದಾಯಿಕ ಅಡುಗೆಗಳನ್ನು ಮಾಡುತ್ತಿದ್ದ; ಮುಸ್ಲಿಂ ಅಡುಗೆಯವನು ಪಾಶ್ಚಾತ್ಯ ಶೈಲಿಯಲ್ಲಿ ಸೂಪ್, ಮೀನು, ಮಾಂಸ, ಸಿಹಿ ತಿನಿಸುಗಳನ್ನು ತಯಾರಿಸುತ್ತಿದ್ದ. ಮೋತಿಲಾಲರ ಟೇಬಲ್ ಮೇಲೆ ನಿತ್ಯ ಪಾಶ್ಚಾತ್ಯ ಊಟ ಇರಲೇಬೇಕಿತ್ತು.

ಆದರೆ ಯಾವತ್ತೂ ಅವರ ಮನೆಯಲ್ಲಿ ಆಡಂಬರ ಅಥವಾ ಶ್ರೀಮಂತಿಕೆಯ ಅಸಹ್ಯ ಪ್ರದರ್ಶನ ಇರುತ್ತಿರಲಿಲ್ಲ. ಇದಕ್ಕೆ ತದ್ವಿರುದ್ಧ ಉದಾಹರಣೆ ಅಲ್ಲೇ ಪಕ್ಕದಲ್ಲಿತ್ತು. ಮೋತಿಲಾಲರ ಜೊತೆ ಅಲಹಾಬಾದ್‌ನಲ್ಲೇ ವಕೀಲಿ ವೃತ್ತಿ ಮಾಡುತ್ತಿದ್ದ ಸರ್ ತೇಜ್ ಬಹಾದೂರ್ ಸಪ್ರು ಅವರ ಎರಡನೆಯ ಮಗ ತ್ರಿಜುಗಿ ನಾರಾಯಣ್ ನಾಲ್ಕೈದು ಹೆಜ್ಜೆಗಿಂತ ಹೆಚ್ಚು ಓಡದೆ ಟೆನ್ನಿಸ್ ಆಡುತ್ತಿದ್ದರು! ಬಾಲ್ ಬಾಯ್‌ಗಳು ಬಾಲ್ ಹೆಕ್ಕಿ ಕೊಡುವುದಷ್ಟೇ

ಅಲ್ಲ, ಅದನ್ನು ತ್ರಿಜುಗಿಯವರ ಬ್ಯಾಟ್ ಮೇಲೆ ಅಥವಾ ಕೈಮೇಲೆ ಇಡಬೇಕಿತ್ತು. ಕೆಳಗೆ ಬಾಗಿ ಬಾಲ್ ಎತ್ತಿಕೊಳ್ಳುವುದು ತಮ್ಮ ಘನತೆಗೆ ತಕ್ಕುದಲ್ಲ ಎಂಬಂತೆ ತ್ರಿಜುಗಿ ನಡೆದುಕೊಳ್ಳುತ್ತಿದ್ದರು. ಆಟ ಮುಗಿಯುತ್ತಿದ್ದಂತೆ ಒಬ್ಬ ಸೇವಕ ಓಡಿಬಂದು ಭುಜ ಹಾಗೂ ಕೈಗಳಿಗೆ ಮಸಾಜ್ ಮಾಡುತ್ತಿದ್ದ. ತ್ರಿಜುಗಿ ಕೋಟು ಧರಿಸುವುದು ಕೂಡ ಹೀಗೇ ಆಗಿತ್ತು. ಇನ್ನು, ಅವರಿಗೆ ಸಿಗರೆಟ್ ಸೇದಬೇಕು ಅನ್ನಿಸಿದಾಗ ಸೇವಕರು ಅದನ್ನು ತ್ರಿಜುಗಿಯ ಬಾಯಿಗೆ ಇಟ್ಟು ಬೆಂಕಿ ಹಚ್ಚಬೇಕಿತ್ತು. ಕೊನೆಗೆ ಹೊಗೆಯನ್ನು ಮಾತ್ರ ಸ್ವತಃ ತಾನೇ ಒಳಗೆ ಎಳೆದುಕೊಳ್ಳುತ್ತಿದ್ದರು.

ಆನಂದ ಭವನದ ಐಷಾರಾಮಿ ಜೀವನ 1920ರಲ್ಲಿ ಬದಲಾಯಿತು. ಗಾಂಧೀಜಿಯವರು ಸರಳ ಜೀವನಕ್ಕೆ ಕರೆ ನೀಡಿದ್ದರಿಂದ ಜವಾಹರಲಾಲ್ ನೆಹರೂ ಚಹಾ ಜೊತೆ ಬಡವರ ಬಾದಾಮಿ ತಿನ್ನತೊಡಗಿದರು. ರೇಷ್ಮೆ ಬಟ್ಟೆಯ ಬದಲು ಕೈಮಗ್ಗದ ಖಾದಿ ಬಟ್ಟೆ ಧರಿಸತೊಡಗಿದರು. ಮೋತಿಲಾಲರು ಒಲ್ಲದ ಮನಸ್ಸಿನಿಂದ ಖಾದಿ ಕೈಮಗ್ಗದ ಬಟ್ಟೆಗಷ್ಟೇ ತಮ್ಮ ಜೀವನಶೈಲಿ ಬದಲಿಸಿಕೊಂಡರು. ಆದರೆ ಆಂಧ್ರದಿಂದ ಅತ್ಯುತ್ತಮ ಕೈಮಗ್ಗದ ಬಟ್ಟೆ ತರಿಸಿಕೊಂಡರು. 'ಡಿಯರ್ ಓಲ್ಡ್ ಕಾಶ್ಮೀರಿ ಲೇಡಿ' ಮೋತಿಲಾಲರ ಬಳಿ ನಿಮ್ಮ ಐಷಾರಾಮಿ ಆಧುನಿಕ ಬಂಗಲೆಗೆ ಜವಾಹರಲಾಲನ ಕೊಡುಗೆಯೇನು ಎಂದು ಕೇಳಿದಾಗ, 'ಆ ಮಹಾನುಭಾವ ಸಣ್ಣಪುಟ್ಟ ತಪ್ಪುಗಳನ್ನು ಹುಡುಕಿಕೊಂಡಿರುತ್ತಾನೆ' ಎಂದು ಹೇಳಿದ್ದರು. ಮೋತಿಲಾಲರು ಕೊಲ್ಕತ್ತಾದ ಟಾಮ್ಲಿನ್‌ನಿಂದ ಬರೋಬ್ಬರಿ 16000 ರೂಪಾಯಿಗೆ ಪೀಠೋಪಕರಣಗಳನ್ನು ಆರ್ಡರ್ ಮಾಡಿದಾಗ (ಆಗ ಮುಂಬೈನ ತಾಜ್ ಹೋಟೆಲ್‌ನಲ್ಲಿ ಒಂದು ದಿನಕ್ಕೆ 23 ರೂ. ಬಾಡಿಗೆ ಇತ್ತು) ಜವಾಹರಲಾಲ್ 'ಸಾಮಾನ್ಯ ಫರ್ನಿಚರ್ ಸಾಕು' ಎಂದು ಹೇಳಿದ್ದರು. ಗಾಂಧೀಜಿಯ ಸಿದ್ಧಾಂತಗಳಿಗೆ ಶರಣಾದ ಮತ್ತು ಮಾರ್ಕ್ಸ್‌ನ ಗುಂಗಿನಲ್ಲೇ ಇನ್ನೂ ಇರುವ ಜವಾಹರಲಾಲ್ ತಮ್ಮನ್ನು ತಾವು 'ಡಿ-ಕ್ಲಾಸ್' ಮಾಡಿಕೊಳ್ಳಲು ಯತ್ನಿಸಿದ್ದರು. ತ್ಯಾಗ ಕೂಡ ಕೆಲವೊಮ್ಮೆ ಕ್ಷುಲ್ಲಕವಾಗಬಹುದು. 1927ರಲ್ಲಿ ಜವಾಹರಲಾಲ್ ಯುರೋಪಿನಿಂದ ಮರಳಿದಾಗ ರಾತ್ರಿಯ ಊಟವನ್ನು ಕಡಿತಗೊಳಿಸಿದರು. ತಂದೆ ಮತ್ತು ಮಗ ಇಬ್ಬರೂ ಮನೆಯ ವಾತಾವರಣ ತಾರ್ಕಿಕವಾಗಿರಬೇಕು, ತಾವೆಲ್ಲರೂ ಅಜ್ಞೇಯತಾವಾದಿಯಾಗಿರಬೇಕು, ಸಂಪ್ರದಾಯಗಳಿಗೆ ಅಥವಾ ಜಾತಿಪದ್ಧತಿಗೆ ಶರಣಾಗುವುದರ ಬದಲು ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ಒತ್ತು ನೀಡಬೇಕು ಎಂದು ಒಪ್ಪಂದ ಮಾಡಿಕೊಂಡಿದ್ದರು. ಮೋತಿಲಾಲರು ಮೊದಲ ಬಾರಿ ವಿದೇಶ ಪ್ರಯಾಣ ಮಾಡಿ ಮರಳಿ ಬಂದಾಗ ಪ್ರಾಯಶ್ಚಿತ್ತ ಮಾಡಿಕೊಂಡು ಶುದ್ಧೀಕರಣ ಪ್ರಕ್ರಿಯೆಗೆ ಒಳಗಾಗಲು ನಿರಾಕರಿಸುವ ಮೂಲಕ ಉನ್ನತ ಜಾತಿಯ 'ಪಾವಿತ್ರ್ಯ'ವನ್ನು ಉಳಿಸಿಕೊಳ್ಳಲು ನಿರಾಕರಿಸಿದ್ದರು.

ಮೋತಿಲಾಲರ ಸಂಪತ್ತು ಅವರ ನಿರಂತರ ದುಡಿಮೆಯ ಫಲ. ರಾತ್ರಿ 8.30 ಅಥವಾ 9 ಗಂಟೆಯವರೆಗೂ ಅವರು ಕೆಲಸ ಮಾಡುತ್ತಿದ್ದರು. ಅದು ಮುಗಿಯುತ್ತಿದ್ದಂತೆ 'ಯಾರಾದರೂ ಇದ್ದೀರಾ?' ಎಂದು ಜೋರಾಗಿ ಕರೆಯುತ್ತಿದ್ದರು. ಸದಾ ತಯಾರಾಗಿ ನಿಂತಿರುತ್ತಿದ್ದ ಭೋಲಾ 'ಹಾಜಿರ್ ಸಾಬ್' ಎಂದು ಪ್ರತ್ಯಕ್ಷನಾಗುತ್ತಿದ್ದ. ಅವನ ಕೈಲಿ ಹೇಗ್ಸ್ ಡಿಂಪಲ್ ಸ್ಕಾಚ್ ಮತ್ತು ಅಬ್ದುಲ್ಲಾ ಸಿಗರೆಟ್ ಇರುತ್ತಿತ್ತು. ಅದು ಕಳಪೆ ವರ್ಜೀನಿಯಾ ತಂಬಾಕಿನಿಂದ ತಯಾರಿಸಿದ್ದಲ್ಲ, ಅತ್ಯುತ್ಕೃಷ್ಟ ಟರ್ಕಿಶ್ ಅಥವಾ ಈಜಿಪ್ಷಿಯನ್ ತಂಬಾಕಿನ ಸಿಗರೆಟ್. ಮೋತಿಲಾಲರು ನಿತ್ಯ ಕುಡಿಯುತ್ತಿದ್ದುದು ಎರಡು ಡ್ರಿಂಕ್ ಮಾತ್ರ. ಆದರೆ ಪ್ರತಿ ಡ್ರಿಂಕ್‌ನ ಗಾತ್ರ ಎಷ್ಟು ಎಂಬುದು ಯಾರಿಗೂ ಗೊತ್ತಿರಲಿಲ್ಲ. ಎರಡನೇ ಡ್ರಿಂಕ್ ಮುಗಿಯುತ್ತಾ ಬಂದಾಗ ನಿಗೂಢ ರೀತಿಯಲ್ಲಿ ಗ್ಲಾಸ್‌ನಲ್ಲಿ ನೊಣ ಬಿದ್ದಿರುತ್ತಿತ್ತು! ಅಂದರೆ ಅದನ್ನು ಚೆಲ್ಲಿ ಮೂರನೇ ಡ್ರಿಂಕ್ ಸುರಿಯಬೇಕಾಗಿತ್ತು.

ಗಾಂಧೀಜಿ ಅಸಹಕಾರ ಚಳವಳಿಗೆ ಕರೆ ಕೊಟ್ಟಾಗ ಜವಾಹರಲಾಲ್ ಅವರು ತಂದೆಯ ಮನವೊಲಿಸಿ ಮದ್ಯ ಸೇವನೆ ನಿಲ್ಲಿಸಿದರು. ಐಷಾರಾಮಿ ಬದುಕನ್ನೂ ನಿಲ್ಲಿಸುವಂತೆ ನೋಡಿಕೊಂಡಿದ್ದರು. ಆದರೆ, ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ವಿಧಿಯೇ ಅವರ ನೆರವಿಗೆ ಬಂದಿತು. ಬ್ರಿಟಿಷ್ ಆಡಳಿತಕ್ಕೆ ಸವಾಲೆಸೆದ ಕಾರಣವೊಡ್ಡಿ ಮೋತಿಲಾಲ್, ಕಾನೂನು ಪಂಡಿತರು ಹಾಗೂ ರಾಜಸಂಸ್ಥಾನಗಳ ಪ್ರಮುಖರಿಗೆ ಆರು ತಿಂಗಳ ಸಾಮಾನ್ಯ ಜೈಲುಶಿಕ್ಷೆ ವಿಧಿಸಲಾಯಿತು. ವಾಸಸ್ಥಾನ ಬದಲಾಯಿತು, ಆದರೆ ವಾಸಿಸುವವರು ಬದಲಾಗಲಿಲ್ಲ. ಮೋತಿಲಾಲರು ಮನೆಯಲ್ಲಿ ಮಾಡುತ್ತಿದ್ದಂತೆ ಜೈಲಿನ ಕೋಣೆಯಿಂದಲೂ ವಾರ್ಡನ್‌ಗಳಿಗೆ ಅದೇ ಹಳೆಯ ಗತ್ತಿನಲ್ಲಿ ಆದೇಶಗಳನ್ನು ನೀಡುತ್ತಿದ್ದರು. ಟೇಬಲ್ ಬದಲು ನೆಲದ ಮೇಲೆ ಜಮಖಾನ ಹಾಸಿಕೊಂಡು ಕುಳಿತು ಪ್ರತಿದಿನ ಮಧ್ಯಾಹ್ನದ ಬಳಿಕ ಜೈಲಿನ ಕೋಣೆಗೇ ಅತಿಥಿಗಳನ್ನು ಕರೆಸಿಕೊಳ್ಳುತ್ತಿದ್ದರು. ಅವರ ಮುಂದೆ ದೊಡ್ಡ ಹಣ್ಣಿನ ಬುಟ್ಟಿ ಮತ್ತು ಸ್ವೀಟ್‌ಗಳಿರುತ್ತಿದ್ದವು. ಅವರಿಗೆ ಯಾವುದೇ ನಿರ್ಬಂಧಗಳಿರಲಿಲ್ಲ. ಇಡೀ ಲಕ್ನೋದಲ್ಲಿ ಅತ್ಯುತ್ತಮ ಮಧ್ಯಾಹ್ನದ ಟೀ ಜೈಲಿನೊಳಗೆ ಸಿಗುತ್ತದೆ ಎಂದು ಸುದ್ದಿಯಾಗಿತ್ತು! ಮೋತಿಲಾಲರು ಹೊಟ್ಟೆಯೊಳಗಿನಿಂದ ಗಹಗಹಿಸಿ ನಗುವುದು ಇಡೀ ಜೈಲಿನಲ್ಲಿ ಪ್ರತಿಧ್ವನಿಸುತ್ತಿತ್ತು. ಅವರಿಗೆ ಜೈಲಿನಲ್ಲೂ ಐಷಾರಾಮಿ ಬದುಕು ಲಭಿಸಲು ಕಾರಣ- ಸಂಯುಕ್ತ ಪ್ರಾಂತ್ಯಗಳ ಗವರ್ನರ್ ಆಗಿದ್ದ ಸರ್ ಹಾರ್‌ಕೌರ್ಟ್ ಬಟ್ಲರ್ ಜೊತೆ ಮೋತಿಲಾಲರಿಗೆ ಆಪ್ತವಾದ ಸ್ನೇಹವಿತ್ತು. ಅವರಿಬ್ಬರೂ ಒಟ್ಟಾಗಿ ನದಿಗಟ್ಟಲೆ ಶಾಂಪೇನ್ ಕುಡಿದಿದ್ದರು. ಭೂಮಾಲಿಕರು, ತಾಲೂಕಿನ ಶ್ರೀಮಂತರು, ಜಮೀನ್ದಾರರು ಏರ್ಪಡಿಸುತ್ತಿದ್ದ ಪಾರ್ಟಿಗಳಿಗೆ ಅವರಿಬ್ಬರೂ ಒಟ್ಟಿಗೇ ಹೋಗುತ್ತಿದ್ದರು. ಆದರೆ, ಮೋತಿಲಾಲರ ಸಾವಿನ ಬಳಿಕ 1930ರ ದಶಕದಲ್ಲಿ ಜವಾಹರಲಾಲರ ಜೈಲುವಾಸ ಬಹಳ ಸರಳವಾಗಿತ್ತು.

(ಮುಂದುವರೆಯುವುದು)

ಭಟ್ಟರ್ ಸ್ಕಾಚ್

- **ನಾಗರಾಜ ಮೀನಾ, (ಇಮೇಲ್ ಮೂಲಕ)**
ಭಟ್ರೇ, ರಾಜ್ಯದ ಯಾವ ಊರು ಪ್ರಸಿದ್ಧ ಪ್ರೇಕ್ಷಣೀಯ ತಾಣವಾಗಬಹುದು?
- **ನೊಣವಿನಕೆರೆ!**

- **ಪವಮಾನಾಚಾರ್, ಮೈಸೂರು**
ಭಟ್ರೇ, ನೈರುತ್ಯ ಮುಂಗಾರು ಪ್ರವೇಶ ತಡವಾಗಿದ್ದಿದ್ದರೆ ಹವಾಮಾನ ಅಧಿಕಾರಿಗಳು ಏನು ಸಬೂಬು ಹೇಳುತ್ತಿದ್ದರು?
- **ಕೇರಳ ಕೇರಳಂ ಆಗಿ ಬದಲಾವಣೆ ಆಗಿದ್ದರಿಂದ ಸ್ವಲ್ಪ ಗೊಂದಲವಾಗಿದೆ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿಹೋಗಲಿದೆ!**

- **ಲತಾ ಶ್ರೀಧರ, ಚನ್ನರಾಯಪಟ್ಟಣ**
ಭಟ್ರೇ, ಡಿಕೆಶಿ ಅವರ ಮೇಲೆ ಭರವಸೆ ಇಡಬಹುದಾ?
- **ಅದನ್ನು ಈಡೇರಿಸುವ ಹೊಣೆ ಅವರದ್ದಾಗಿರುವುದರಿಂದ ಖಂಡಿತವಾಗಿಯೂ ಇಡಬಹುದು!**

- **ವತ್ಸಲಾ ರೆಡ್ಡಿ, ಕೋರಮಂಗಲ**
ಭಟ್ರೇ, ಈಗಿನ ಕಾಲದ ಹುಡುಗರು ಸದಾ ಸೋಷಿಯಲ್ ಮೀಡಿಯಾದಲ್ಲೇ ಇರ್ತಾರಲ್ಲ?
- **ಹೂಂ.. ಅಲ್ಲೇ ಊಟ, ಉಪಾಹಾರ, ನಿದ್ದೆಯನ್ನೂ ಮಾಡ್ತಾರೆ!**

- **ಅಭಿಷೇಕ್, (ಇಮೇಲ್ ಮೂಲಕ)**
ಭಟ್ರೇ, ಪ್ರೀತಿ ನಿಂತ ನೀರಾದರೆ ಒಳ್ಳೆಯದಾ, ಹರಿವ ನದಿಯಾದರೆ ಒಳ್ಳೆಯದಾ?
- **ಶುದ್ಧವಾಗಿದ್ದರೆ ನಲ್ಲಿ ನೀರಾದರೂ ಆದೀತು!**

- **ರಮ್ಯಾ ಘಾಟಗೆ, ತುಮಕೂರು**
ಭಟ್ರೇ, ಇಲ್ಲೊಬ್ಬ ಹದಿನೈದು ದಿನಕ್ಕೊಮ್ಮೆ ಸ್ನಾನ ಮಾಡ್ತಾನಲ್ಲ?
- **ಕೋಣಕ್ಕೆ ಹದಿನೈದು ದಿನಕ್ಕೊಮ್ಮೆ ಮಾತ್ರ ಸ್ನಾನ ಮಾಡಿಸೋದು ಕಣಮ್ಮ!**

- **ಕೆ. ಭರತ್, ಹಾಸನ**
ಭಟ್ರೇ, ಒಳ್ಳೆಯ ಮುಹೂರ್ತ ನೋಡಿ ಪ್ರಸ್ತ ಇಟ್ಟರೆ ಒಳ್ಳೆಯ ಮಕ್ಕಳೇ ಹುಟ್ಟುತ್ತಾರಾ?
- **ಈ ವಿಷಯದಲ್ಲಿ ವಾಸ್ತುಶಾಸ್ತ್ರಜ್ಞರನ್ನು ಸಂಪರ್ಕಿಸಬೇಕಿಲ್ಲ!**

- **ದಿನೇಶ ಶೆಟ್ಟಿ, ಕುಂದಾಪುರ**
ಭಟ್ರೇ, ಯಾವಾಗ ಬರಲಿ ಅಂತ ಕೇಳುತ್ತಾಳಲ್ಲ?
- **ಜನಗಣತಿಯವರು ಇರಲಿಕ್ಕಿಲ್ಲ!**

- **ನಾಗೇಶ ಹಿರಿಯೂರು, ಹಿರಿಯೂರು**
ಭಟ್ರೇ, ನನಗೂ ಅವಳಿಗೂ ಕನೆಕ್ಟ್ ಆಗ್ತಾ ಇಲ್ಲವಲ್ಲ?
- **ನೀನು ಅವಳನ್ನು ಬ್ಲೂಟೂತ್ ಎಂದು ಭಾವಿಸಿರುವಂತಿದೆ!**

ಅಲ್ಲಿ ನೀರಲ್ಲಿ ಸಮರ, ಇಲ್ಲಿ ನೀರಿಗಾಗಿ ಸಮರ

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ಕಳೆದ ವರ್ಷ ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಭರ್ಜರಿ ಎನ್ನುವಷ್ಟು ಮಳೆಯಾಗಿತ್ತು. ಆದರೆ ಈ ಬಾರಿ ಮಳೆರಾಯ ಆಗಾಗ ಬಂದು ಹೋಗುವ ಕೆಲಸ ಮಾಡುತ್ತಿದ್ದಾನೆ. ಕಳೆದ ವರ್ಷ ಮೇ ತಿಂಗಳಿನಲ್ಲಿಯೇ ಕಾಲಿಟ್ಟ ವರುಣ ಈ ಬಾರಿ ಈಗ ತಾನೇ ಹೊಸ್ತಿಲು ತುಳಿದಿದ್ದಾನೆ. ಸಣ್ಣಪುಟ ಮಳೆಗೂ ನಲುಗುವ ಬೆಂಗಳೂರಿನ ರಸ್ತೆಗಳು ಬಿಟ್ಟರೆ ಬೇರೆಲ್ಲೂ ಸರಿಯಾಗಿ ನೀರು ಹರಿದಿಲ್ಲ. ಕೃಷಿ ಚಟುವಟಿಕೆಗಳು ಇನ್ನಷ್ಟೇ ಆರಂಭವಾಗಬೇಕಿದೆ. ಈ ಮಧ್ಯೆ ಹವಾಮಾನ ತಜ್ಞರು ಈ ಬಾರಿ ಮುಂಗಾರು ವಾಡಿಕೆಗಿಂತ ಕಡಿಮೆಯಾಗಿರಲಿದೆ ಎಂದು ಎಚ್ಚರಿಸಿದ್ದಾರೆ. ಮುಂದಿನ ದಿನಗಳಲ್ಲಿ ಎಲ್‌ನಿನೋ ಪ್ರಭಾವದ ಕಾರಣ ಜಾಗತಿಕ ತಾಪಮಾನ ಪ್ರಮಾಣ ಹೆಚ್ಚಾಗಲಿದೆ. ಭಾರತ ಸೇರಿದಂತೆ ಜಗತ್ತಿನ ಅನೇಕ ದೇಶಗಳಲ್ಲಿ ಮಳೆ ಪರಿಸ್ಥಿತಿ ಏರುಪೇರಾಗಬಹುದು ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ. ಈ ನಡುವೆ ಜಲಸಂಪನ್ಮೂಲ ಖಾತೆ ಬೇಡ, ಪಡಿತರ ಖಾತೆ ಬೇಡ ಎಂದು ನಮ್ಮ ಮಂತ್ರಿ ಮಹನೀಯರು ಖಾತೆ ಕ್ಯಾತೆಯಲ್ಲಿ ಮುಳುಗಿದ್ದಾರೆ. ನಾವು ಇದನ್ನೇ ಜಾಗತಿಕ ವಿದ್ಯಮಾನವೆಂಬಂತೆ ಪುಳಕಿತರಾ ಗುತ್ತಿದ್ದೇವೆ.

ಕರ್ನಾಟಕದ ವಿಷಯಕ್ಕೆ ಬರುವುದಾದರೆ ಕಳೆದ ಒಂದು ದಶಕದಿಂದ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಎದುರಾಗಿಲ್ಲ. ಆಗಾಗ ಕಾವೇರಿ ನೀರಿಗಾಗಿ ತಮಿಳುನಾಡು ತಕರಾರು ತೆಗೆದರೂ ಪ್ರಕೃತಿಯ ಕೃಪೆಯಿಂದ 10 ವರ್ಷಗಳಲ್ಲಿ ಎರಡೂ ರಾಜ್ಯಗಳಿಗೆ ನೀರಿನ ಕೊರತೆ ಆಗಿಲ್ಲ. ತಮಿಳುನಾಡಿಗೆ ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ಬಿಡಬೇಕಿರುವ ವಾರ್ಷಿಕ 177.25 ಟಿಎಂಸಿ ನೀರಿಗಿಂತ ಹೆಚ್ಚು ಪ್ರಮಾಣದ ನೀರು ಹರಿದು ಹೋಗಿದೆ. ಆದರೆ ಈ ಬಾರಿ ಪರಿಸ್ಥಿ ಭಿನ್ನವಾಗಿದೆ. ಕಳೆದ ವರ್ಷ ಇದೇ ಹೊತ್ತಿಗೆ ಕನ್ನಂಬಾಡಿ ಕಟ್ಟೆಯಲ್ಲಿ 100 ಅಡಿಗಿಂತ ಹೆಚ್ಚಿನ ನೀರು ಶೇಖರವಾಗಿತ್ತು. ಈ ಬಾರಿ ನೀರಿನ ಮಟ್ಟ 81 ಅಡಿಗಳಿಗೆ ಕುಸಿದಿದೆ. ಸಕಾಲಕ್ಕೆ ಮಳೆ ಸುರಿದು ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ ಜಲಾಶಯಗಳು ತುಂಬದಿದ್ದರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ತಜ್ಞರ ಎಚ್ಚರಿಕೆಯನ್ನು ಗಣನೆಗೆ ತೆಗೆದುಕೊಂಡರೆ ಕಾವೇರಿ ನೀರಿಗಾಗಿ ಎರಡೂ ರಾಜ್ಯಗಳ ನಡುವೆ ಮತ್ತೊಮ್ಮೆ ಕಲಹ ಭುಗಿಲೇಳುವ ಸಾಧ್ಯತೆ ಹೆಚ್ಚಿದೆ.

ಭಾರತೀಯ ಹವಾಮಾನ ಇಲಾಖೆ ಮತ್ತು ವಿಶ್ವ ಹವಾಮಾನ ಸಂಸ್ಥೆ ಬಿಡುಗಡೆ ಮಾಡಿರುವ ವರದಿಗಳು ದೇಶದ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತ ಮತ್ತು ಕರ್ನಾಟಕದ ಪಾಲಿಗೆ ಆತಂಕಕಾರಿಯಾಗಿವೆ. ಪೆಸಿಫಿಕ್ ಮಹಾಸಾಗರದಲ್ಲಿ ತಲ್ಲಣ ಮೂಡಿಸುತ್ತಿರುವ 'ಎಲ್ ನಿನೋ' ವಿದ್ಯಮಾನವು ಈ ಬಾರಿ ಭಾರತದ ಮುಂಗಾರನ್ನು ನುಂಗಿಹಾಕುವ ಮುನ್ಸೂಚನೆ ನೀಡಿದೆ. ಈ ವರ್ಷ ರಾಷ್ಟ್ರೀಯ ಸರಾಸರಿ ಮಳೆಯು ದೀರ್ಘಾವಧಿಯ ಸರಾಸರಿಗಿಂತ ಶೇಕಡಾ 92 ರಷ್ಟು ಮಾತ್ರ ಇರಲಿದ್ದು, ಇದು ಕಳೆದ ಹನ್ನೊಂದು ವರ್ಷಗಳಲ್ಲಿಯೇ ಅತ್ಯಂತ ದುರ್ಬಲ ಮುಂಗಾರು ಆಗುವ ಭೀತಿ ಮೂಡಿಸಿದೆ. ಜಾಗತಿಕ ತಾಪಮಾನ ಏರಿಕೆಯ ಈ ಕೆಟ್ಟ ಹೊಡೆತವು ಕೇವಲ ಕೃಷಿ ಕ್ಷೇತ್ರಕ್ಕೆ ಮಾತ್ರವಲ್ಲದೆ, ಕುಡಿಯುವ ನೀರು, ಅಂತರರಾಜ್ಯ ಸಂಬಂಧಗಳು ಮತ್ತು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಮೇಲೂ ಗಂಭೀರ ಪ್ರಭಾವ ಬೀರಲಿದೆ.

ಮುಂಗಾರಿನ ಮೇಲೆ ಮುಸುಕು

ಬದಲಾಗುತ್ತಿರುವ ಜಾಗತಿಕ ಹವಾಮಾನ ವೈಪರೀತ್ಯಕ್ಕೆ 'ಎಲ್ ನಿನೋ' ಪ್ರಮುಖ ಕಾರಣ ಎಂದು ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ಎಲ್ ನಿನೋ ಮಧ್ಯ ಮತ್ತು ಪೂರ್ವ ಪೆಸಿಫಿಕ್ ಮಹಾಸಾಗರದಲ್ಲಿ ಸಮುದ್ರದ ಮೇಲ್ಮೈ ತಾಪಮಾನವು ಸಹಜ ಸ್ಥಿತಿಗಿಂತ 0.5 ರಿಂದ 2 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗುವ ಒಂದು ನೈಸರ್ಗಿಕ ಹವಾಮಾನ ವಿದ್ಯಮಾನ. ಆದರೆ ಸಮುದ್ರದ ನೀರು ಹೀಗೆ ಅಸಹಜವಾಗಿ ಕಾಯುವುದರಿಂದ ವಾತಾವರಣಕ್ಕೆ ಅಗಾಧ ಪ್ರಮಾಣದ ಬೆಚ್ಚಗಿನ ಗಾಳಿ ಬಿಡುಗಡೆಯಾಗುತ್ತದೆ. ಇದು ಭಾರತದ ಕಡೆಗೆ ತೇವಾಂಶವನ್ನು ಹೊತ್ತು ತರುವ ಮಾನ್ಸೂನ್ ಮಾರುತಗಳನ್ನು ದುರ್ಬಲಗೊಳಿಸುತ್ತದೆ. ಸರಳವಾಗಿ ಹೇಳುವುದಾದರೆ, ಎಲ್ ನಿನೋ ದೇಶದ ಮುಂಗಾರು ಮಾರುತಗಳನ್ನು ದೂರ ಮಾಡುತ್ತದೆ.

ಸಾಮಾನ್ಯವಾಗಿ ಭಾರತದಲ್ಲಿ 96 ರಿಂದ 104 ಸೆಂ.ಮೀ. ಮಳೆಯ ಪ್ರಮಾಣವನ್ನು ಸಾಮಾನ್ಯ ಮಳೆ ಎಂದು ಪರಿಗಣಿಸಿದರೆ, ಅದು ಶೇಕಡಾ 90ಕ್ಕೆ ಕುಸಿದಾಗ ಅಧಿಕೃತ ಬರಗಾಲದ ಮುನ್ಸೂಚನೆ ಎನ್ನಲಾಗುತ್ತದೆ. ಈ ಬಾರಿ ಜೂನ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಎಲ್ ನಿನೋ ಪ್ರಭಾವ ಶೇಕಡಾ 80ರಷ್ಟು ತೀವ್ರವಾಗಿರಲಿದ್ದು, ಹಗಲು ಮತ್ತು ರಾತ್ರಿ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರಲಿದೆ. ಪರಿಣಾಮವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಅಂದಾಜಿಸಲಾಗಿದೆ. ದೇಶಕ್ಕೆಲ್ಲ ಅನ್ನ ನೀಡುವ ದಕ್ಷಿಣ ಭಾರತದ ಕೃಷಿ ಭೂಮಿ ಈ ಬಾರಿ ಒಣಗುವ ಲಕ್ಷಣಗಳು ಕಾಣಿಸುತ್ತಿವೆ.

ಕೃಷಿ ಬಿಕ್ಕಟ್ಟು ದೇಶಕ್ಕೆ ಇಕ್ಕಟ್ಟು

ಭಾರತದ ಒಟ್ಟು ಜಿಡಿಪಿಯಲ್ಲಿ ಕೃಷಿ ರಂಗದ ಪಾಲು ಇಂದಿಗೂ ಶೇ.15 ರಷ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಮುಂಗಾರು ಕೈಕೊಟ್ಟರೆ ಅದರ ನೇರ ಏಟು ಗ್ರಾಮೀಣ ಆರ್ಥಿಕತೆಗೆ ಬೀಳುತ್ತದೆ. ಪ್ರಸ್ತುತ ಜಾಗತಿಕ ರಾಜಕೀಯ ವಿದ್ಯಮಾನಗಳೂ ಭಾರತದ ಆರ್ಥಿಕತೆಗೆ ಪೂರಕವಾಗಿಲ್ಲ. ಕೊಲ್ಲಿ ಯುದ್ಧದ ಪರಿಣಾಮ ಕಚ್ಚಾತೈಲ, ರಸಗೊಬ್ಬರ ಮತ್ತು ಇತರ ಪೆಟ್ರೋಲಿಯಂ ಉಪ ಉತ್ಪನ್ನಗಳ ಬೆಲೆ ಗಗನಕ್ಕೇರಿದೆ. ದೇಶದ ಜನಸಾಮಾನ್ಯರು ಹಣದುಬ್ಬರ ಮತ್ತು ವಿಪರೀತ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಇದರ ಜೊತೆಗೆ ಈಗ ಮುಂಗಾರು ಕೊರತೆಯೂ ಸೇರಿದರೆ, ಕೃಷಿ ಉತ್ಪಾದನೆ ಕುಂಠಿತಗೊಂಡು ಆಹಾರ ಧಾನ್ಯಗಳು ಸೇರಿದಂತೆ ಜೀವನಾವಶ್ಯಕ ಪದಾರ್ಥಗಳ ಬೆಲೆ ಇನ್ನಷ್ಟು ದುಬಾರಿಯಾಗಲಿದೆ. ಕೃಷಿ ವಲಯ ಬಿಕ್ಕಟ್ಟಿನ ಸುಳಿಗೆ ಸಿಲುಕಿದರೆ ದೇಶದ ಒಟ್ಟಾರೆ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುವುದು ಖಚಿತ.

ಪ್ರಸ್ತುತ ರಾಜ್ಯದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದಿದೆ. ಸಚಿವ ಸಂಪುಟ ರಚನೆಯ ಸಂದರ್ಭದಲ್ಲಿ ಸಂಪದ್ಭರಿತ ಹಾಗೂ ಪ್ರಭಾವಿ ಖಾತೆಗಳಿಗಾಗಿ ಭಾರೀ ಪೈಪೋಟಿ ನಡೆದಿದೆಯೇ ವಿನಾ, ರೈತರ ಬದುಕು ಬವಣೆಗಳಿಗೆ ಸಂಬಂಧಿಸಿದ ಕೃಷಿ ಸಚಿವ ಖಾತೆಗಾಗಿ ಯಾವ ಮಂತ್ರಿಯಿಂದಲೂ ಬೇಡಿಕೆ ಬಂದಿಲ್ಲ. ರಾಜ್ಯದಲ್ಲಿ ಈ ಬಾರಿ ಮುಂಗಾರು ಪೂರ್ವ ಮಳೆ ಕೆಲವು ಭಾಗಗಳಲ್ಲಿ ಚೆನ್ನಾಗಿ ಆಗಿರುವುದರಿಂದ ರೈತರು ಭೂಮಿ ಹಸನುಗೊಳಿಸಿ ಬಿತ್ತನೆಗೆ ಸಜ್ಜಾಗಿದ್ದಾರೆ. ಎಲ್ಲೆಡೆ

ಬಿತ್ತನೆ ಬೀಜಗಳಿಗೆ ಭಾರೀ ಬೇಡಿಕೆ ಕೇಳಿಬರುತ್ತಿದೆ. ದುರದೃಷ್ಟವಶಾತ್, ಈ ಬೇಡಿಕೆಯನ್ನು ಸಕಾಲದಲ್ಲಿ ಪೂರೈಸಲು ನಮ್ಮ ಕೃಷಿ ಇಲಾಖೆ ಯಾವುದೇ ಪೂರ್ವ ಸಿದ್ಧತೆ ಮಾಡಿಕೊಂಡಿಲ್ಲ. ಇದು ಹೊಸದೇನಲ್ಲ; ಕಳೆದ ಐದಾರು ವರ್ಷಗಳಿಂದ ಹಾವೇರಿ ಸೇರಿದಂತೆ ರಾಜ್ಯದ ವಿವಿಧೆಡೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಗುತ್ತಿರುವ ಬಗ್ಗೆ ರೈತರಿಂದ ದೂರುಗಳು ಬರುತ್ತಿದ್ದರೂ ಅದು ಅರಣ್ಯ ರೋದನವಾಗಿದೆ.

ಅನಗತ್ಯ ಜಲ ಪೋಲು

ನಮ್ಮ ಇಂದಿನ ಜಲ ಬಿಕ್ಕಟ್ಟಿಗೆ ಕೇವಲ ಪ್ರಕೃತಿಯನ್ನು ದೂಷಿಸಿದರೆ ಸಾಲದು, ನಮ್ಮ ತಪ್ಪುಗಳೂ ಅಷ್ಟೇ ದೊಡ್ಡದಾಗಿವೆ. ಮೇಲ್ಮೈ ಜಲಮೂಲಗಳಾದ ನದಿ ಮತ್ತು ಕೆರೆಗಳು ಒಣಗುತ್ತಿದ್ದಂತೆ ನಾವು ಭೂಮಿಯ ಆಳಕ್ಕೆ ಕೈಹಾಕುತ್ತಿದ್ದೇವೆ. ಆದರೆ, ಹಳ್ಳಿಗಳಲ್ಲೂ, ನಗರಗಳಲ್ಲೂ ಮಳೆ ನೀರು ಒಂದಿಷ್ಟೂ ನೆಲದ ಒಡಲು ಸೇರದ ಕಾರಣ ಅಂತರ್ಜಲ ಮಟ್ಟವು ದಿನದಿಂದ ದಿನಕ್ಕೆ ಗಣನೀಯವಾಗಿ ಕುಸಿಯುತ್ತಿದೆ. ಬೋರ್‌ವೆಲ್‌ಗಳು ಒಣಗುತ್ತಿವೆ. ಕುಡಿಯುವ ನೀರಿಗಾಗಿ ಹಾಹಾಕಾರ ಸೃಷ್ಟಿಯಾಗುತ್ತಿದೆ. ಒಂದು ಕಡೆ ಅಂತರ್ಜಲವನ್ನು ಅತಿಯಾಗಿ ಲೂಟಿ ಮಾಡಲಾಗುತ್ತಿದೆ. ಮತ್ತೊಂದು ಕಡೆ ಅದನ್ನು ಮರುಪೂರಣ ಮಾಡುವ ಅಥವಾ ನೀರಿಂಗಿಸುವ ಯಾವುದೇ ಪ್ರಾಮಾಣಿಕ ಪ್ರಯತ್ನಗಳು ಸಾರ್ವಜನಿಕ ಮತ್ತು ಆಡಳಿತಾತ್ಮಕ ಮಟ್ಟದಲ್ಲಿ ನಡೆಯುತ್ತಿಲ್ಲ.

ವರ್ಷದಿಂದ ವರ್ಷಕ್ಕೆ ಹೆಚ್ಚುವರಿ ಟಿಎಂಸಿ ನೀರು ಬೇಡುವ ಬೆಂಗಳೂರಿನಂತಹ ಪ್ರಮುಖ ನಗರಗಳು ಇಂದು ಕಾಂಕ್ರೀಟ್ ಕಾಡುಗಳಾಗಿ ಮಾರ್ಪಟ್ಟಿವೆ. ಸಣ್ಣಪುಟ್ಟ ಮಳೆಯಲ್ಲೂ ಬೆಂಗಳೂರಿನ ರಸ್ತೆಗಳು ಮುಳುಗುತ್ತಿವೆ ಹೊರತು ಹನಿ ನೀರು ಕೂಡ ನೆಲದಾಳವನ್ನು ಸೇರುತ್ತಿಲ್ಲ. ಮಲೆನಾಡು ಹಾಸನ ಜಿಲ್ಲೆಯಲ್ಲಿ ಬೀಳುವಷ್ಟೇ ಪ್ರಮಾಣದ ಮಳೆ ಬೆಂಗಳೂರಿನಲ್ಲಿ ಬೀಳುತ್ತದೆ. ಆದರೆ ನಗರದ ಇಂಚಿಂಚು ಭೂಮಿಯನ್ನೂ ಕಾಂಕ್ರೀಟ್‌ನಿಂದ ಮುಚ್ಚಿರುವುದರಿಂದ ಮಳೆ ನೀರು ನೆಲದ ಒಡಲು ಸೇರಲು ದಾರಿಯೇ ಇಲ್ಲದಂತಾಗಿದೆ. ನಗರ ಪ್ರದೇಶಗಳಲ್ಲಿ ಬೀಳುವ ಪ್ರತಿಯೊಂದು ಹನಿಯೂ ಚರಂಡಿಗಳಲ್ಲಿ ಹರಿದು ಪೋಲಾಗುತ್ತಿದೆ. ಮಳೆ ನೀರನ್ನು ಭೂಮಿಯೊಳಗೆ ಇಂಗಿಸದೆ ಚರಂಡಿಗಳಲ್ಲಿ ಹರಿ ಬಿಡುವ ನಾವು ಮತ್ತದೇ ಮಳೆಗಾಗಿ ಕಾತರಿಸುತ್ತೇವೆ. ಪ್ರಾರ್ಥಿಸುತ್ತೇವೆ.

ಇಸ್ರೇಲ್ ಜಲ ನಿರ್ವಹಣೆ ಮಾದರಿ

ಅರಬ್ ಜಗತ್ತಿನ 60ಕ್ಕೂ ಹೆಚ್ಚು ಶತ್ರು ದೇಶಗಳನ್ನು ಎದುರಿಸಿ ನಿಂತ ಇಸ್ರೇಲ್ ಭಾರತದಲ್ಲಿ ಹಲವರಿಗೆ ಪ್ರಿಯ ದೇಶ. ಆದರೆ ನಿಜವಾಗಿಯೂ ನೀರಿನ ಸದ್ಬಳಕೆ ಮತ್ತು ಕಟ್ಟುನಿಟ್ಟಾದ ಜಲ ನಿರ್ವಹಣೆಯ ವಿಷಯದಲ್ಲಿ ನಾವು ಇಸ್ರೇಲ್‌ನಂತಹ ದೇಶವನ್ನು ಅನುಸರಿಸಬೇಕಾಗಿದೆ. ತೀರಾ ಕಡಿಮೆ ಮಳೆಯಾಗುವ ಮರಳುಗಾಡಿನ ಪರಿಸರದಲ್ಲೂ ಇಸ್ರೇಲ್ ಅತ್ಯಾಧುನಿಕ ತಂತ್ರಜ್ಞಾನ, ನೀರಿನ ಮರುಬಳಕೆ ಮತ್ತು ಹನಿ ನೀರಾವರಿ ಪದ್ಧತಿಯ ಮೂಲಕ ನೀರಿನ ಸ್ವಾವಲಂಬನೆ ಸಾಧಿಸಿದೆ. ನಮಗೆ ವಾರ್ಷಿಕ ನೂರಾರು ಟಿಎಂಸಿ ನೀರು ಸಿಕ್ಕರೂ ಅದನ್ನು ನಿರ್ವಹಿಸಲಾಗದೆ ಪೋಲು ಮಾಡುತ್ತಿದ್ದೇವೆ. ಇಸ್ರೇಲ್‌ನ ಜಲ ಶಿಸ್ತನ್ನು ನಾವು ಅಳವಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಭೀಕರವಾಗಲಿದೆ.

ನೀರು ಕೇವಲ ಒಂದು ಸಂಪನ್ಮೂಲವಲ್ಲ, ಅದು ಮಾನವನ ಅಸ್ತಿತ್ವದ ಮೂಲಾಧಾರ. ಪ್ರಕೃತಿಯು ನಮಗೆ 'ಎಲ್ ನಿನೋ' ಮತ್ತು ಮುಂಗಾರು ಕೊರತೆಯ ರೂಪದಲ್ಲಿ ಒಂದು ಸ್ಪಷ್ಟ ಎಚ್ಚರಿಕೆಯನ್ನು ನೀಡಿದೆ. ಈ ಸವಾಲನ್ನು ನಾವು ನಿರ್ಲಕ್ಷಿಸಿದರೆ, ಅದರ ಬೆಲೆಯನ್ನು ನಮ್ಮ ಇಡೀ ದೇಶ ಮತ್ತು ರೈತಾಪಿ ವರ್ಗ ತೆರಬೇಕಾಗುತ್ತದೆ. ಸರಕಾರಗಳು ಉಪದೇಶಗಳನ್ನು ಬದಿಗಿಟ್ಟು, ಮಣ್ಣಿನ ಮಕ್ಕಳ ಮತ್ತು ನಾಗರಿಕರ ಜಲ ಭದ್ರತೆಗೆ ತಕ್ಷಣದ ಕಾರ್ಯ ಯೋಜನೆಗಳನ್ನು ರೂಪಿಸಬೇಕಾಗಿದೆ. ನಾಗರಿಕರೂ ಸಹ ಹನಿ ಹನಿ ನೀರನ್ನೂ ಮಿತವ್ಯಯದಿಂದ ಬಳಸಿ, ಮಳೆ ನೀರನ್ನು ಮಣ್ಣಿನ ಒಡಲಿಗೆ ಇಂಗಿಸುವ ಸಂಕಲ್ಪ ಮಾಡಬೇಕಿದೆ. ಪ್ರಕೃತಿಯ ಮುನಿಸನ್ನು ಪ್ರಕೃತಿ ಮೇಲಿನ ಒಲವಿನಿಂದಲಷ್ಟೇ ಎದುರಿಸಲು ಸಾಧ್ಯ.

ಕಾವ್ಯಪ್ರತಿಮೆಗಳ ಬಳಕೆ ಮತ್ತು ದುರ್ಬಳಕೆ

ರೂಪಕ ಲೋಕ
ಟಿ.ಎನ್ ವಾಸುದೇವಮೂರ್ತಿ
vveditoped@gmail.com

ಸಾಮಾನ್ಯ ಸುದ್ದಿ ಮಾಹಿತಿಗೆ ಕಾವ್ಯ-ಕಲೆಗಳ ಲೇಪನ ಸಿಕ್ಕಾಗ ಅದಕ್ಕೆ ಒಂದು ವಿಶೇಷವಾದ ಶಕ್ತಿ ಲಭಿಸುತ್ತದೆ. ಪ್ರತಿಮೆ-ರೂಪಕಗಳಿಗೆ ಅಂಥದೊಂದು ಅಂತಃಸತ್ವವಿದೆ. ಏಕೆಂದರೆ ಒಂದು ವಸ್ತು-ವಿಷಯದ ಹತ್ತು ಹಲವು ಅರ್ಥಗಳನ್ನು ಏಕತ್ರ ಹಿಡಿದಿಡಬಲ್ಲ ಸಾಮರ್ಥ್ಯ ಕಾವ್ಯ ಪ್ರತಿಮೆಗಳಿಗೆ ಇರುತ್ತವೆ. ಮಾತಿಗೆ ಒಂದು ಅರ್ಥವಿರುತ್ತದೆ ಎಂಬುದು ಸರಿ, ಅದು ಬಿಟ್ಟು ಒಂದಲ್ಲದೇ ಹಲವು ಅರ್ಥಗಳಿವೆ ಎಂದಾಗ ಮಾತುಕತೆಯ ಸಂವಹನದಲ್ಲಿ ಗೊಂದಲ ಮೂಡುವುದಿಲ್ಲವೇ ಎಂಬ ಪ್ರಶ್ನೆ ಏಳದಿರದು. ಮಾತಿಗಿರುವುದು ಒಂದೇ ಅರ್ಥವಾದರೂ ಆ ಮಾತನ್ನು ಗ್ರಹಿಸುವ ವ್ಯಕ್ತಿಗಳು ಹಲವರಿರುವ ಕಾರಣ ಅವರಿಂದ ಹಲವು ಅರ್ಥಗಳು ನಿಷ್ಪನ್ನವಾಗುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಿನ್ನೆಲೆ, ಅನುಭವ, ಪ್ರೌಢಿಮೆ, ಪ್ರಭಾವ, ತಿಳಿವಳಿಕೆ, ಸಂಸ್ಕಾರಗಳಿಗೆ ಅನುಗುಣವಾಗಿ ಒಂದು ಮಾತಿನಿಂದ ವಿವಿಧ ಅರ್ಥಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಅಂತಹ ಸಮಸ್ತ ಅರ್ಥಚ್ಛಾಯೆಗಳನ್ನೂ ಒಳಗೊಳ್ಳಬಲ್ಲ ಸಾಮರ್ಥ್ಯ ಸಾಮಾನ್ಯ ಆಡುಮಾತಿಗಿರುವುದಿಲ್ಲ, ಕಾವ್ಯಪ್ರತಿಮೆಗಳಿಗೆ ಆ ಸಮಸ್ತ ಅರ್ಥಗಳನ್ನೂ ಧರಿಸಬಲ್ಲ ಶಕ್ತಿ ಇರುತ್ತದೆ.

ಎಷ್ಟೋ ಸಲ ಕಾವ್ಯಪ್ರತಿಮೆಗಳು ಶಬ್ದವನ್ನು ಅರ್ಥದಿಂದ, ಯಥಾರ್ಥದಿಂದ, ದೂರಕ್ಕೆ ಸೆಳೆದೊಯ್ಯುವ ಅಪಾಯವುಂಟು. ಯಥಾರ್ಥವನ್ನು ವಿಪರೀತಾರ್ಥವನ್ನಾಗಿ ಪರಿವರ್ತಿಸುವುದೂ ಉಂಟು. ಖ್ಯಾತ ಅಮೆರಿಕನ್ ತತ್ವಜ್ಞಾನಿ ಮಾರ್ಷಲ್ ಮ್ಯಾಕ್ ಲುಹಾನ್ ಆಧುನಿಕ ಮಾಧ್ಯಮಗಳಲ್ಲಿ ಕಾವ್ಯಪ್ರತಿಮೆ ಎಂಬುದು ಬರ್ಗರ್ ತಿನಿಸಿನ ಒಳಗೆ ಹುದುಗಿಸಿಟ್ಟಿರುವ ಮಾಂಸದ ತುಣುಕಿನಂತೆ. ಈ ಮಾಂಸದ ತುಣುಕು ಮನುಷ್ಯ ವಿವೇಕವೆಂಬ ಕಾವಲು ನಾಯಿಯ ಗಮನವನ್ನು ಬೇರೆಡೆಗೆ ಸೆಳೆಯಬಲ್ಲದು ಎಂದು ಎಚ್ಚರಿಸುತ್ತಾನೆ.

ಆದರೆ ಮಾರ್ಷಲ್ ಮ್ಯಾಕ್ ಲುಹಾನ್ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಕುವೆಂಪು ಆಲೋಚಿಸುತ್ತಾರೆ. ಅವರು ಕಾವ್ಯಪ್ರತಿಮೆಗಳನ್ನು ವಿಶೇಷವಾಗಿ ವೈಭವೀಕರಿಸುತ್ತಾರೆ. ಬದುಕಿನ ಪರಮ ಸತ್ಯವನ್ನು ಕಾವ್ಯಪ್ರತಿಮೆಗಳು ಪ್ರತೀತಗೊಳಿಸಬಲ್ಲವು ಎನ್ನುತ್ತಾರೆ. ಕುವೆಂಪು ಪ್ರಕಾರ ಕಾವ್ಯಪ್ರತಿಮೆ ಎಂಬುದು ಒಂದು ಘಟನೆಯ ವರದಿಯಲ್ಲ, ಆ ಘಟನೆ ವ್ಯಕ್ತಿಯ ಮನಸ್ಸಿನೊಳಗೆ ಉಂಟು ಮಾಡುವ ಅನುಭವದ ಮರುಸೃಷ್ಟಿಯಾಗಿದೆ. ಹಾಗೆ ಮರುಸೃಷ್ಟಿಸುವವರು ಸಮಸ್ತ ಮಾನವಕುಲವನ್ನೇ ಪ್ರತಿನಿಧಿಸಬಲ್ಲ ವ್ಯಕ್ತಿಯಾದಾಗ, ಋಷಿ ಸದೃಶನಾದಾಗ, ಅವರ ಕಾವ್ಯಪ್ರತಿಮೆ ಬದುಕಿನ ಶಾಶ್ವತ ಸತ್ಯವನ್ನು ಒಳಗೊಳ್ಳಬಲ್ಲದು ಎನ್ನುತ್ತಾರೆ. ಇದಕ್ಕೆ ಕುವೆಂಪು ಉಪನಿಷತ್ತಿನ ಸಾಲುಗಳನ್ನು ಉದಾಹರಿಸುತ್ತಾರೆ (ನಾನೃಷಿ ಕುರುತೇ ಕಾವ್ಯಮ್ - ಋಷಿಯಲ್ಲದವನು ಕಾವ್ಯವನ್ನು ಸೃಷ್ಟಿಸಲಾರ). ಕಾವ್ಯಪ್ರತಿಮೆಗಳು ಹೇಗೆ ಮನುಷ್ಯ ಚಿತ್ತವನ್ನು ಬದುಕಿನ ಪರಮ ಸತ್ಯದ ಸಮೀಪಕ್ಕೆ ಕರೆದೊಯ್ಯಬಲ್ಲದು ಎಂಬುದನ್ನು ಹಲವು ನಿದರ್ಶನಗಳೊಂದಿಗೆ ವಿವರಿಸುತ್ತಾರೆ.

ಕವಿಗಳು ಸುಳ್ಳು ಹೇಳುವ ಕಾರಣ ಅವರನ್ನು ಆದರ್ಶ ಗಣರಾಜ್ಯದಿಂದ ಉಚ್ಚಾಟಿಸಲಾಗುವುದು ಎಂದು ಪ್ಲೇಟೋ ನುಡಿದಿದ್ದ. ಕಾವ್ಯಪ್ರತಿಮೆಗಳು ಸಮಾಜಕ್ಕೆ ಸತ್ಯವನ್ನು ದರ್ಶಿಸುತ್ತವೆಯೋ ಅಥವಾ ಸಮಾಜವು ಸತ್ಯದಿಂದ ವಿಮುಖವಾಗುವಂತೆ ಮಾಡುತ್ತದೆಯೋ ಎಂಬ ಚರ್ಚೆ ಇನ್ನೂ ಬಗೆಹರಿದಿಲ್ಲ. ಆದರೆ ಸಮಾಜದಲ್ಲಿ ಕಾವ್ಯಪ್ರತಿಮೆಗಳ ಸದ್ಬಳಕೆ ಮತ್ತು ದುರ್ಬಳಕೆಗಳು ಮಾತ್ರ ವ್ಯಾಪಕವಾಗಿ ನಡೆದಿರುವುದನ್ನು ನಾವು ಕಾಣುತ್ತೇವೆ. ಯಾವುದು ಸದ್ಬಳಕೆ ಮತ್ತು ಯಾವುದು ದುರ್ಬಳಕೆ? ಒಂದು ಕಾವ್ಯ-ಕಲಾ ಪ್ರತಿಮೆಯನ್ನು ಪ್ರಯೋಗಿಸಿದಾಗ ಅದು ಸದ್ಬಳಕೆಯಾಗುತ್ತದೋ ಅಥವಾ ದುರ್ಬಳಕೆ ಎನಿಸುತ್ತದೋ ಎಂದು ನಿರ್ಧರಿಸುವವರು ಯಾರು?

ಇದಕ್ಕೆ ಉತ್ತರ ತುಂಬ ಸರಳ. ಯಾವ ಕಾವ್ಯ-ಕಲಾ ಪ್ರತಿಮೆಗಳು ಮಾನವೀಯವಾದುದೋ, ಮಾನವರ ಸಮಷ್ಟಿ ಪ್ರಜ್ಞೆಯನ್ನು ಪ್ರತಿನಿಧಿಸುವುದೋ, ಬದುಕಿನ ಶಾಶ್ವತ ಸತ್ಯವನ್ನು ಪ್ರತೀತಗೊಳಿಸುವುದೋ ಅದು ಸಾರ್ಥಕ ಕಾವ್ಯ ಪ್ರತಿಮೆಯಾಗುತ್ತದೆ. ಒಂದು ಜನಾಂಗದ ವಿವೇಕ, ವಿವೇಚನೆಗಳ ಅವಿಭಾಜ್ಯವಾದ ಅಂಗವಾಗುತ್ತದೆ. ಆ ಮೂಲಕ ಅದು ಕಾವ್ಯ ಪ್ರತಿಮೆಯ ಸದ್ಬಳಕೆ ಎನಿಸಿಕೊಳ್ಳುತ್ತದೆ. ಶತಶತಮಾನಗಳಿಂದಲೂ ಉಳಿದುಕೊಂಡು ಬಂದಿರುವ ನಮ್ಮ ಅಭಿಜಾತ ಕಾವ್ಯಪರಂಪರೆಗಳು, ಜಾನಪದ ಕಾವ್ಯ, ಗಾದೆ, ತ್ರಿಪದಿಗಳು ಇದಕ್ಕೆ ನಿದರ್ಶನವಾಗಿದೆ. ಮಾನವೀಯ ಸಂವೇದನೆಯನ್ನು, ಮಾನವರ ಸಮಷ್ಟಿ ಪ್ರಜ್ಞೆಯನ್ನು ಪ್ರತಿನಿಧಿಸದ ಪ್ರತಿಮಾ ಪ್ರಯೋಗಗಳು ಕಾವ್ಯಪ್ರತಿಮೆಯ ದುರ್ಬಳಕೆಯಾಗಿದೆ. ಇಂತಹ ಕಾವ್ಯಪ್ರತಿಮೆಗಳು ಮನುಷ್ಯ ಕುಲಕ್ಕೆ ಹಾನಿಯನ್ನೇನೂ ಮಾಡುವುದಿಲ್ಲ, ಆದರೆ ಮನುಷ್ಯಕುಲವೇ ಅದನ್ನು ತಿರಸ್ಕರಿಸುತ್ತದೆ. ಅವು ಅಲ್ಪಾಯುಷಿಯಾಗಿರುತ್ತವೆ, ಬಹುಬೇಗನೆ ಸಮುದಾಯದ ನೆನಪಿನಿಂದ ವಿಸ್ಮೃತಿಗೆ ಸರಿದುಬಿಡುತ್ತದೆ.

ಸದ್ಯಕ್ಕೆ ಆಡಳಿತ ವಿರೋಧಿ ಅಲೆ ಎಂದು ಬಿಂಬಿಸಿಕೊಳ್ಳುತ್ತಿರುವ ಜಿರಳೆ ಪಾರ್ಟಿಯ ಸುದ್ದಿ ಮತ್ತು ಡಿಕೆಶಿಗೆ ಶಿವನ ವೇಷಧಾರಣೆ ಮಾಡಿದ ವಿಶ್ವವಾಣಿಯ ಮುಖಪುಟ ಸುದ್ದಿ ಈ ಎರಡೂ ಪ್ರತಿಮೆಗಳು ಅತಿ ಹೆಚ್ಚು ಸದ್ದು ಮಾಡುತ್ತಿದೆ. ಜಿರಳೆ ಮಲಿನವಾದ ಗಟಾರದಲ್ಲಿ ಬೆಳೆಯುವ ಒಂದು ಕೀಟವಾಗಿದೆ. ಆಡಳಿತ ಪಕ್ಷವು ಭ್ರಷ್ಟಾಚಾರ, ಕೋಮುವಾದ ಎಂಬ ಗಟಾರವನ್ನು ಸೃಷ್ಟಿಸಿದ್ದು ನಾವು ಈ ಗಟಾರದಿಂದ ಹುಟ್ಟಿ ಬಂದಿರುವ ಜಿರಳೆಗಳಾಗಿದ್ದೇವೆ ಎಂಬುದು ಸದರಿ ಜಿರಳೆ ಜನತಾ ಪಾರ್ಟಿಯ ಹೋರಾಟಗಾರರ ಘೋಷಣೆಯಾಗಿದೆ.

ಆಡಳಿತ ಪಕ್ಷದ ವಿರುದ್ಧದ ಬಂಡಾಯವಾಗಿ ಹುಟ್ಟಿಕೊಂಡಿರುವ ಈ ಚಳವಳಿ ರಾಜಕೀಯ ಪ್ರೇರಿತವಾದುದೇ ಅಥವಾ ಜನಸಮುದಾಯದಿಂದಲೇ ಹುಟ್ಟಿಕೊಂಡ ಹೋರಾಟವೇ ಎಂಬ ಚರ್ಚೆ ಒತ್ತಟ್ಟಿಗಿರಲಿ. ಆದರೆ ಮನುಷ್ಯರನ್ನು ಸೊಳ್ಳೆ, ತಿಗಣೆ, ಜಿರಳೆಯಂತಹ ಕೀಟಗಳ ನೆಲೆಗೆ ಇಳಿಸುವ ಪ್ರತಿಮೆಗಳು ಮನುಷ್ಯ ಜಾತಿಯ ಸಮಷ್ಟಿ ಪ್ರಜ್ಞೆಯನ್ನು ಪ್ರತಿನಿಧಿಸಬಲ್ಲುದೇ? ಕುವೆಂಪು ಪ್ರತಿಪಾದಿಸುವಂತೆ ಮನುಷ್ಯ ಸಂವೇದನೆಯನ್ನು, ಬದುಕಿನ ಶಾಶ್ವತ ಸತ್ಯವನ್ನು, ಪ್ರತೀತಗೊಳಿಸಬಲ್ಲುದೇ ಎಂಬ ಪ್ರಶ್ನೆಗೆ ಇಲ್ಲವೆಂದೇ ಉತ್ತರಿಸಬೇಕಾಗುತ್ತದೆ.

ಪ್ರತಿಯೊಬ್ಬ ಮನುಷ್ಯರ ಅಂತರ್ಯದಲ್ಲೂ ದಿವ್ಯತ್ವ ನೆಲೆಸಿರುತ್ತದೆ ಎಂಬುದು ಸನಾತನ ಭಾರತೀಯ ವಿವೇಕವಾಗಿದೆ. ಮನುಷ್ಯ ವಿಕಾಸ ಮೃಣ್ಮಯ ನೆಲೆಯಿಂದ ಚಿನ್ಮಯ ನೆಲೆಗೇರುವ ಮಾರ್ಗದ್ದಾಗಿದೆ. ಆದರೆ ಮನುಷ್ಯ ಜೀವಿಯನ್ನು ರೋಗ ರುಜಿನಗಳನ್ನು ಹರಡುವ ಜಿರಳೆಯಂತಹ ಕೀಟದ ನೆಲೆಗಿಳಿಸುವ ಪ್ರತಿಮೆ ಮನುಷ್ಯರ ಸಮಷ್ಟಿ ಪ್ರಜ್ಞೆಯೊಳಗೆ ಜೀವಂತವಾಗಿರುವ ಸನಾತನ ವಿವೇಕವನ್ನೇ ತಿರಸ್ಕರಿಸುವಂತಹ ಪ್ರತಿಮೆಯಾಗಿದೆ. ಇಂತಹ ಪ್ರತಿಮೆಗಳು ಜನಮಾನಸದಲ್ಲಿ ಬಹುಕಾಲ ಉಳಿಯಲಾರವು.

ನಮ್ಮ ಕಾವ್ಯ ಪ್ರಪಂಚದಲ್ಲಿ ಸೊಳ್ಳೆ, ತಿಗಣೆ, ಜಿರಳೆಯಂತಹ ಕೀಟಗಳನ್ನು ಕಾವ್ಯಪ್ರತಿಮೆಯನ್ನಾಗಿ ಬಳಸಿರುವ ನಿದರ್ಶನ ಇಲ್ಲವೆಂದೇನೂ ಇಲ್ಲ. ಮಧುರಚೆನ್ನರು ತಮ್ಮ ಕಾವ್ಯದಲ್ಲಿ ಸೊಳ್ಳೆ, ತಿಗಣೆಗಳನ್ನು ಕಾವ್ಯಪ್ರತಿಮೆಯನ್ನಾಗಿ ಬಳಸಿರುವರು. ಅಜ್ಞಾನದ ನಿದ್ರೆಯಲ್ಲಿದ್ದ ನನ್ನನ್ನು ತಿಗಣೆ ಕಚ್ಚಿ ಎಬ್ಬಿಸಿತು. ತಿಗಣೆಯೇ ನನ್ನ ಪಾಲಿನ ಗುರು, ನಶ್ವರ ಪ್ರಪಂಚದ ಗದ್ದಲದಲ್ಲಿ ಮುಳುಗಿದ್ದ ನನ್ನನ್ನು ಸೊಳ್ಳೆಯ ನಾದ ಎಚ್ಚರಿಸಿತು, ಆದ್ದರಿಂದ ಸೊಳ್ಳೆಯೇ ನನ್ನ ಗುರು ಎಂಬರ್ಥದ ಸಾಲುಗಳನ್ನು ಅವರು ಬರೆದಿದ್ದಾರೆ (ಜಗದೊಳುಂಡು ಜಗದೊಳುಟ್ಟು । ಜಗದೊಳಿದ್ದು ಜಗವರಿಯದೆ । ಮಿಗಿಲು ನಿದ್ದೆಗೆಯ್ಯುತಿರಲು । ತಗಣಿನಾಥನೆಚ್ಚರಿಸಿದ ॥ ಸುಳ್ಳು ಸತ್ಯವೆಂಬುದನ್ನು । ಬಳ್ಳುಮಾಡಿ ತೋರದಂತೆ । ಒಳ್ಳೆ ಮಬ್ಬುಗತ್ತಲಲ್ಲಿ । ಬಳ್ಳಿಯಾಗಿ ಬೆಳೆಯುತಿರಲು । ಕೊಳ್ಳದಲ್ಲಿ ಹರಣ ಹಾಕಿ । ಸೊಳ್ಳೆದಾಸನೆಬ್ಬಿಸಿದನು ॥ - ಹೂಂ, ನನ್ನನಲ್ಲ, 1933).

ನಾವು ಬಳಸುವ ಪ್ರತಿಮೆಗಳು ಮನುಷ್ಯ ವಿಕಾಸದ ಸೂಚಿಯಾದಾಗ, ಮನುಷ್ಯ ಸ್ವಭಾವದ ಮೂಲ ಸ್ವರೂಪವನ್ನು ಪರಿಚಯಿಸಿದಾಗ ಅಂತಹ ಪ್ರತಿಮೆಗಳು ಸಾರ್ಥಕವಾಗುತ್ತವೆ. ಮನುಷ್ಯರನ್ನು ಜಿರಳೆಯ ಮಟ್ಟಕ್ಕೆ ಇಳಿಸುವುದು ಮನುಷ್ಯ ವಿಕಾಸದ ಸೂಚಕವಲ್ಲ, ಅದೊಂದು ಅಮಾನವೀಯ ಪ್ರತಿಮೆಯಾಗಿದೆ, ಅಂತಹ ಪ್ರತಿಮೆಗಳು ಜಿರಳೆಯಂತೆ ರೋಗ ರುಜಿನಗಳನ್ನು ಹರಡುವುದೇ ಮನುಷ್ಯ ಸ್ವಭಾವವಾಗಿದೆ ಎಂಬ ತಪ್ಪಾದ ಸಂದೇಶವನ್ನು ನೀಡುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ, ಒಂದು ನಿರ್ದಿಷ್ಟ ಪಕ್ಷ ಅಧಿಕಾರ ವಹಿಸಿಕೊಳ್ಳುವ ಮುನ್ನ ದೇಶದಲ್ಲಿ ಗಟಾರಗಳು ಇರಲಿಲ್ಲವೇ, ಗಟಾರದೊಳಗೆ ಜಿರಳೆಗಳ ಉತ್ಪತ್ತಿ ಆಗುತ್ತಿರಲಿಲ್ಲವೇ ಎಂಬ ಪ್ರಶ್ನೆಗೂ ಇಂತಹ ಪ್ರತಿಮೆಗಳಲ್ಲಿ ಉತ್ತರ ಸಿಗುವುದಿಲ್ಲ. ಜಿರಳೆ ಪಕ್ಷದ ಚಳವಳಿ

ಸಫಲವೋ, ವಿಫಲವೋ ಎಂಬ ಚರ್ಚೆಗೆ ಇದು ಸ್ಥಳವಲ್ಲ. ಆದರೆ ಯಾವುದೇ ಚಳವಳಿಗೆ ಅಂತಃಶಕ್ತಿ ನೀಡುವ ಕಾವ್ಯಪ್ರತಿಮೆಯ ಬಳಕೆಯಲ್ಲಿ ಇದೊಂದು ವಿಫಲ ಪ್ರತಿಮೆಯಾಗಿದೆ.

ನಲವತ್ತರ ದಶಕದಲ್ಲಿ ಕುವೆಂಪು ಗೊಬ್ಬರ ಪದ್ಯ ಬರೆದಾಗಲೂ, ಹಾಗೆಯೇ ಎಪ್ಪತ್ತರ ದಶಕದಲ್ಲಿ ಸಿದ್ದಲಿಂಗಯ್ಯನವರು ಇಕ್ರಲಾ ವದೀರ್ಲಾ, ಈ ಸೂಳೆ ಮಕ್ಳ ಮೂಳೆ ಮುರೀರ್ಲಾ ಎಂಬ ಸಾಲುಗಳನ್ನು ರಚಿಸಿದಾಗಲೂ ನಾಡಿನಲ್ಲಿ ಇಂತಹುದೇ ಸಂಚಲನ ಮೂಡಿತ್ತು. ಇಂತಹ ಪ್ರಯೋಗಗಳು ಕಾವ್ಯಪ್ರಿಯರನ್ನು ಬೆಚ್ಚಿಬೀಳಿಸಿತ್ತು. ಆದರೆ ಆ ಕಾವ್ಯ ಪ್ರತಿಮೆಗಳು ಸಮಷ್ಟಿ ಪ್ರಜ್ಞೆಯ ಅಂತರ್ಯವನ್ನು ಸಮರ್ಥವಾಗಿ ಧ್ವನಿಸುತ್ತಿದ್ದುದರಿಂದ ಅವು ಎಷ್ಟೇ ಪ್ರತಿರೋಧ ಎದುರಿಸಿದರೂ ಕಾಲನ ಅಗ್ನಿ ಪರೀಕ್ಷೆಯನ್ನು ಯಶಸ್ವಿಯಾಗಿ ಹಾದು ಬಂದವು; ಕನ್ನಡಿಗರ ಸ್ಮೃತಿಯಲ್ಲಿ ಶಾಶ್ವತವಾಗಿ ಉಳಿದುಕೊಂಡವು, ನಮ್ಮ ಸಾಮಾಜಿಕ ಹೋರಾಟದ ಅಂತಃಶಕ್ತಿಯಾದವು. ಗೊಬ್ಬರವೂ ಮೇಲ್ನೋಟಕ್ಕೆ ಮಲಿನವಾಗಿ ತೋರಿದರೂ ಜಿರಳೆಯ ಮಾಲಿನ್ಯಕ್ಕೂ, ಗೊಬ್ಬರಕ್ಕೂ ವ್ಯತ್ಯಾಸವಿದೆ. ಗೊಬ್ಬರದ ವಾಸನೆಯೇ ಹೂವಿಗೂ ಸುಗಂಧ ನೀಡುವುದೆಂಬ ಧ್ವನಿಶಕ್ತಿ ಗೊಬ್ಬರ ಪದ್ಯವನ್ನು ಗೆಲ್ಲಿಸಿದೆ. ಜಿರಳೆಯ ಪ್ರತಿಮೆಯಲ್ಲಿ ಅಂತಹ ಮೆಟಮಾರ್ಫಸಿಸ್ (ರೂಪಪರಿವರ್ತನೆ) ಯಾವುದಿದೆ?

ಇನ್ನು ವಿಶ್ವವಾಣಿಯ ಮುಖಪುಟದಲ್ಲಿ ಪ್ರಕಟವಾದ ಹೊಸ ಮುಖ್ಯಮಂತ್ರಿಯ ಶಿವನ ವೇಷವೂ ಒಂದು ಕಲಾಪ್ರತಿಮೆಯೇ ಆಗಿದೆ. ಈ ಕಲಾಚಿತ್ರಣ ಹೊಸ ಮುಖ್ಯಮಂತ್ರಿಯ ಅಭಿಮಾನಿಗಳಿಗೆ ಮುದ ನೀಡಿದರೆ, ಅವರ ವಿರೋಧಿಗಳಲ್ಲಿ ಬೇಸರ ಮೂಡಿಸಿತು. ಇನ್ನು ಕಲಹಪ್ರಿಯ ಕುತ್ಸಿತ ಮನಸ್ಸಿನವರು ಇದು ಹಿಂದೂಗಳಿಗೆ ಮಾಡಿದ ಅವಮಾನ ಎಂಬ ಹೊಸ ವಿವಾದವನ್ನು ಹುಟ್ಟುಹಾಕುವ ಹುನ್ನಾರದಲ್ಲಿದ್ದರು. ಹಿಂದೂ ದೇವರಿಗೂ ಸೆಮೆಟಿಕ್ ಧರ್ಮದ ದೇವರುಗಳಿಗೂ ಅಪಾರವಾದ ವ್ಯತ್ಯಾಸವಿದೆ. ಸೆಮೆಟಿಕ್ ಧರ್ಮದ ನಂಬಿಕೆಯಂತೆ ದೇವರ ವೇಷ ಧರಿಸುವುದು ಅಪರಾಧ. ಆದರೆ ಹಿಂದೂಗಳಲ್ಲಿ ದೇವರ ವೇಷ ಧರಿಸಿದಾಗ, ದೇವರ ಹೆಸರು ಇಟ್ಟುಕೊಂಡಾಗ, ತಾನೇ ಸ್ವಯಂ ದೇವರೆಂದು ಘೋಷಿಸಿಕೊಂಡಾಗ ಅದು ದೇವರಿಗೆ ಅಪಚಾರ ಮಾಡಿದಂತೇನೂ ಆಗುವುದಿಲ್ಲ. ಅಲ್ಲದೇ ಹಿಂದೂ ದೇವರುಗಳು ಮಾನವೀಯ ಸಂವೇದನೆಯವರು; ಸಮಸ್ತ ಮಾನವೀಯ ಸ್ವಭಾವವನ್ನು ಒಳಗೊಂಡವರು. ಆದ್ದರಿಂದ ಇವರ ಹುನ್ನಾರ ಸಫಲವಾಗಲಿಲ್ಲ. ಒಟ್ಟಿನಲ್ಲಿ ಆ ಚಿತ್ರ ಹಲವು ಮನಸ್ಥಿತಿಯ ಜನಗಳ ಗಮನವನ್ನು ತನ್ನತ್ತ ಆಕರ್ಷಿಸುವ ಮಟ್ಟಿಗೇನೋ ಯಶಸ್ವಿಯಾಯಿತು, ಸರಿ. ಆದರೆ ಮಾಧ್ಯಮದಲ್ಲಿ ಒಂದು ಕಲಾರೂಪಕವಾಗಿ ಆ ಪ್ರಯೋಗ ಗೆದ್ದಿತೇ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಒಬ್ಬ ಭಾವೀ ಮುಖ್ಯಮಂತ್ರಿಯನ್ನು ರಾಮಾಯಣದ ಸುಮಂತ್ರನಿಗೋ ಅಥವಾ ಮಹಾಭಾರತದ ವಿದುರನಿಗೋ ಹೋಲಿಸಿದರೆ ಅದು ಸಾರ್ಥಕವಾಗುತ್ತದೆ, ಅಥವಾ ರಾಜನಾದರೆ ಅವನನ್ನು ಶ್ರೀರಾಮನಿಗೋ ಅಥವಾ ಜನಕ ಮಹಾರಾಜನಿಗೋ ಹೋಲಿಸಿದಾಗ ಅದು ಅರ್ಥಪೂರ್ಣವಾಗುತ್ತದೆ. ಆದರೆ ಮುಖ್ಯಮಂತ್ರಿಗಳ ಹೆಸರಿನಲ್ಲಿ ಶಿವನಿದ್ದಾನೆ ಎಂಬ ಒಂದೇ ಕಾರಣಕ್ಕೆ ಶಿವನ ವೇಷ ತೊಡಿಸಿದರೆ ಏನರ್ಥ? ಶಿವ ರಾಜನಲ್ಲ, ಅವನಿಗೆ ಪ್ರಜೆಗಳಿಲ್ಲ. ದಕ್ಷಬ್ರಹ್ಮನು ತನ್ನ ಮಗಳು ದಾಕ್ಷಾಯಿಣಿಯನ್ನು ಶಿವನಿಗೆ ಕೊಟ್ಟು ಮದುವೆ ಮಾಡಲು ನಿರಾಕರಿಸಿದಾಗ ಶ್ಮಶಾನವೇ ಅವನ ಸಾಮ್ರಾಜ್ಯ, ಭೂತ ಪ್ರೇತಗಳೇ ಅವನ ಪ್ರಜೆಗಳು ಎಂದಿದ್ದ. ಅಲ್ಲದೇ ಶಿವ ಓರ್ವ ಭಿಕ್ಷುಕ (ಶಿವನು ಭಿಕ್ಷೆಗೆ ಬಂದ ನೀಡು ಬಾರೇ ತಂಗಿ, ಅವನಿಗಿಂತ ಚೆಲುವನಿಲ್ಲ ನೋಡು ಬಾರೇ ತಂಗಿ! ಎಂದು ನಮ್ಮ ಜಾನಪದರೂ ಹಾಡಿದ್ದಾರೆ). ನಮ್ಮ ಮುಖ್ಯಮಂತ್ರಿಗಳಾದರೂ ದೇಶದ ಮುಖ್ಯಮಂತ್ರಿಗಳಲ್ಲೇ ಅತ್ಯಂತ ಶ್ರೀಮಂತರು. ಆದ್ದರಿಂದ ಅಂದು ಮುಖಪುಟದಲ್ಲಿ ಪ್ರಕಟವಾಗಿದ್ದ ಆ ಕಲಾರೂಪಕ ಕಲಾತ್ಮಕತೆಯ ದೃಷ್ಟಿಯಿಂದ ಒಂದು ವಿಫಲ ಪ್ರಯೋಗವೇ ಆದರೂ ಜನಾಕರ್ಷಣೆಯ ದೃಷ್ಟಿಯಿಂದ ಯಶಸ್ವಿಯಾಯಿತು. ಸಂಪಾದಕರ ಉದ್ದೇಶವೂ ಜನಾಕರ್ಷಣೆಗೇ ಸೀಮಿತವಾಗಿತ್ತೇನೋ, ತಿಳಿಯದು.

ಒಟ್ಟಿನಲ್ಲಿ ಕಾವ್ಯ ಪ್ರಯೋಗದ ಶಕ್ತಿ ಅಗಾಧವಾದುದು. ಅದು ವಿಫಲವಾದಾಗ ಜನರಿಗೆ ಮನರಂಜನೆ ನೀಡಿ ವಿಸ್ಮೃತಿಗೆ ಸರಿಯುತ್ತದೆ, ಒಂದು ವೇಳೆ ಸಫಲವಾದಲ್ಲಿ ಒಂದು ದೊಡ್ಡ ಜನಾಂದೋಲನವನ್ನೇ ಹುಟ್ಟುಹಾಕುತ್ತದೆ. ಇದನ್ನು ಬಂಕಿಮ ಚಂದ್ರರ ವಂದೇ ಮಾತರಂನಿಂದ ಹಿಡಿದು ಸಿದ್ದಲಿಂಗಯ್ಯನವರ ಇಕ್ರಲಾ ವದೀರ್ಲಾ ಸಾಲುಗಳವರೆಗೆ ಇತಿಹಾಸ ಮತ್ತೆ ಮತ್ತೆ ರುಜುವಾತು ಪಡಿಸಿದೆ.

ಈ ಹಿನ್ನೆಲೆಯಲ್ಲಿ ಪ್ರಾಚೀನ ಸಂಸ್ಕೃತ ಕವಿಯೋರ್ವನ ಈ ಮಾತುಗಳು ಮನನೀಯ: ರಾವಣನ ಯಶಸ್ಸು ಕ್ಷೀಣಿಸಿತು ಮತ್ತು ರಾಮ ಎಲ್ಲೆಡೆ ಪೂಜ್ಯನಾದ, ಕೀರ್ತಿಶಾಲಿಯಾದ. ಇಬ್ಬರೂ ಸಮಾನ ಶಕ್ತರು, ಸಮಾನ ಯೋಗ್ಯರು. ತಮ್ಮ ತಮ್ಮ ಕುಲದ ಏಳಿಗೆಗಾಗಿ ಇಬ್ಬರೂ ಸಮಾನವಾಗಿ ಶ್ರಮಿಸಿದವರು. ಯೋಗ್ಯತೆಯಲ್ಲಿ ಸರಿಸಮಾನರಾದರೂ ಕೀರ್ತಿಯಲ್ಲಿ ವ್ಯತ್ಯಾಸವಾಯಿತು. ಇದಕ್ಕೆ ಕವಿ ವಾಲ್ಮೀಕಿಯ ಪವಾಡಸದೃಶ ಪ್ರತಿಭೆಯೇ ಕಾರಣ. ಎಲೈ ರಾಜ ಮಹಾರಾಜರುಗಳೇ, ಕವಿಗಳ ವಿಷಯದಲ್ಲಿ ಎಚ್ಚರದಿಂದಿರಿ. ನೀವು ಏನಾಗಿದ್ದೀರೋ ಅದು ಮುಖ್ಯವಲ್ಲ. ಅವರು ನಿಮ್ಮನ್ನು ಹೇಗೆ ಬಿಂಬಿಸುತ್ತಾರೋ ಅದು ಮುಖ್ಯ.

ನೀವು ಜೀವಿತಾವಧಿಯಲ್ಲಿ ಸಾಧಿಸಿದ್ದು ಈ ಕ್ಷಣದಲ್ಲೇ ನಾಶವಾಗಿಬಿಡಬಹುದು. ಆದರೆ ಕವಿ ಕೃತಿಗಳಲ್ಲಿ ದಾಖಲಾಗುವ ಸಾಧನೆಗಳು ಅಜರಾಮರವಾಗಿಬಿಡುತ್ತವೆ. ಅವರ ಕೃತಿಗಳಲ್ಲಿ ನೀವು ಹೇಗೆ ಬಿಂಬಿತರಾಗುತ್ತೀರೋ ಅದೇ ಪರಮ ಸತ್ಯವಾಗಿ ಕೊನೆ ತನಕ ಉಳಿದುಬಿಡುತ್ತದೆ. (ಲಂಕಾಪತೇಃ ಸಂಕುಚಿತಂ ಯಶೋ ಯದ್ಯತ್ಕೀರ್ತಿಪಾತ್ರಂ ರಘುರಾಜಪುತ್ರಃ । ಸ ಸರ್ವ ಏವಾದಿಕವೇಃ ಪ್ರಭಾವೋ ನ ವಂಚನೀಯಾ ಕವಯಃ ಕ್ಷಿತೀಂದ್ರೈಃ । ಮಹೀಪತೇ ಸಂತಿ ನ ಯಸ್ಯ ಪಾರ್ಶ್ವೇ ಕವೀಶ್ವರಾಸ್ತಸ್ಯ ಕುತೋ ಯಶಾಂಸಿ । ಭೂಪಾಃ ಕಿಯಂತೋ ನ ಬಭೂವುರುರ್ವ್ಯಾಂ ನಾಮಾಪಿ ಜಾನಾತಿ ನ ಕೋಽಪಿ ತೇಷಾಮ್).

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಿರಳೆ ನಿರ್ಮೂಲನೆ ಗೊತ್ತು

ಜೂ.8ರ ವಿಶ್ವವಾಣಿಯಲ್ಲಿ ಕಿರಣ್ ಉಪಾಧ್ಯಾಯರ ಬರಹ ಚೆನ್ನಾಗಿದೆ. ಭಾರತದ ಬೆಳವಣಿಗೆಯನ್ನುಸಹಿಸದ ಹಲವು ಅಸಹಿಷ್ಣು ಮನಸ್ಥಿತಿಗಳು ಜಿರಳೆ ರೂಪದಲ್ಲಿ ಸರಿದಾಡುತ್ತಿವೆ. ಜಿರಳೆಗೆ ಸೂಚಿಸಿರುವ ಬೆಂಬಲ ಹೊರದೇಶದಿಂದ ಬಂದಿವೆ. ಅಲ್ಲದೆ ಹಿಂಬಾಲಕರ ಸಂಖ್ಯೆಯಲ್ಲೂ ಅನುಮಾನವಿದೆ. ಅಮೆರಿಕಾದ ಟೊಪೆಕಾ ನಗರದ ಎಂಟೂವರೆ ಲಕ್ಷ ಜನ ಬೆಂಬಲ ನೀಡಿದ್ದಾರೆ. ಆದರೆ ಆ ನಗರದ ಜನಸಂಖ್ಯೆ ಒಂದೂಕಾಲು ಲಕ್ಷ ಮಾತ್ರ. ಇದರಲ್ಲೇ ಗೊತ್ತಾಗುತ್ತೆ ಇವೆಲ್ಲಾ ಸುಳ್ಳು ಸಂಖ್ಯೆ ಎಂಬ ಅಸಲಿಯತ್ತು. ಗಂಭೀರ ಸಂಗತಿ ಎಂದರೆ ಜಿರಳೆಗೆ ಜೈ ಎಂದು ಕೂಗಿರುವವರಲ್ಲಿ ಭಾರತದ ಶತ್ರು ದೇಶಗಳಾದ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳ ಜನರೇ ಜಾಸ್ತಿ ಇದ್ದಾರೆ. ಒಟ್ಟಾರೆ ಯಾರದ್ದೋ ಚಿತಾವಣೆಯಿಂದ ಭಾರತದಲ್ಲಿ ಗೊಂದಲ ಸೃಷ್ಟಿಸುವ ಷಡ್ಯಂತ್ರ ಕಾಣುತ್ತಿದೆ. ಆದರೆ ಜಿರಲೆಗಳ ನಿರ್ಮೂಲನೆ ಹೇಗೆ ಎಂಬ ಸಂಗತಿ ಭಾರತೀಯರಿಗೆ ಚೆನ್ನಾಗಿ ಗೊತ್ತು.

- ಬಿ. ಎಸ್ ಮೋಹನ ಕುಮಾರ್, ಬೆಂಗಳೂರು

ಸಿಂಗೀತಂ ಲೇಖನ ಚೆನ್ನಾಗಿತ್ತು

ಸಿಂಗೀತಂ ಶ್ರೀನಿವಾಸರಾವ್ ಅವರ ಕುರಿತ ನವೀನ್ ಸಾಗರ್ ಅವರ ಲೇಖನ ತುಂಬಾ ಸೊಗಸಾಗಿತ್ತು. ನವೀನ್ ಅವರಂತೆ ನಾನೂ ಸಹಾ ಅದು ಸಂಗೀತಂ ಶ್ರೀನಿವಾಸ್ ರಾವ್ ಅಂತಲೇ ಬಹಳ ದಿನಗಳ ವರೆಗೂ ಭಾವಿಸಿದ್ದೆ. ಅದನ್ನು ತಿಳಿದುಕೊಳ್ಳಲು ಆಸಕ್ತಿಯಿಂದ ಪ್ರಯಾಸ ಪಟ್ಟಿದ್ದೆ. ಇಂದಿನ ಪೀಳಿಗೆಗೆ ಇವರುಗಳ ಪರಿಚಯ ಅತ್ಯಮೂಲ್ಯವಾಗಿತ್ತು. 94ರ ಇಳಿವಯಸಿನಲ್ಲಿ ಚಿತ್ರ ನಿರ್ದೇಶನ ಮಾಡುತ್ತಿರುವುದು ಆಶ್ಚರ್ಯ ಮೂಡಿಸಿತು. ಸಿಂಗೀತಂ ಎಂಬ ಹೆಸರು ಅವರಿಗೆ ಬರಲು ಕಾರಣ ಏನೆಂದು ತಿಳಿಸಿದ್ದರೆ ಚೆನ್ನಾಗಿತ್ತು.

- ಯಲುವಹಳ್ಳಿ ಸೊಣ್ಣೇಗೌಡ

ಅಧಿಕಾರಕ್ಕೆ ಹಠ ಶೋಭೆಯಲ್ಲ

ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗೆ ಕೇವಲ ಅಧಿಕಾರಕ್ಕಿಂತ ಜನಸೇವೆ ಮತ್ತು ಸಾರ್ವಜನಿಕ ಕಲ್ಯಾಣವೇ ಅತ್ಯಂತ ಮುಖ್ಯವಾದದ್ದು. ಅಧಿಕಾರ ಜನಹಿತಕ್ಕಾಗಿ ಸಿಕ್ಕಿರುವ ಸಾಧನವೇ ಹೊರತು ಸ್ವಾರ್ಥಕ್ಕಲ್ಲ. ಇತ್ತೀಚಿನ ಡಿಕೆ ಶಿವಕುಮಾರ್ ಅವರ ಸಂಪುಟದಲ್ಲಿ ಜನಪ್ರತಿನಿಧಿಯೊಬ್ಬರು ತನಗೆ ಇಂತಹದ್ದೇ ಮಂತ್ರಿ ಹುದ್ದೆ ಬೇಕೆಂಬ ಹಠ ಹಿಡಿದು ರಾಜೀನಾಮೆ ಪ್ರಹಸನದ ಬೃಹತ್ ನಾಟಕ ಪ್ರದರ್ಶನ ತೋರಿದ್ದು ಶೋಭೆ ತರುವ ಸಂಗತಿಯಲ್ಲ. ಚುನಾಯಿತ ಪ್ರತಿನಿಧಿಗಳು ಜನರಿಗೆ ಸೇವೆ ಸಲ್ಲಿಸಲು ಪ್ರಮಾಣ ವಚನ ಸ್ವೀಕರಿಸಿ ಸಾರ್ವಜನಿಕರ ಹಿತಕ್ಕಾಗಿ ಶ್ರಮಿಸಬೇಕೇ ವಿನಹ ತಾವು ಬಯಸುವ ಮಂತ್ರಿ ಹುದ್ದೆಯೇ ಬೇಕೆಂಬ ಹಠ ಮಾಡುವುದಲ್ಲ. ರಾಜಕಾರಣಿಗಳಿಗೆ ಜನಹಿತವೇ ಪರಮೋಚ್ಚವಾದದ್ದು. ಅಧಿಕಾರ ಹಾಗೂ ಸ್ಥಾನಮಾನಗಳು ತಾತ್ಕಾಲಿಕ. ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದು ಮತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವುದು ಅವರ ಮುಖ್ಯ ಗುರಿಯಾಗಿರಬೇಕು.

- ಹರಳಹಳ್ಳಿಪುಟ್ಟರಾಜು, ಪಾಂಡವಪುರ

ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

ತಮಿಳುನಾಡಿನಲ್ಲಿ ಶಾಲಾ ಸಮವಸ್ತ್ರ ಧರಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸರಕಾರಿ ಬಸ್ಸಿನಲ್ಲಿ ಸ್ಕೂಲ್-ಕಾಲೇಜುಗಳಿಗೆ ಪ್ರಯಾಣ ಉಚಿತ. ಕರ್ನಾಟಕದಲ್ಲಿ ಸ್ನಾತಕೋತ್ತರ ಪದವಿಯ ವರೆಗೂ ವಿದ್ಯಾರ್ಥಿಗಳಿಗೆ ಬಸ್ ಪ್ರಯಾಣ ಉಚಿತ ಮಾಡಲಾಗಿದ್ದು, ಈ ಸೌಲಭ್ಯ ಈ ವರೆಗೆ ವಿದ್ಯಾರ್ಥಿನಿಯರಿಗೆ ಮಾತ್ರ ಸೀಮಿತವಾಗಿತ್ತಂತೆ. ಕೇರಳದಲ್ಲಿ ಪದವಿವರೆಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ಉಚಿತ. ಕೇರಳದ ಕೊಡುಗೆಯನ್ನು ನೋಡಿದಾಗ ಕರ್ನಾಟಕ ಮತ್ತು ತಮಿಳುನಾಡು ನೀಡಿದ ಕೊಡುಗೆ ಸಪ್ಪೆ ಎನಿಸಿದರೂ ಇದೊಂದು ಶ್ಲಾಘನೀಯ ಕ್ರಮವಾಗಿದ್ದು, ಮುಂದಿನ ದಿನಗಳಲ್ಲಿ ಉಚಿತ ಶಿಕ್ಷಣವನ್ನು ಪರಿಗಣಿಸಬಹುದು ಎನ್ನುವ ಆಶಾಭಾವನೆ ವ್ಯಕ್ತವಾಗುತ್ತಿದೆ. ಗ್ಯಾರಂಟಿಗಳನ್ನು ಬಿಟ್ಟಿ ಗ್ಯಾರಂಟಿ ಎಂದು ಲೇವಡಿ ಮಾಡುವವರೂ ಕೂಡಾ ದಕ್ಷಿಣ ರಾಜ್ಯಗಳ ಈ ಗ್ಯಾರಂಟಿಯನ್ನು ಪ್ರಶಂಸಿಸುತ್ತಿದ್ದಾರೆ.

- ರಮಾನಂದ ಶರ್ಮಾ, ಬೆಂಗಳೂರು

ಪರಿಸರ ಶಿಕ್ಷಣ ಸುಧಾರಣೆ ಕಾಣಲಿ

ನಮ್ಮ ದೇಶವು ಹವಾಮಾನ ವೈಪರೀತ್ಯಕ್ಕೆ ತುತ್ತಾಗುವ ಅಪಾಯದಲ್ಲಿದ್ದರೂ, ಭಾರತದ ಶಾಲಾ ಪಠ್ಯಕ್ರಮಗಳು ಪರಿಸರ ವಿಜ್ಞಾನವನ್ನು ಕೇವಲ ನೆನಪಿಟ್ಟುಕೊಳ್ಳುವ ವಿಷಯವನ್ನಾಗಿ ಮಾಡಿವೆ. ಅಂತರರಾಷ್ಟ್ರೀಯ ಪಠ್ಯಕ್ರಮಗಳು ಕಾರ್ಬನ್ ಎಕನಾಮಿಕ್ಸ್ (ಇಂಗಾಲದ ಅರ್ಥಶಾಸ್ತ್ರ) ಮತ್ತು ಪರಿಸರ ವ್ಯವಸ್ಥೆಗಳ ಪರಸ್ಪರ ಸಂಬಂಧವನ್ನು ಕಲಿಸಿದರೆ, ಸಿಬಿಎಸ್‌ಇ ಮತ್ತು ರಾಜ್ಯ ಮಂಡಳಿಗಳು ಕೇವಲ ಮಾಲಿನ್ಯದ ವ್ಯಾಖ್ಯಾನಗಳನ್ನು ಕಂಠಪಾಠ ಮಾಡಿಸುತ್ತವೆ. ಸಂಶೋಧನೆಗಳ ಪ್ರಕಾರ ಶೇಕಡಾ 80ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಜಾಗತಿಕ ತಾಪಮಾನ ಏರಿಕೆಯನ್ನು ವ್ಯಾಖ್ಯಾನಿಸಬಲ್ಲರು ಆದರೆ ಸ್ಥಳೀಯ ಹವಾಮಾನ ನೀತಿಗಳನ್ನು ಗುರುತಿಸಲು ವಿಫಲರಾಗುತ್ತಾರೆ. ನಾವು ನಿಷ್ಕ್ರಿಯ ಜ್ಞಾನದಿಂದ ಸಕ್ರಿಯ ನಾಗರಿಕ ವಿಜ್ಞಾನದತ್ತ ತುರ್ತಾಗಿ ಬದಲಾಗಬೇಕಿದೆ. ಶಿಕ್ಷಣ ಸಚಿವಾಲಯವು ಪ್ರಾಯೋಗಿಕ ಪರಿಸರ ಅರ್ಥಶಾಸ್ತ್ರವನ್ನು ಕಡ್ಡಾಯಗೊಳಿಸಬೇಕು. ಸ್ಥಳೀಯ ಕೆರೆಗಳ ನೀರಿನ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಇಂಗಾಲದ ಹೆಜ್ಜೆಗುರುತು (ಕಾರ್ಬನ್ ಫುಟ್‌ಪ್ರಿಂಟ್) ನಕ್ಷೆ ತಯಾರಿಕೆಯನ್ನು ಶಾಲಾ ಗ್ರೇಡಿಂಗ್‌ಗೆ ಅಳವಡಿಸುವುದರಿಂದ ವಿದ್ಯಾರ್ಥಿಗಳನ್ನು ಕೇವಲ ಪಠ್ಯಪುಸ್ತಕ ಓದುಗರಿಗಿಂತ ನಿಜವಾದ ಪರಿಸರ ರಕ್ಷಕರನ್ನಾಗಿ ಪರಿವರ್ತಿಸಬಹುದು.

- ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ರೌಡಿ ನಿಗ್ರಹ ದಳಕ್ಕೆ ಸ್ವಾಗತ

ಪೊಲೀಸ್ ಠಾಣಾ ಹಂತದಲ್ಲೇ ರೌಡಿ ನಿಗ್ರಹ ಪಡೆ ರಚಿಸುವಂತೆ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಪೊಲೀಸ್ ಮಹಾನಿರ್ದೇಶಕರು ತಕ್ಷಣವೇ ರಾಜ್ಯದಲ್ಲಿ ರೌಡಿ ಪ್ರತಿಬಂಧಕ ದಳ ರಚನೆಗೆ ಮಾರ್ಗ ಸೂಚನೆ ಹೊರಡಿಸಿದ್ದಾರೆ. ರಾಜ್ಯದಲ್ಲಿ ರೌಡಿಗಳ ಸಮಾಜ ವಿರೋಧಿ ಚಟುವಟಿಕೆಗಳನ್ನು ತಡೆಯಲು, ಸಮಾಜದಲ್ಲಿ ಜನರು ಶಾಂತಿ ಮತ್ತು ನೆಮ್ಮದಿಯಿಂದ ಬದುಕಲು ರಾಜ್ಯ ಸರಕಾರದ ಈ ಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಆಯಾಯ ಪೊಲೀಸ್ ಠಾಣೆಯ ವ್ಯಾಪ್ತಿಯ ರೌಡಿಗಳ ವಿವರಗಳನ್ನು ಪೊಲೀಸ್ ಸ್ಟೇಷನ್‌ನಲ್ಲಿ, ಸ್ಥಳೀಯ ಪತ್ರಿಕೆಗಳಲ್ಲೂ ಪ್ರಕಟಿಸಬೇಕು. ಇದರಿಂದ ಸಾರ್ವಜನಿಕರು ಅಂತಹವರಿಂದ ಅಂತರ ಕಾಯ್ದುಕೊಳ್ಳಲು ಅನುಕೂಲ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸುಮಾರು 600 ಮಂದಿ ರೌಡಿ ಶೀಟರ್ಸ್ ಇರುವುದಾಗಿ ಮೈಸೂರಿನ ಹಿರಿಯ ಪೋಲೀಸ್ ಅಧಿಕಾರಿಗಳೇ ಸ್ಪಷ್ಟಪಡಿಸಿದ್ದಾರೆ. ಇದು ಆತಂಕಕಾರಿ. ರಿಯಲ್ ಎಸ್ಟೇಟ್ ಮಾಫಿಯಾ ಈ ರೌಡಿಗಳನ್ನು ಹೆಚ್ಚಾಗಿ ಬಳಸುತ್ತದೆ. ಇದಕ್ಕೆ ಕಡಿವಾಣ ಹಾಕಬೇಕು.

- ಬೂಕನಕೆರೆ ವಿಜೇಂದ್ರ, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 327

ಸಮಾಚಾರ ಸಣ್ಣದಲ್ಲ

ಸರಕಾರ ಉರುಳಿಸುವ ಉದ್ದೇಶದ ಹೇಳಿಕೆ ಅಲ್ಲ

ಚೆನ್ನೈ: 'ಟಿವಿಕೆ' ಪಕ್ಷದ ಸರಕಾರ 3 ತಿಂಗಳಿಗಿಂತ ಹೆಚ್ಚು ಕಾಲ ಉಳಿಯುವುದಿಲ್ಲ ಎಂಬ ಡಿಎಂಕೆ ಮುಖ್ಯಸ್ಥ, ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಅವರ ಹೇಳಿಕೆ

ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ನೇತೃತ್ವದ ಸರಕಾರವನ್ನು ಉರುಳಿಸುವ ಉದ್ದೇಶ ಹೊಂದಿಲ್ಲ ಎಂದು ಡಿಎಂಕೆ ಪಕ್ಷದ ನಾಯಕ- ಮಾಜಿ ಸಚಿವ ತಂಗಮ್ ತೆನ್ನರಸು ಹೇಳಿದ್ದಾರೆ.ಟಿವಿಕೆ ಪಕ್ಷ ಅಧಿಕಾರಕ್ಕೇರಿದಾಗ ಮುಂದಿನ 6 ತಿಂಗಳ ಕಾಲ ನಮ್ಮ ಪಕ್ಷದಿಂದ ಯಾವುದೇ ಅಡ್ಡಿ ಇರುವುದಿಲ್ಲ ಎಂದು ಹೇಳಿದ್ದೆ. ಆದರೆ, ಈಗ ಬದಲಾದ ಸನ್ನಿವೇಶದಲ್ಲಿ ಟಿವಿಕೆ ಸರಕಾರ 3 ತಿಂಗಳಿಗಿಂತ ಹೆಚ್ಚು ಇರುವುದಿಲ್ಲ ಎನಿಸಿದೆ' ಎಂದು ಸ್ಟಾಲಿನ್ ಭಾನುವಾರ ಹೇಳಿದ್ದರು. ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ಸರಕಾರ ಬಂದು 1 ತಿಂಗಳಾಗಿದೆ. ಅಷ್ಟರಲ್ಲೇ ರಾಜ್ಯದಲ್ಲಿ ಕೊಲೆ, ದರೋಡೆ, ಮಚ್ಚಿನ ದಾಳಿ, ಮಾದಕವಸ್ತು ಕಳ್ಳಸಾಗಣೆ, ವಿದ್ಯುತ್ ಕಡಿತ, ರೈತರ ಪ್ರತಿಭಟನೆ ಮತ್ತು ಲೈಂಗಿಕ ದೌರ್ಜನ್ಯ ಪ್ರತಿನಿತ್ಯ ವರದಿ ಆಗುತ್ತಿರುವುದನ್ನು ನೋಡಿದಾಗ ಪ್ರತಿಪಕ್ಷ ನಾಯಕರು ಮೌನವಾಗಿರಲು ಸಾಧ್ಯವೇ? ಇಂಥ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿನ ಸರಕಾರ 3 ತಿಂಗಳು ಮುಂದುವರಿಯಬಹುದೇ ಎಂಬ ಅನುಮಾನ ಮೂಡುತ್ತದೆ. ಆ ಅರ್ಥದಲ್ಲೇ ಸ್ಟಾಲಿನ್ ಹೇಳಿದ್ದಾರೆ ಎಂದು ತೆನ್ನರಸು ಸ್ಪಷ್ಟಪಡಿಸಿದ್ದಾರೆ.

ತಿನಿಸುಗಳ ಪಾರ್ಸಲ್‌ಗೆ ದಿನಪತ್ರಿಕೆ ಬಳಕೆ ಬೇಡ

ದೆಹಲಿ: ದೇಶಾದ್ಯಂತ ಇರುವ ಹೋಟೆಲ್, ರೆಸ್ಟೋರೆಂಟ್, ರಸ್ತೆಬದಿ ತಿನಿಸು ಮಾರಾಟಗಾರರು ಗ್ರಾಹಕರಿಗೆ ಆಹಾರ ಪದಾರ್ಥಗಳನ್ನು ಬಡಿಸಲು ಅಥವಾ ಪ್ಯಾಕ್ ಮಾಡಲು ದಿನಪತ್ರಿಕೆಗಳು ಸೇರಿದಂತೆ ಮುದ್ರಿತ ಕಾಗದಗಳನ್ನು ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು 'ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ'(ಎಫ್‌ಎಸ್‌ಎಸ್‌ಎಐ) ಕಟ್ಟುನಿಟ್ಟಿನ ಸೂಚನೆ ನೀಡಿದೆ. ದಿನಪತ್ರಿಕೆ, ನಿಯತಕಾಲಿಕಗಳ ಮುದ್ರಣಕ್ಕೆ ಬಳಸುವ ಕಪ್ಪು ಮಸಿ ಅಥವಾ ಶಾಯಿಯಲ್ಲಿ ವಿಷಕಾರಿ ರಾಸಾಯನಿಕವಾದ 'ಲೆಡ್'(ಸೀಸ್) ಮೊದಲಾದ ಅಪಾಯಕಾರಿ ರಾಸಾಯನಿಕಗಳು ಮತ್ತು ಹೆವಿಮೆಟಲ್ (ಅತಿಭಾರಲೋಹ) ಇರುತ್ತವೆ. ಇವು ಆಹಾರಕ್ಕೆ ಮಿಶ್ರಣವಾಗಿ ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುವ ಅಪಾಯವಿದೆ. ಹಾಗಾಗಿ ಕಾರ್ಬನ್‌ನಿಂದ ಮುದ್ರಿತವಾದ ಕಾಗದಗಳು ಅಥವಾ ದಿನಪತ್ರಿಕೆಗಳನ್ನು ತಿಂಡಿ-ತಿನಿಸು ಪಾರ್ಸಲ್ ಮಾಡಲು ಬಳಸುವುದರಿಂದ ಗ್ರಾಹಕರಲ್ಲಿ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂದು 'ಎಫ್‌ಎಸ್‌ಎಸ್‌ಎಐ' ಪಶ್ಚಿಮ ವಲಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ(ಪ್ಯಾಕೇಜಿಂಗ್) ನಿಯಮಗಳು-2018 ಉಲ್ಲೇಖಿಸಿ ಎಚ್ಚರಿಸಿದೆ.

ನಕಲಿ ಸಹಿ: ಮಮತಾ ಮನೆಗೆ ಸಿಐಡಿ ತಂಡ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಶಾಸಕಾಂಗ ಪಕ್ಷದ ನಾಯಕರಾಗಿ ಸೋವಂದೇಬ್ ಚಟ್ಟೋಪಾಧ್ಯಾಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಮ್ಮದೇ ಪಕ್ಷದ ಶಾಸಕರ ನಕಲಿ ಸಹಿ ಇದ್ದ ಪತ್ರವನ್ನು ಟಿಎಂಸಿ ಸ್ಪೀಕರ್‌ಗೆ ಸಲ್ಲಿಸಿದ್ದ ಪ್ರಕರಣದಲ್ಲಿ ಸಿಐಡಿ ತನಿಖೆ ನಡೆಯಲಾರಂಭಿಸಿದೆ. ಇದರ ಭಾಗವಾಗಿ ಪಶ್ಚಿಮ ಬಂಗಾಳ ಪೊಲೀಸರ ಅಪರಾಧ ತನಿಖಾ ವಿಭಾಗದ (ಸಿಐಡಿ) 17 ಅಧಿಕಾರಿ-ಸಿಬ್ಬಂದಿಗಳ ತಂಡ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಕಾಲಿಘಾಟ್ ನಿವಾಸ ಮತ್ತು ಕಚೇರಿಗೆ ಮಂಗಳವಾರ ಭೇಟಿ ನೀಡಿ ತನಿಖೆ ನಡೆಸಿದೆ. ಕಾಲಿಘಾಟ್ ಪೊಲೀಸ್ ಠಾಣೆ ಅಧಿಕಾರಿಗಳು ಮತ್ತು ಮಹಿಳಾ ಪೊಲೀಸರು ತಂಡದಲ್ಲಿದ್ದರು. ತನಿಖಾ ಸಂಸ್ಥೆಯ ಅಧಿಕಾರಿಗಳು ಮಧ್ಯಾಹ್ನ ಹರೀಶ್ ಚಟರ್ಜಿ ಮಾರ್ಗದಲ್ಲಿರುವ 30 ಬಿ ಕಟ್ಟಡದಲ್ಲಿನ ಬ್ಯಾನರ್ಜಿ ನಿವಾಸಕ್ಕೆ ಅಧಿಕಾರಿಗಳ ತಂಡ ಭೇಟಿ ನೀಡಿದಾಗ ಮನೆಯೊಳಕ್ಕೆ ಪ್ರವೇಶಿಸದಂತೆ ಅಲ್ಲಿದ್ದ ಭದ್ರತಾ ಸಿಬ್ಬಂದಿ ತಡೆದಿದ್ದರು. ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಈ ಹಿಂದೆ ನೋಟಿಸ್ ನೀಡಿದ್ದು, ಅದಕ್ಕೆ ಪ್ರತಿಕ್ರಿಯೆ ಪಡೆಯಲು ಪಕ್ಷದ ಕಚೇರಿಗೆ ಭೇಟಿ ನೀಡಿರುವುದಾಗಿ ಸಿಐಡಿ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಫಿಲಿಫೈನ್ ಭೂಕಂಪ: ಸಾವಿನ ಸಂಖ್ಯೆ 35ಕ್ಕೆ

ಮನಿಲಾ: ಫಿಲಿಪೈನ್ಸ್‌ನ ದಕ್ಷಿಣ ಭಾಗದಲ್ಲಿ ಸೋಮವಾರ ಸಂಭವಿಸಿದ 7.8 ತೀವ್ರತೆಯ ಪ್ರಬಲ ಭೂಕಂಪಕಕ್ಕೆ ಬಲಿಯಾದವರ ಸಂಖ್ಯೆ 35ಕ್ಕೆ ಏರಿಕೆಯಾಗಿದೆ. ಭೂಕಂಪದ ತೀವ್ರತೆಗೆ ಹಲವು ಕಟ್ಟಡಗಳು ಹಾಗೂ ಪ್ರಮುಖ ಸೇತುವೆಗಳಿಗೆ ಹಾನಿಯಾಗಿದೆ. ಕರಾವಳಿ ಪ್ರದೇಶಗಳಲ್ಲಿ 1 ಮೀಟರ್ ಎತ್ತರದ ಸುನಾಮಿ ಅಲೆಗಳು ಕಾಣಿಸಿಕೊಂಡಿವೆ. ಭೂಕಂಪದ ಕೇಂದ್ರಬಿಂದು ಬುರಿಯಾಸ್ ನಗರದಿಂದ 24.7 ಕಿ.ಮೀ ದೂರದಲ್ಲಿ ಪತ್ತೆಯಾಗಿದೆ. ಪೆಸಿಫಿಕ್ ಸಮುದ್ರದಲ್ಲಿ ಸುನಾಮಿ ಸಾಧ್ಯತೆ ಎಚ್ಚರಿಕೆ ನೀಡಿದೆ.

{ ಕಲ್ಯಾಣ್ ಬ್ಯಾನರ್ಜಿ } ಟಿಎಂಸಿ ಸಂಸದ

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಪಕ್ಷ ಬಿಜೆಪಿಗೆ ಜಾರಿ ನಿರ್ದೇಶನಾಲಯ(ಇ.ಡಿ), ಸಿಬಿಐ, ಆದಾಯ ತೆರಿಗೆ(ಐಟಿ) ಮತ್ತಿತರ ಸಂಸ್ಥೆಗಳ ಅಧಿಕಾರವಿದೆ. ಆದರೆ, ಅದಕ್ಕೆ ಬದಲಾಗಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಬಳಿ 'ಮಾ, ಮಾಟಿ, ಮಾನುಷ್' ಮತ್ತು ಪಕ್ಷದ ಲಕ್ಷಾಂತರ ಕಾರ್ಯಕರ್ತರು, ಪಶ್ಚಿಮ ಬಂಗಾಳದ ಕೋಟ್ಯಂತರ ಜನರು ಇದ್ದಾರೆ.

7 ಕೀರ್ತಿ ಚಕ್ರ, 15 ವೀರ ಚಕ್ರ ಮತ್ತು 29 ಶೌರ್ಯ ಚಕ್ರ ಪದಕ ಪ್ರದಾನ ಮಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು
ರಾಷ್ಟ್ರಪತಿ ಭವನ ಕಾರ್ಯಕ್ರಮ: ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತಿತರರು ಭಾಗಿ

ವೀರಯೋಧರಿಗೆ ಕೀರ್ತಿಚಕ್ರ, ವೀರಚಕ್ರ, ಶೌರ್ಯಚಕ್ರ ಪದಕ ಪ್ರದಾನ

ದೆಹಲಿ: ಪಾಕಿಸ್ತಾನ ವಿರುದ್ಧ ಪ್ರಮುಖ ಸೇನಾ ಕಾರ್ಯಾಚರಣೆ 'ಆಪರೇಷನ್ ಸಿಂದೂರ್' ವೇಳೆ ತೋರಿದ ಅಪ್ರತಿಮ ಸಾಹಸ ಮತ್ತು ಧೀರತನಕ್ಕಾಗಿ ಭಾರತೀಯ ವಾಯುಪಡೆಯ(ಐಎಎಫ್) ವೀರ ಅಧಿಕಾರಿಗಳಿಗೆ ವೀರ ಚಕ್ರ ಪದಕಗಳನ್ನು ದೇಶದ ಸಶಸ್ತ್ರ ಪಡೆಗಳ ಸರ್ವೋಚ್ಚ ಕಮಾಂಡರ್ ಆಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಿ ಗೌರವಿಸಿದ್ದಾರೆ. ರಕ್ಷಣಾ ಪಡೆಯ ಯೋಧರಿಗೆ ಕೀರ್ತಿ ಚಕ್ರ, ಶೌರ್ಯ ಚಕ್ರ ಪದಕಗಳನ್ನು ಪ್ರದಾನ ಮಾಡಲಾಗಿದೆ.

ಕೆಲ ವೀರ ಯೋಧರಿಗೆ ಮರಣೋತ್ತರವಾಗಿ ಕೀರ್ತಿ ಚಕ್ರ, ಶೌರ್ಯ ಚಕ್ರ, ವೀರ ಚಕ್ರ ಗೌರವ ಸಂದಿದೆ. ಹುತಾತ್ಮ ಯೋಧರ ಪರವಾಗಿ ಕುಟುಂಬದವರು ಪ್ರಶಸ್ತಿ ಸ್ವೀಕರಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಸೋಮವಾರ ಸಂಜೆ ನಡೆದ ರಕ್ಷಣಾ ಸಚಿವಾಲಯ ಕಾರ್ಯಕ್ರಮದಲ್ಲಿ ಒಟ್ಟು 51 ವೀರ ಸೇನಾನಿಗಳಿಗೆ 15 ವೀರ ಚಕ್ರ, 7 ಕೀರ್ತಿ ಚಕ್ರ ಮತ್ತು 29 ಶೌರ್ಯ ಚಕ್ರ ಪದಕಗಳನ್ನು ಪ್ರದಾನ ಮಾಡಲಾಗಿದೆ.

ಕೀರ್ತಿ ಚಕ್ರ: ಶಾಂತಿ ಕಾಲದಲ್ಲಿ ನೀಡಲಾಗುವ ದೇಶದ 2ನೇ ಅತ್ಯುನ್ನತ ಶೌರ್ಯ ಪ್ರಶಸ್ತಿ ಕೀರ್ತಿ ಚಕ್ರ. ಸೇನೆಯ ವೈದ್ಯಕೀಯ ವಿಭಾಗದ ಕ್ಯಾಪ್ಟನ್ ಅಂಶುಮಾನ್ ಸಿಂಗ್ (ಮರಣೋತ್ತರ) ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಅಗ್ನಿ ಅವಘಡ ವೇಳೆ ತಮ್ಮ ಪ್ರಾಣವನ್ನೂ ಲೆಕ್ಕಿಸದೇ ಸಹ ಯೋಧರನ್ನು ರಕ್ಷಿಸಿ ಹುತಾತ್ಮರಾದರು. ರಜಪೂತ್ ರೈಫಲ್ಸ್‌ನ ಹವಲ್ದಾರ್ ಪ್ರದೀಪ್ ಸಿಂಗ್



ಭಾರತೀಯ ವಾಯುಪಡೆ ಗ್ರೂಪ್ ಕ್ಯಾಪ್ಟನ್ ರಂಜೀತ್ ಸಿಂಗ್ ಸಿಧು ವೀರಚಕ್ರ ಪದಕ ಸ್ವೀಕರಿಸಿದರು.

ಭಾರತೀಯ ಸಶಸ್ತ್ರ ಪಡೆಗಳಿಗೆ ಪ್ರಧಾನ ಮಾಡಲಾಗುವ ಪರಮವೀರ ಚಕ್ರ, ಮಹಾವೀರ ಚಕ್ರ, ವೀರಚಕ್ರ, ಅಶೋಕ ಚಕ್ರ, ಕೀರ್ತಿ ಚಕ್ರ, ಶೌರ್ಯಚಕ್ರ ಪದಕಗಳು.

ಜಮ್ಮು-ಕಾಶ್ಮೀರದಲ್ಲಿ ನಡೆದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿನ ಅಪ್ರತಿಮ ಧೈರ್ಯಕ್ಕಾಗಿ

ವೀರ ಸಿಪಾಯಿ ಜಂಜಲ್ ಪ್ರವೀಣ್ ಪ್ರಭಾಕರ್ ಅವರಿಗೆ ಮರಣೋತ್ತರವಾಗಿ ಪ್ರದಾನ ಮಾಡಲಾದ ಶಾಂತಿಕಾಲದ 2ನೇ ಅತ್ಯುನ್ನತ ಪದಕ 'ಕೀರ್ತಿ ಚಕ್ರ' ಸ್ವೀಕರಿಸಿದ ಹುತಾತ್ಮ ಯೋಧನ ತಾಯಿ ಶೋಕ ತಪ್ತರಾದರು. ಅವರನ್ನು ಎದೆಗೆ ಒರಗಿಸಿಕೊಂಡು ರಾಷ್ಟ್ರಪತಿ ದ್ರೌಪದಿ ಮುರ್ಮು ಸಮಾಧಾನಪಡಿಸಿದರು.

ಪದಕ ಪಡೆದರು. ಅಸ್ಸಾಂ ರೈಫಲ್ಸ್ ಪಡೆಯ ರೈಫಮ್ ಮ್ಯಾನ್ ಅಲೋಕ್ ರಾವ್ ಈಶಾನ್ಯ ರಾಜ್ಯದಲ್ಲಿ ಶಾಂತಿ ಕಾಪಾಡುವ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ ಪ್ರಾಣತ್ಯಾಗ ಮಾಡಿದ್ದಕ್ಕಾಗಿ ಈ ಪದಕವನ್ನು (ಮರಣೋತ್ತರ) ಪ್ರದಾನ ಮಾಡಲಾಯಿತು.

ಶೌರ್ಯ ಚಕ್ರ: ಶಾಂತಿ ಕಾಲದಲ್ಲಿ ಶೌರ್ಯ, ಸಾಹಸ ಪ್ರದರ್ಶಿಸಿದ ಯೋಧರಿಗೆ ನೀಡಲಾಗುವ 3ನೇ ಅತ್ಯುನ್ನತ ಪ್ರಶಸ್ತಿ. ಭಾರತೀಯ ಸೇನೆ, ನೌಕಾಪಡೆ, ವಾಯುಪಡೆ ಮತ್ತು ಅರೆಸೇನಾ ಪಡೆಗಳ ಹಲವು ಯೋಧರಿಗೆ ಈ ಬಾರಿ ಶೌರ್ಯಚಕ್ರ ಗೌರವ ಸಂದಿದೆ. ಮಣಿಪುರದಲ್ಲಿ ಕಠಿಣ ಪರಿಸ್ಥಿತಿಯಲ್ಲಿ ಭಯೋತ್ಪಾದಕರ ಜಾಲ ಧ್ವಂಸಗೊಳಿಸಿದ ಪ್ಯಾರಾಚೂಟ್ ರೆಜಿಮೆಂಟ್‌ನ ಮೇಜರ್ ದಿಗ್ವಿಜಯ್ ಸಿಂಗ್ ರಾವತ್ ಅವರಿಗೆ ಮತ್ತು ಜಮ್ಮು-ಕಾಶ್ಮೀರ ಗಡಿ ನುಸುಳುವಿಕೆ ತಡೆದ ಕಾರ್ಯಾಚರಣೆ ನೇತೃತ್ವ ವಹಿಸಿದ್ದ ಮೇಜರ್ ದೀಪೇಂದ್ರ ವಿಕ್ರಮ್ ಬಸ್ನೆಟ್ ಅವರಿಗೂ ಶೌರ್ಯ ಚಕ್ರ ಪದಕ ಸಂದಿದೆ.

ಉಗ್ರರೊಂದಿಗಿನ ನೇರ ಗುಂಡಿನ ಚಕಮಕಿಯಲ್ಲಿ ಗುಂಡುಗಳು ದೇಹಹೊಕ್ಕರೂ ವೀರಮರಣವನ್ನಪ್ಪುವ ಮುನ್ನ ಇಬ್ಬರು ಉಗ್ರರನ್ನು ಕೊಂದ ರಾಷ್ಟ್ರೀಯ ರೈಫಲ್ಸ್‌ನ ಪವನ್ ಕುಮಾರ್‌ಗೆ ಶೌರ್ಯ ಚಕ್ರ (ಮರಣೋತ್ತರ) ನೀಡಲಾಗಿದೆ.

ಪ್ರಶಸ್ತಿ ಸ್ವೀಕರಿಸಿದ ವೀರ ಯೋಧರ ಕಥೆಗಳು ಮತ್ತು ಮರಣೋತ್ತರ ಪ್ರಶಸ್ತಿ ಸ್ವೀಕರಿಸಿದ ಹುತಾತ್ಮ ಯೋಧರ ತಾಯಂದಿರು-ಪತ್ನಿಯರು ಕಣ್ಣೀರಾದ ದೃಶ್ಯಗಳು ಜಾಲತಾಣಗಳಲ್ಲಿ ಕೋಟ್ಯಂತರ ವೀಕ್ಷಕರ ಗಮನ ಸೆಳೆದು ದೇಶಪ್ರೇಮ ಮೂಡಿಸಿವೆ.

ರಾಷ್ಟ್ರಪತಿ ಭವನದಲ್ಲಿನ ಭವ್ಯ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ವಿತರಿಸಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಮೂರೂ ಸಶಸ್ತ್ರ ಪಡೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ವೀರಚಕ್ರ, ಪದಕ ಪಡೆದವರು

ಯುದ್ಧ ಕಾಲದ ದೇಶದ 3ನೇ ಅತ್ಯುನ್ನತ ಶೌರ್ಯ ಪದಕವೇ ವೀರ ಚಕ್ರ. ಪ್ರಾಣದ ಹಂಗು ತೊರೆದು ಶತ್ರು ದೇಶದ ಯುದ್ಧ ವಿಮಾನಗಳು, ಸೇನಾನೆಲೆಗಳನ್ನು ಚಾಣಾಕ್ಷತನದಿಂದ ನಾಶಪಡಿಸಿದ ವಾಯುಪಡೆಯ ಯುದ್ಧ ವಿಮಾನಗಳ ಪೈಲಟ್‌ಗಳು ಮತ್ತು ಕಮಾಂಡರ್‌ಗಳಿಗೆ ವೀರಚಕ ಪದಕ ಪ್ರದಾನ ಮಾಡಲಾಗಿದೆ. ಆಪರೇಷನ್ ಸಿಂದೂರ್ ಅವಧಿಯಲ್ಲಿ ಭಾರತದ ವಾಯುಪಡೆಯ ತಾಂತ್ರಿಕ ಮತ್ತು ಯುದ್ಧ ಕೌಶಲವನ್ನು ವಾಯುಪಡೆ ಅಧಿಕಾರಿಗಳು ಜಗತ್ತಿನೆದುರು ಸಾಬೀತುಪಡಿಸಿದ್ದಾರೆ. ಅದಕ್ಕಾಗಿ ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್‌ಗಳಾದ ರಂಜೀತ್ ಸಿಂಗ್ ಸಿಧು, ಮನೀಶ್ ಅರೋರಾ, ಅನಿಮೇಶ್ ಪಟ್ನಿ, ಕುನಾಲ್ ಕಲ್ರಾ, ವಿಂಗ್ ಕಮಾಂಡರ್ ಜೊಯ್ ಚಂದ್ರ, ಸ್ಕ್ವಾಡ್ರನ್ ಲೀಡರ್‌ಗಳಾದ ಸಾರ್ಥಕ್ ಕುಮಾರ್, ಸಿದ್ಧಾಂತ್ ಸಿಂಗ್, ರಿಜ್ವಾನ್ ಮಾಲಿಕ್, ಫ್ಲೈಟ್ ಲೆಫ್ಟಿನೆಂಟ್ ಆರ್ಶವೀರ್ ಅವರಿಗೆ ವೀರಚಕ್ರ ಪದಕ ಪ್ರದಾನ ಮಾಡಲಾಗಿದೆ. ಅಲ್ಲದೇ, ಭಾರತೀಯ ಸೇನೆಯ ಕರ್ನಲ್ ಕೊಶಾಂಕ್ ಲಂಬಾ, ಲೆಫ್ಟಿನೆಂಟ್ ಕರ್ನಲ್ ಸುಶೀಲ್ ಭಟ್, ನಯಾಬ್ ಸುಬೇದಾರ್ ಸತೀಶ್ ಕುಮಾರ್ ಮತ್ತು ರೈಫಲ್ ಮ್ಯಾನ್ ಸುನೀಲ್ ಕುಮಾರ್(ಮರಣೋತ್ತರ) ವೀರಚಕ್ರ ಪದಕ ಪಡೆದಿದ್ದಾರೆ.

ಬಡತನ ನಿವಾರಣೆ, ಮೂಲ ಸೌಕರ್ಯ ಅಭಿವೃದ್ಧಿ, ಕಿಸಾನ್ ಸಮ್ಮಾನ್, ಲಕ್‌ಪತಿ ದೀದಿ

ಎನ್‌ಡಿಎ ಆಡಳಿತ 12 ವರ್ಷ: ವಿಶ್ವಾಸ, ವಿಕಾಸ, ಜನಕಲ್ಯಾಣ

ದೆಹಲಿ: ಪ್ರಧಾನಿ ನರೇಂದ್ರ, ದಾಮೋದರದಾಸ್ ಮೋದಿ 2014ರ ಮೇ 26ರಂದು ಮೊದಲ ಬಾರಿಗೆ ಭಾರತದ ಪ್ರಧಾನಿ ಹುದ್ದೆ ಅಲಂಕರಿಸಿದ ಬಳಿಕ ಸತತ 12 ವರ್ಷಗಳ ಕಾಲ ದೇಶವನ್ನು ಆಳುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ತಮ್ಮ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರಕಾರ ಮಾಡಿರುವ ಸಾಧನೆಗಳನ್ನು ಪ್ರಧಾನಿ ಮೋದಿ



ಮಂಗಳವಾರ ಮೆಲುಕು ಹಾಕಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಕಳೆದ 12 ವರ್ಷಗಳ ಆಡಳಿತ ಕಾಲದಲ್ಲಿ ದೇಶದ ಜನರ ನಂಬಿಕೆ ಗಳಿಸಿದೆ. ಅಭಿವೃದ್ಧಿ ಕಾರ್ಯಗಳಾಗಿವೆ. ಸಾರ್ವಜನಿಕರ ಕಲ್ಯಾಣವಾಗಿದೆ. ವಿಶ್ವಾಸ, ವಿಕಾಸ, ಜನಕಲ್ಯಾಣವೇ ಎನ್‌ಡಿಎ ಸರಕಾರದ ಮೂಲ ಮಂತ್ರವಾಗಿದೆ ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಎನ್‌ಡಿಎ ಸರಕಾರ 12 ವರ್ಷಗಳಲ್ಲಿ ದೇಶದಲ್ಲಿನ ಬಡತನವನ್ನು ನಿವಾರಿಸಿದೆ. ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದೆ. ರೈತರ ಕಲ್ಯಾಣಕ್ಕೆ ಕಾರಣವಾಗಿದೆ. ದೇಶದಲ್ಲಿನ 81 ಕೋಟಿ ಜನರಿಗೆ ಮಾಸಿಕ ಉಚಿತ ಆಹಾರ ಧಾನ್ಯ ನಿರಂತರ ಪೂರೈಸಲಾಗುತ್ತಿದೆ. ವಸತಿ ಯೋಜನೆಯಡಿ ಈವರೆಗೆ 4 ಕೋಟಿ ಮನೆಗಳನ್ನು ಬಡವರಿಗೆ ನಿರ್ಮಿಸಿಕೊಡಲಾಗಿದೆ. 10.50 ಕೋಟಿ ಶೌಚಾಲಯಗಳನ್ನು ದೇಶಾದ್ಯಂತ ನಿರ್ಮಿಸಲಾಗಿದೆ. 12 ಕೋಟಿ ಮನೆಗಳಿಗೆ ನಲ್ಲಿಯ ನೀರು ತಲುಪಿಸಲಾಗಿದೆ.

ಯುವಜನರ ಕಲ್ಯಾಣ ಕಾರ್ಯಕ್ರಮಗಳಡಿ 2 ಕೋಟಿ ಯುವಜನರಿಗೆ ಕೌಶಲ ವೃದ್ಧಿ ತರಬೇತಿ ನೀಡಲಾಗಿದೆ. ನವೋದ್ಯಮ ಸ್ಥಾಪನೆಗೆ ಮುಂದಾದ ಯುವಜನರಿಗೆ ಯಾವುದೇ ಗ್ಯಾರಂಟಿ ಕೇಳದೇ ಮುದ್ರಾ ಯೋಜನೆ ಮೂಲಕ 40 ಲಕ್ಷ ಕೋಟಿ ರು. ಬ್ಯಾಂಕ್ ಸಾಲ ಒದಗಿಸಲಾಗಿದೆ. ಪರಿಣಾಮವಾಗಿ ದೇಶದಲ್ಲೀಗ

2.2 ಲಕ್ಷ ಸ್ಟಾರ್ಟ್‌ಅಪ್ಸ್(ನವೋದ್ಯಮ)ಗಳಿವೆ.

ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ದೇಶಾದ್ಯಂತದ ರೈತರ ಬ್ಯಾಂಕ್ ಖಾತೆಗೆ ಈವರೆಗೆ 4.30 ಲಕ್ಷ ಕೋಟಿ ರು. ವರ್ಗಾವಣೆಯಾಗಿದೆ. 4 ಕೋಟಿ ರೈತರಿಗೆ 2 ಲಕ್ಷ ಕೋಟಿ ರು. ಬೆಳೆ ವಿಮೆ ಪರಿಹಾರ ಧನ ನೀಡಲಾಗಿದೆ. 8 ಕೋಟಿ ಕೃಷಿಕರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡಲಾಗಿದೆ.

ಮಹಿಳಾ ಸಶಕ್ತೀಕರಣಕ್ಕಾಗಿ 32 ಕೋಟಿ ಮಹಿಳೆಯರಿಗೆ ಜನ್‌ಧನ್ ಯೋಜನೆಯಡಿ ಬ್ಯಾಂಕ್ ಖಾತೆ, 91 ಲಕ್ಷ ಸ್ವಸಹಾಯ ಗುಂಪುಗಳ ಮೂಲಕ 10 ಕೋಟಿ ಮಹಿಳೆಯರ ಸಂಪರ್ಕ, ಸಾವಿರಾರು ಲಕ್‌ಪತಿ ದೀದಿಗಳ ಸೃಷ್ಟಿಯಾಗಿದೆ.

ಆರೋಗ್ಯ ಸೇವೆಗಳಡಿ 70 ಕೋಟಿ ಬಡವರಿಗೆ 5 ಲಕ್ಷ ರು. ವರೆಗೂ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ದೇಶದಲ್ಲಿ 2014ರಲ್ಲಿ 91 ಹೆದ್ದಾರಿಗಳಷ್ಟೇ ಇದ್ದವು. ಈಗ 164ಕ್ಕೇರಿವೆ. 74ರಷ್ಟಿದ್ದ ವಿಮಾನ ನಿಲ್ದಾಣಗಳ ಸಂಖ್ಯೆ ಈಗ 164ಕ್ಕೆ ಮುಟ್ಟಿದೆ. ನೂತನ ಸಂಸತ್ ಭವನದ ನಿರ್ಮಾಣವಾಗಿದೆ. ಅಟಲ್ ಸೇತು, ಚೆನಾಬ್ ರೈಲ್ವೆ ಬ್ರಿಡ್ಜ್‌ಗಳ ನಿರ್ಮಾಣವಾಗಿದೆ ಎಂದು ಪ್ರಧಾನಿ ಮೋದಿ ತಮ್ಮ ಸರಕಾರದ 12 ವರ್ಷಗಳ ಸಾಧನೆಗಳು, ಅಭಿವೃದ್ಧಿ ಕಾರ್ಯಗಳನ್ನು ಪಟ್ಟಿ ಮಾಡಿದ್ದಾರೆ.

ಮೋದಿ ಎಕ್ಸ್ ಸಂದೇಶ

'ಹಮಾರಿ ಸರಕಾರ್ ಕೆ ಬೀತೇ 12 ವರ್ಷ ವಿಶ್ವಾಸ್, ವಿಕಾಸ್ ಔರ್ ಜನಕಲ್ಯಾಣ್ ಕೋ ಸಮರ್ಪಿತ್ ರಹೆ ಹೈ. 140 ಕರೋಡ್

ದೇಶವಾಸಿಯೋಂ ಕೆ ಆಶೀರ್ವಾದ್ ಔರ್ ರಾಷ್ಟ್ರ ಪ್ರಥಮ್ ಕಿ ಭಾವನಾ ಸೆ ಹಮನೆ ಯುವಾವೋ, ಮಹಿಳಾವೋ ಔರ್ ಅಪನೆ ಕಿಸಾನ್ ಬಾಯಿ ಬೆಹನೋಂ ಕೋ ಸಶಕ್ತ ಬನಾನೆ ಮೆ ಕೋಯಿ ಕೋರ್- ಕಸರ್ ನಹಿ ಛೋಡಿ ಹೈ. ಯಹ್ ಹಮಾರೆ ಅಧಿಕ ಪ್ರಯಾಸೋಂ ಕಾ ಹಿ ಪರಿಣಾಮ್ ಹೈ ಕಿ ಇನ್‌ಫ್ರಾಸ್ಟ್ರಕ್ಚರ್ ಸೆ ಲೇಕರ್ ಡಿಜಿಟಲ್ ಕ್ರಾಂತಿ ತಕ್ ಆಜ್ ದೇಶ್ ಕೊ ದುನಿಯಾಬರ್ ಮೆ ಏಕ್ ನಯೀ ಪೆಹೆಚಾನ್ ಮಿಲಿ ಹೈ. ವಿಕಸಿತ್ ಭಾರತ್ ಕೆ ಸಂಕಲ್ಪ್ ಕೋ ಸಾಕಾರ್ ಕರ್ನೆ ಕೆ ಲಿಯೆ ಹಮ ಸೇವಾ, ಸುಶಾಸನ್ ಔರ್ ಸಮೃದ್ಧಿ ಕೆ ಇಸೀ ಪಥ್ ಪರ್ ನಿರಂತರ್ ಆಗೆ ಬಡತೇ ರಹೇಂಗೆ' ಎಂದು 'ಎಕ್ಸ್' ಸಂದೇಶದಲ್ಲಿ ಪ್ರಧಾನಿ ಮೋದಿ ಬರೆದುಕೊಂಡಿದ್ದಾರೆ.

ಲಂಡನ್: 36ನೇ ಅಂತಸ್ತಿಂದ ಬಿದ್ದು 3 ಎನ್ನಾರೈಗಳ ಆತ್ಮಹತ್ಯೆ

ಲಂಡನ್: ಅನಿವಾಸಿ ಭಾರತೀಯ ದಂಪತಿ ಗಂಭೀರ ಆರೋಗ್ಯ ಸಮಸ್ಯೆ ಹೊಂದಿದ್ದ ತಮ್ಮ 9 ವರ್ಷದ ಮಗನ ಸಮೇತ ಲಂಡನ್‌ನಲ್ಲಿನ ಐಷಾರಾಮಿ ಅಪಾರ್ಟ್‌ಮೆಂಟ್



ವೊಂದರ 36ನೇ ಮಹಡಿಯಿಂದ ಕೆಳಕ್ಕೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮಾಧ್ಯಮ ವರದಿ ಮಾಡಿವೆ. ಮೃತರನ್ನು ಮುಂಬೈ ಮೂಲದ ರಾಕೇಶ್ ಪೈ(47), ಪತ್ನಿ ಅದಿತಿ ಪರಲ್ಕರ್(46) ಮತ್ತು ಮಗ ಸಿದ್ ಎಂದು ಗುರುತಿಸಲಾಗಿದೆ. ದಕ್ಷಿಣ ಲಂಡನ್‌ನ ಎಲಿಫೆಂಟ್ ಮತ್ತು ಕ್ಯಾಸಲ್‌ನಲ್ಲಿರುವ ಹೈಪಾಯಿಂಟ್ ಟವರ್‌ನಲ್ಲಿ 36ನೇ ಮಹಡಿಯಲ್ಲಿದ್ದ ತಮ್ಮ ಅಪಾರ್ಟ್‌ಮೆಂಟ್‌ನಿಂದ ಮೇ 27ರಂದು ಬಿದ್ದು ಮೂವರೂ ಮೃತಪಟ್ಟಿದ್ದಾರೆ ಎಂದು ಟೆಲಿಗ್ರಾಫ್ ಪತ್ರಿಕೆ ವರದಿ ಮಾಡಿದೆ.

ಭಾರತದಲ್ಲಿ ಜನಿಸಿದ ಪೈ ಹಣಕಾಸು ಕ್ಷೇತ್ರದಲ್ಲೂ ಮತ್ತು ಪರಲ್ಕರ್ ಕನ್ಸಲ್ಟೆಂಟ್ ಆಗಿ ಲಂಡನ್‌ನ ಕಟ್ಟಡ ನಿರ್ಮಾಣ

ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. 2020ರಲ್ಲಿ ಅಸ್ವಸ್ಥ ಮಗನಿಗೆ ಭಾರತದಲ್ಲಿ ಚಿಕಿತ್ಸೆ ಕೊಡಿಸಲು ಯತ್ನಿಸಿದ್ದರು. ಆದರೆ ಮಗನ ಆರೋಗ್ಯ ಸುಧಾರಿಸದ ಹಿನ್ನಲೆಯಲ್ಲಿ ಕಳೆದ ವರ್ಷ ಲಂಡನ್‌ಗೆ ಮರಳಿದ್ದರು.

ಸಿದ್ ಗಂಭೀರ ಕಾಯಿಲೆಗಳಿಂದ ಬಳಲುತ್ತಿದ್ದ. ದಂಪತಿಯ ಈ ಕಠಿಣ ನಿರ್ಧಾರಕ್ಕೆ ಮಗನ ದೇಹಸ್ಥಿತಿಯೇ ಕಾರಣ ಎಂದು ಪೊಲೀಸರು ಹೇಳಿರುವುದಾಗಿ ಲೇಬರ್ ಪಕ್ಷದ ಸಂಸದ ಭಾರತ ಮೂಲದ ನೀಲ್ ಕೊಯ್ಲ್ ಹೇಳಿದ್ದಾರೆ.

ಸಿಎಂ ಸುವೇಂದು ಸಭೆಯಲ್ಲಿ ಟಿಎಂಸಿ ಶಾಸಕಿ, ಸಂಸದರು

ಕೋಲ್ಕತ್ತ: ವಿಧಾನಸಭೆ ಚುನಾವಣೆಯ ಹೀನಾಯ ಸೋಲಿನಿಂದ ಕಂಗೆಟ್ಟ ತೃಣಮೂಲ ಕಾಂಗ್ರೆಸ್‌ನಲ್ಲೀಗ ಭಿನ್ನಮತ

ಭುಗಿಲೆದ್ದಿದೆ. ವಿಧಾನಸಭೆಯಲ್ಲಿ 59 ಶಾಸಕರು ಪ್ರತ್ಯೇಕ ಬಣವಾಗಿ ಗುರುತಿಸಿಕೊಂಡ ಬಳಿಕ, ಲೋಕಸಭೆ, ರಾಜ್ಯಸಭೆಯಲ್ಲಿನ ಸಂಸದರ ಸರದಿ ಶುರುವಾಗಿದೆ.

ಹಿರಿಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ನೇತೃತ್ವದಲ್ಲಿ ಟಿಎಂಸಿ ಪಕ್ಷದ 20 ಲೋಕಸಭಾ ಸದಸ್ಯರು ಸೋಮವಾರ ಬಿಜೆಪಿ ನೇತೃತ್ವದ ಎನ್‌ಡಿಎಗೆ ಬೆಂಬಲ ಘೋಷಿಸಿ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿರುವುದಾಗಿ ಹೇಳಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಮಂಗಳವಾರ ಕೋಲಾಘಾಟ್‌ನಲ್ಲಿ ನಡೆಸಿದ ಸಭೆಯಲ್ಲಿ ಟಿಎಂಸಿ ಭಿನ್ನಮತೀಯ ಸಂಸದರಾದ ಮೇದಿನಿಪುರ ಲೋಕಸಭಾ ಕ್ಷೇತ್ರದ ಸದಸ್ಯೆ ಜೂನ್ ಮಲಿಯಾ ಮತ್ತು ಘಾಟಲ್ ಕ್ಷೇತ್ರದ ಸಂಸದ ದೀಪಕ್ ಅಧಿಕಾರಿ(ದೇವ್) ಹಾಗೂ ಕೇಶ್‌ಪುರ ವಿಧಾನಸಭಾ ಕ್ಷೇತ್ರದ ಶಾಸಕಿ ಸಿಯುಲಿ ಸಹಾ ಭಾಗವಹಿಸಿದ್ದರು.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ, ಟಿಎಂಸಿ ಶಾಸಕ ಋತುಬ್ರತಾ ಬ್ಯಾನರ್ಜಿ ಬೆಂಬಲಿತ 59 ಭಿನ್ನಮತೀಯ ಎಂಎಲ್‌ಎಗಳಲ್ಲಿ ಸಿಯುಲಿ ಸಹಾ ಕೂಡಾ ಸೇರಿದ್ದಾರೆ.

ಶಾಸಕಾಂಗ ಪಕ್ಷದ ಉಪ ನಾಯಕಿಯೂ ಆಗಿರುವ ಸಿಯುಲಿ, ಜನ ಕಲ್ಯಾಣಕ್ಕಾಗಿ ಕೆಲಸ ಮಾಡುವುದು ನನ್ನ ಕರ್ತವ್ಯವಾಗಿದೆ. ಹಾಗಾಗಿಯೇ ಸಿಎಂ ಸಭೆಯಲ್ಲಿ ಭಾಗವಹಿಸಿದ್ದೇನೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇಂಡಿ ಒಕ್ಕೂಟದ ಸಭೆಯಲ್ಲಿ ಪರಸ್ಪರ ಆಲಿಂಗನ ಚಿತ್ರ ವೈರಲ್

ಸೋನಿಯಾ ಭೇಟಿಯಾದ ಮಮತಾ ದೀದಿ

ದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಸೋಲು, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಇಬ್ಭಾಗ, ಶಾಸಕರು-ಸಂಸದರ ಬಂಡಾಯ, ಸೋದರಳಿಯ ಸಂಸದ ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ, ತಾವೇ ಕರೆದ ಸಭೆಗೂ ಶಾಸಕ, ಸಂಸದರ ಗೈರು ಮೊದಲಾದ ಬೆಳವಣಿಗೆಗಳಿಂದ ಹತಾಶೆಗೆ ಒಳಗಾಗಿರುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ, ಅಚ್ಚರಿ ಎಂಬಂತೆ ದೆಹಲಿಯಲ್ಲಿ ಮಂಗಳವಾರ ಕಾಂಗ್ರೆಸ್ ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿದ್ದಾರೆ.

ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ಆಯೋಜಿತವಾಗಿದ್ದ ಪ್ರತಿ ಪಕ್ಷಗಳ 'ಇಂಡಿಯ' ಒಕ್ಕೂಟದ ಸಭೆಯಲ್ಲಿ ಸೋನಿಯಾ ಗಾಂಧಿ ಮತ್ತು ಮಮತಾ ಬ್ಯಾನರ್ಜಿ ಪರಸ್ಪರ ಆಲಂಗಿಸಿಕೊಂಡು ಆತ್ಮೀಯತೆ ಪ್ರದರ್ಶಿಸಿದ್ದ ಚಿತ್ರ-ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಅದರ ಮರುದಿನವೇ ಸೋನಿಯಾರನ್ನು ಅವರ ನಿವಾಸದಲ್ಲಿಯೇ ಮಮತಾ ಬ್ಯಾನರ್ಜಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಮುಂಬರುವ ದಿನಗಳಲ್ಲಿ ಕಾಂಗ್ರೆಸ್-ಟಿಎಂಸಿ ಒಟ್ಟಾಗಿ ಕೆಲಸ ಮಾಡುವ ಮತ್ತು ಸಂಸತ್ತಿನಲ್ಲಿ ಜಂಟಿ ಕಾರ್ಯತಂತ್ರ ರೂಪಿಸುವ ಕುರಿತು ಇಬ್ಬರೂ ನಾಯಕಿಯರು ಚರ್ಚಿಸಿದ್ದಾರೆ ಎಂದು ಮೂಲಗಳು

ಸೋಮವಾರದ ಇಂಡಿಯ ಒಕ್ಕೂಟ ಸಭೆಯಲ್ಲಿ ಸೋನಿಯಾ ಗಾಂಧಿ-ಮಮತಾ ಬ್ಯಾನರ್ಜಿ ಪರಸ್ಪರ ಅಪ್ಪಿಕೊಂಡು ಅಭಿನಂದಿಸಿದರು.

ತಿಳಿಸಿವೆ.

ಇನ್ನೊಂದೆಡೆ, ಟಿಎಂಸಿಯಲ್ಲಿನ ಬಂಡಾಯ, ಭಿನ್ನಮತ ದಿನೇ ದಿನೇ ಹೆಚ್ಚುತ್ತಲೇ ಇದೆ. ಟಿಎಂಸಿ ಹಿರಿಯ ನಾಯಕ ಸುಖೇಂದು ಶೇಖರ್ ರಾಯ್ ರಾಜ್ಯಸಭಾ ಸದಸ್ಯತ್ವ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಸಂಸದರಾದ ಪ್ರಸೂನ್ ಬ್ಯಾನರ್ಜಿ, ಶತಬ್ದಿ ರಾಯ್ ಸೇರಿ 19 ಸಂಸದರು ಕೇಂದ್ರ ಸಚಿವ-ಪಶ್ಚಿಮ ಬಂಗಾಳದ ಬಿಜೆಪಿ ಉಸ್ತುವಾರಿ ಭೂಪೇಂದ್ರ ಯಾದವ್ ಅವರ ನಿವಾಸದಲ್ಲಿ ಸಭೆ ನಡೆಸಿದ್ದಾರೆ.

ಹತ್ಯೆಯಾಗುವ ಭಯದಲ್ಲಿ ಪದತ್ಯಾಗ: ಟಿಎಂಸಿ ಸಂಸದ

ಕೊಲ್ಕತ್ತ: ನಾನು ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದಲ್ಲೇ ಮುಂದುವರಿದಿದ್ದರೆ ಸುಪಾರಿ ಕಿಲ್ಲರ್‌ಗಳು ನನ್ನನ್ನೂ ಕೊಲ್ಲುವ ಸಾಧ್ಯತೆಯಿತ್ತು ಎಂದು ಸೋಮವಾರವಷ್ಟೇ ಸಂಸದ ಸ್ಥಾನಕ್ಕೆ ರಾಜೀನಾಮೆ

ನೀಡಿ ಪಕ್ಷವನ್ನೂ ತೊರೆದಿರುವ ಒಂದು ಕಾಲದ ಮಮತಾ ಬ್ಯಾನರ್ಜಿ ಆಪ್ತ ಸುಖೇಂದು ಶೇಖರ್ ರಾಯ್ ಗಂಭೀರ ಆರೋಪ ಮಾಡಿದ್ದಾರೆ. ಸುಖೇಂದು ಶೇಖರ್ ರಾಯ್ ಅವರ ಈ ಹೇಳಿಕೆ ಪಶ್ಚಿಮ ಬಂಗಾಳದ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದೆ.

ಸುಖೇಂದು ಶೇಖರ್ ರಾಯ್ ಸುದೀರ್ಘ ಕಾಲ ಟಿಎಂಸಿ ಪಕ್ಷದ ಪ್ರಮುಖ ಧ್ವನಿಯಾಗಿದ್ದರು. ಮಾಧ್ಯಮ ಪ್ರತಿನಿಧಿಗಳ ಜತೆ ಮಂಗಳವಾರ ಮಾತನಾಡಿದ ಅವರು, ನಾನು ಪಕ್ಷದ ಕೆಲವು ನಿರ್ಧಾರಗಳನ್ನು ವಿರೋಧಿಸಿದ್ದೆ. ಟಿಎಂಸಿ ಸರಕಾರದಲ್ಲಿನ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲಾರಂಭಿಸಿದ್ದೆ. ಆಗಿನಿಂದ ನನ್ನನ್ನು ಗುರಿಯಾಗಿಟ್ಟುಕೊಳ್ಳಲಾಯಿತು. ಪಕ್ಷದಲ್ಲೇ ಮುಂದುವರಿದಿದ್ದರೆ ನನ್ನನ್ನು ಕೊಲ್ಲುವ ಸಾಧ್ಯತೆಯಿತ್ತು. ಸುರಕ್ಷತೆಗಾಗಿ ಆತ್ಮಸಾಕ್ಷಿಗೆ ತಕ್ಕಂತೆ ಸಂಸದ ಸ್ಥಾನ ಮತ್ತು ಪಕ್ಷಕ್ಕೆ ರಾಜೀನಾಮೆ ನೀಡಿ ಹೊರಬಂದೆ ಎಂದು ಹೇಳಿದ್ದಾರೆ.

ಕೊಲ್ಕತ್ತ ನಗರದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣ ನಡೆದಾಗ ಸುಖೇಂದು ಶೇಖರ್ ರಾಯ್, ಕೊಲ್ಕತ್ತ ಪೊಲೀಸ್ ಕಮಿಷನರ್‌ರನ್ನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಬೇಕು ಎಂದು ಬಹಿರಂಗವಾಗಿಯೇ ಆಗ್ರಹಿಸಿದ್ದರು. ಇದು ಪಕ್ಷದ ನಾಯಕತ್ವದ ಆಕ್ರೋಶಕ್ಕೆ ಕಾರಣವಾಗಿತ್ತು.

ವಿಶಾಖಪಟ್ಟಣಂ ಉಕ್ಕು ಕಾರ್ಖಾನೆ ಅವಘಡ-ಸ್ಥಳ ಪರಿಶೀಲನೆ, ಪರಿಹಾರ ಪ್ಯಾಕೇಜ್ ಘೋಷಣೆ

ಮೃತರ ಕುಟುಂಬಕ್ಕೆ ತಲಾ 25 ಲಕ್ಷ ರು. ಪರಿಹಾರ

ವಿಶಾಖಪಟ್ಟಣಂ: ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿನ ವೈಜಾಗ್ ಉಕ್ಕು ಕಾರ್ಖಾನೆಯಲ್ಲಿ ಸೋಮವಾರ ಕರಗಿದ ಲೋಹ ಸಾಗಿಸುವ ವೇಳೆ ಅವಘಡವಾಗಿ 8 ಕಾರ್ಮಿಕರು ಸಾವಿಗೀಡಾಗಿ ಹಲವರು ಗಾಯಗೊಂಡಿದ್ದು, ಕಾರ್ಖಾನೆಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತೆರಳಿ ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಪಡೆದುಕೊಂಡರು. ಬಳಿಕ ಆಸ್ಪತ್ರೆಗೆ ತೆರಳಿ ಗಾಯಾಳುಗಳನ್ನು ಮಾತನಾಡಿಸಿ ಧೈರ್ಯ ತುಂಬಿದರು. ಮೃತ ಕಾರ್ಮಿಕರ ಕುಟುಂಬದವರ ಜತೆಗೂ ಮಾತನಾಡಿ, ಪರಿಹಾರದ ಪ್ಯಾಕೇಜ್ ಘೋಷಿಸಿದರು.

ಅವಘಡದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ನೀಡುವ ಭರವಸೆ ನೀಡಿದರು. ಅಲ್ಲದೇ, 25 ಲಕ್ಷ ರು. ಪರಿಹಾರ ಧನ, ತೀವ್ರವಾಗಿ ಗಾಯಗೊಂಡಿರುವ ಕಾರ್ಮಿಕರಿಗೆ ತಲಾ 10 ಲಕ್ಷ ರು. ಪರಿಹಾರ ನೀಡಲಾಗುವುದು. ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನೂ ಕೇಂದ್ರ ಸರಕಾರವೇ ಭರಿಸಲಿದೆ ಎಂದು

ವಿಶಾಖಪಟ್ಟಣಂನಲ್ಲಿ ಉಕ್ಕು ಕಾರ್ಖಾನೆಗೆ ಸೋಮವಾರ ಸಂಜೆ ಭೇಟಿ ನೀಡಿದ್ದ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಜತೆ ಕೇಂದ್ರ ಸಚಿವ ರಾಮಮೋಹನ್ ನಾಯ್ಡು, ಆಂಧ್ರ ಗೃಹ ಸಚಿವೆ ವಂಗಲಪುಡಿ ಅನಿತಾ, ವಿಶಾಖಪಟ್ಟಣಂ ಸಂಸದ ಶ್ರೀ ಭರತ್ ಮತ್ತಿತರರಿದ್ದರು.

ಸಚಿವ ಕುಮಾರಸ್ವಾಮಿ ಭರವಸೆ ನೀಡಿದರು.

ಇದಿಷ್ಟೇ ಅಲ್ಲದೇ, ಮೃತ ಕಾರ್ಮಿಕರ ಕುಟುಂಬಗಳು ಸ್ಟೀಲ್ ಪ್ಲಾಂಟ್ ಟೌನ್‌ಷಿಪ್‌ನಲ್ಲಿನ ಮನೆಯನ್ನು ಸದ್ಯಕ್ಕೆ ತೆರವುಗೊಳಿಸಬೇಕಿಲ್ಲ. ಅವರು ಈಗಿರುವ ಮನೆಯಲ್ಲಿಯೇ ಮೃತ ಕಾರ್ಮಿಕನ ವಾಸ್ತವ ನಿವೃತ್ತಿ ದಿನ ಏನಿತ್ತೋ ಅಲ್ಲಿಯವರೆಗೂ ಯಥಾರೀತಿ ವಾಸಿಸಬಹುದು ಎಂದೂ ಸಚಿವರು ಭರವಸೆ ನೀಡಿದರು.

ಅದಲ್ಲದೇ ಮೃತ ಕಾರ್ಮಿಕರ ಮಕ್ಕಳು ವ್ಯಾಸಂಗ ಮಾಡುತ್ತಿದ್ದರೆ ಅವರ ವಿದ್ಯಾಬ್ಯಾಸದ ಪೂರ್ಣ ವೆಚ್ಚವನ್ನೂ ಉಕ್ಕು ಕಾರ್ಖಾನೆಯಿಂದಲೇ ಭರಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಗುತ್ತಿಗೆ ಕಾರ್ಮಿಕರಿಗೂ ಖಾಯಂ ಕಾರ್ಮಿಕರಿಗೆ ಸಿಗುತ್ತಿದ್ದಷ್ಟೇ ಮೊತ್ತವೇ ಪರಿಹಾರವಾಗಿ ನೀಡಲಾಗುವುದು ಎಂದೂ ಕುಮಾರಸ್ವಾಮಿ ಮೃತರ ಕುಟುಂಬದವರಿಗೆ ಭರವಸೆ ನೀಡಿದ್ದಾರೆ.

ಈ ಸಂದರ್ಭ ಕೇಂದ್ರ ಸಚಿವ ರಾಮಮೋಹನ್ ನಾಯ್ಡು, ಆಂಧ್ರ ಸರಕಾರದ ಗೃಹ ಸಚಿವೆ ವಂಗಲಪುಡಿ ಅನಿತಾ, ವಿಶಾಖಪಟ್ಟಣಂ ಸಂಸದ ಶ್ರೀ ಭರತ್, ಕಂಪನಿಯ ಉನ್ನತ ಅಧಿಕಾರಿಗಳು ಸಚಿವ ಕುಮಾರಸ್ವಾಮಿ ಅವರ ಜತೆಗಿದ್ದರು.

ಉಕ್ಕು ಕಾರ್ಖಾನೆ ₹1.72 ಕೋಟಿ ಪರಿಹಾರ: ಪವನ್

ವಿಶಾಖಪಟ್ಟಣಂ: 'ರಾಷ್ಟ್ರೀಯ ಇಸ್ಪತ್ ನಿಗಮ್ ಲಿ.'(ವಿಶಾಖಪಟ್ಟಣ ಉಕ್ಕು ಸ್ಥಾವರ)ದಲ್ಲಿ ಸೋಮವಾರ ಅಗ್ನಿ ಅವಘಡದಲ್ಲಿ ಮೃತಪಟ್ಟ ಕಾರ್ಖಾನೆಯ ಖಾಯಂ ಉದ್ಯೋಗಿಗಳ ಕುಟುಂಬಗಳಿಗೆ ರಾಜ್ಯ ಸರಕಾರದಿಂದ ತಲಾ 1.72 ಕೋಟಿ ರು. ಪರಿಹಾರ ಧನ ನೀಡಲಾಗುವುದು ಮತ್ತು ಗುತ್ತಿಗೆ ಕಾರ್ಮಿಕರ ಕುಟುಂಬಕ್ಕೆ ತಲಾ 45.75 ಲಕ್ಷ ರು. ಪರಿಹಾರ ನೀಡಲಾಗುವುದು. ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರು.ಗಳ ಎಕ್ಸ್ ಗ್ರೇಷಿಯ ಕೂಡಾ ಪಾವತಿಸಲಾಗುವುದು ಎಂದು ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಮಂಗಳವಾರ ಘೋಷಿಸಿದ್ದಾರೆ.

ಮೃತರ ಕುಟುಂಬದವರಲ್ಲಿ ಒಬ್ಬರಿಗೆ ಉದ್ಯೋಗ ಸಹ ನೀಡಲಾಗುವುದು ಮತ್ತು ತೀವ್ರವಾಗಿ ಗಾಯಗೊಂಡ ಕಾರ್ಮಿಕರಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಲಾಗುವುದು. ಈ ಪರಿಹಾರ ಪ್ಯಾಕೇಜ್‌ನಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ ದೊರೆಯಬೇಕಾದ ಎಲ್ಲಾ ಶಾಸನಬದ್ಧ ಮತ್ತು ಅಂತಿಮ ಪ್ರಯೋಜನಗಳನ್ನು ಒಳಗೊಂಡಿರುತ್ತದೆ. ಗಾಯಗೊಂಡ ಕಾರ್ಮಿಕರ ಪೂರ್ಣ ಚಿಕಿತ್ಸಾ ವೆಚ್ಚವನ್ನು ಆರ್‌ಐಎನ್‌ಎಲ್ ಭರಿಸಲಿದೆ. ಉಕ್ಕು ಸ್ಥಾವರ ನೌಕರರ ಮಕ್ಕಳ ಶಿಕ್ಷಣ ಅಡೆತಡೆಯಿಲ್ಲದೆ ಮುಂದುವರಿಯುತ್ತದೆ ಮತ್ತು ಮೃತ ಕಾರ್ಮಿಕರ ಮಕ್ಕಳಿಗೂ ಈ ಪ್ರಯೋಜನ ವಿಸ್ತರಿಸಲಾಗುವುದು ಎಂದು ಪವನ್ ಕಲ್ಯಾಣ್ ಹೇಳಿದರು.

ಸೋಮವಾರ ಸಂಜೆ ಕ್ರೇನ್ ಮೂಲಕ ಸಾಗಿಸುತ್ತಿದ್ದ ಕುದಿಯುತ್ತಿದ್ದ ಕರಗಿದ ಉಕ್ಕು ಕಾರ್ಮಿಕರ ಮೇಲೆ ಬಿದ್ದು ಎಂಟು ಕಾರ್ಮಿಕರು ಸಜೀವ ದಹನವಾಗಿದ್ದರು.

ಸಮಾಚಾರ ಸಣ್ಣದಲ್ಲ

ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ 29ಕ್ಕೆ

ಹೊಸಪೇಟೆ: ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್‌ಅಹಮದ್ ಅವರು ಇದೇ ಜೂನ್ 29 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಅಂದು ಮಧ್ಯಾಹ್ನ 12 ಗಂಟೆಗೆ ಆಯೋಗದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೇ ಮಾಹೆಯ ಅಲ್ಪಸಂಖ್ಯಾತರ ಕುಂದು ಕೊರತೆ ವಿಚಾರಣೆ ಸಭೆ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಜಿ ಆಹ್ವಾನ

ಹೊಸಪೇಟೆ: ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣದ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರ ಹುದ್ದೆಗಳಿಗೆ ಗೌರವ ಧನದ ಆಧಾರದ ಮೇಲೆ ಅರ್ಜಿ ಆಹ್ವಾನಿಸಲಾಗಿದೆ. ವಸತಿ ಶಾಲೆಗಳಲ್ಲಿ ಖಾಲಿ ಇರುವ ಕನ್ನಡ ವಿಷಯದಲ್ಲಿ 1, ಇಂಗ್ಲೀಷ್ 6, ಹಿಂದಿ 2, ಗಣಿತ 1, ವಿಜ್ಞಾನ 2, ದೈಹಿಕ ಶಿಕ್ಷಕ 1 ಹಾಗೂ ಗಣಕಯಂತ್ರ ಶಿಕ್ಷಕ 3 ಸೇರಿದಂತೆ ಒಟ್ಟು 16 ಅಥಿತಿ ಶಿಕ್ಷಕರ ಹುದ್ದೆಗಳಿಗೆ ಬಿ.ಎ, ಬಿ.ಇಡಿ, ಬಿ.ಎಸ್ಸಿ ಬಿ.ಇಡಿ, ಬಿ.ಪಿ.ಇಡಿ, ಬಿ.ಎಸ್.ಸಿ ಕಂಪ್ಯೂಟರ್, ಬಿ.ಸಿ.ಎ ಅರ್ಹತೆ ಹೊಂದಿರುವ ಶಿಕ್ಷಕರಿಂದ ಅರ್ಜಿ ಸಲ್ಲಿಸಬಹುದು. ವಸತಿ ಕಾಲೇಜುಗಳಲ್ಲಿ ಖಾಲಿ ಇರುವ ಕನ್ನಡ ಉಪನ್ಯಾಸಕರ ಹುದ್ದೆ 2, ಇಂಗ್ಲೀಷ್ 2, ಭೌತಶಾಸ್ತ್ರ 2, ರಸಾಯನಶಾಸ್ತ್ರ 2, ಗಣಿತ 1, ಗಣಕಯಂತ್ರ 2 ಹಾಗೂ ಜೀವಶಾಸ್ತ್ರ 1 ಸೇರಿದಂತೆ ಒಟ್ಟು 12 ಅಥಿತಿ ಉಪನ್ಯಾಸಕರ ಹುದ್ದೆಗಳಿಗೆ ಎಂ.ಎ, ಬಿ.ಇಡಿ, ಎಂ.ಎಸ್ಸಿ ಬಿ.ಇಡಿ, ಎಂ.ಸಿ.ಎ ವಿದ್ಯಾರ್ಹತೆ ಹೊಂದಿರುವ ಉಪನ್ಯಾಸಕರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಕರ್ನಾಟಕ ವಸತಿ ಶಿಕ್ಷಣದ ಸಂಸ್ಥೆಗಳ ಸಂಘದ ಸಮೀಪದ ಯಾವುದೇ ವಸತಿ ಶಾಲೆಗಳಲ್ಲಿ ಪಡೆದು ನಂತರ ಭರ್ತಿ ಮಾಡಿದ ಅರ್ಜಿಯನ್ನು ಜೂನ್ 15 ರೊಳಗಾಗಿ ಹತ್ತಿರದ ವಸತಿ ಶಾಲೆ ಅಥವಾ ಕಾಲೇಜ್ ನಲ್ಲಿ ಸಲ್ಲಿಸಬಹುದು.

ಬೆಲೆ ಏರಿಕೆ ನೀತಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ರಾಯಚೂರು: ಪೆಟ್ರೋಲ್, ಡಿಸೇಲ್ ಹಾಗೂ ಸಿಲೆಂಡರ್‌ದರ ಏರಿಕೆ ವಿರೋಧಿಸಿ ಕೇಂದ್ರ ಬಿಜೆಪಿ ಸರಕಾರದ ವಿರುದ್ದ ಜಿಲ್ಲಾ ಕಾಂಗ್ರೆಸ್ ಮುಖಂಡರು ನಗರದ ಡಾ.ಬಿ.ಆರ್‌ಅಂಬೇಡ್ಕರ್‌ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ವರ್ಷವಿಡೀ ವಿದೇಶ ಪ್ರವಾಸ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ. ಜನರಿಗೆ ಮಾತ್ರ ಪ್ರವಾಸಕ್ಕೆ ಹೋಗಬೇಡಿ ಎಂದು ಉಪದೇಶ ಮಾಡುತ್ತಿದ್ದಾರೆ. ಭ್ರಷ್ಟ ಬಿಜೆಪಿ ಸರ್ಕಾರ ದೇಶದ ಆಡಳಿತವನ್ನು ದುರ್ಬಲ ಗೊಳಿಸಿದೆ. ಜನರಿಗೆ ಯಾವುದೇ ಅನುಕೂಲಗಳನ್ನು ಮಾಡಿಕೊಡುತ್ತಿಲ್ಲ. ಎಲ್ ಪಿಜಿ ಸಿಲಿಂಡರ್, ರಸಗೊಬ್ಬರ, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ನಿರಂತರ ಏರಿಕೆಯಾಗುತ್ತಿದ್ದು, ಜನರು ಕಂಗಾಲಾಗಿದ್ದಾರೆ ಎಂದು ದೂರಿದರು. ಸಿಲಿಂಡರ್ಗೆ ನೀಡುತ್ತಿದ್ದ ಸಬ್ಸಿಡಿಯನ್ನು ಕೇಂದ್ರ ಸರಕಾರ ಹಿಂಪಡೆದಿದೆ. ಇದರಿಂದ ದೇಶದ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ. ಬಿಜೆಪಿಯವರು ಜನರ ಪರವಾಗಿ ಕೆಲಸ ಮಾಡುವ ಬದಲು ಜಾತಿ, ಧರ್ಮದ ಹೆಸರಿನಲ್ಲಿ ಜನರ ನಡುವೆ ವೈಮನಸ್ಸು ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು. ಕೂಡಲೇ ಕೇಂದ್ರ ಬಿಜೆಪಿ ಸರಕಾರ ಜನವಿರೋಧಿ ನೀತಿಯನ್ನು ನಿಲ್ಲಿಸಬೇಕು. ಮತ್ತು ಬೆಲೆ ಏರಿಕೆ ಮಾಡಿರುವುದನ್ನು ಇಳಿಸಬೇಕು ಇಲ್ಲವಾದಲ್ಲಿ ಮೂರುದಿನ ದಿನಗಳಲ್ಲಿ ಜನಸಾಮಾನ್ಯರೊಡನೇ ಕಾಂಗ್ರೆಸ್ ಪಕ್ಷದಿಂದ ಉಗ್ರವಾದ ಜನಾಂದೋಲನವನ್ನು ಹಮ್ಮಿಕೊಳ್ಳಲಾ ಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ ಪಾಟೀಲ್ ಇಟಗಿ, ಪ್ರಮುಖರಾದ ಕೆ.ಶಾಂತಪ್ಪ, ರುದ್ರಪ್ಪ ಅಂಗಡಿ, ಡಾ.ರಜಾಕ್ ಉಸ್ತಾದ, ಅಮರೇಗೌಡ ಹಂಚಿನಾಳ ಜಯಂತರಾವ್ ಪತಂಗೆ, ಅಬ್ದುಲ್ ಕರೀಂ, ಜಿ. ಇದ್ದರು.

ನಾನಾ ಬೇಡಿಕೆ ಈಡೇರಿಕೆಗೆ ಒತ್ತಾಯ

ಹೊಸಪೇಟೆ: 5 ತಿಂಗಳ ಬಾಕಿ ಇನ್ಸೆಂಟಿವ್ ಬಿಡುಗಡೆ ಹಾಗೂ ಇನ್ನಿತರ ಬೇಡಿಕೆಗಳಿಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ ನಡೆಸಿದರು. ಎಐಯುಟಿಯುಸಿಗೆ ಸಂಯೋಜನೆಗೊಂಡ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು. 5 ತಿಂಗಳ ಬಾಕಿ ಇನ್ಸೆಂಟಿವ್, 1 ತಿಂಗಳ ನಿಶ್ಚಿತ ಗೌರವ ಧನ ನೀಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಶಂಕರ್‌ನಾಯಕ್ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಡಾ. ಪ್ರಮೋದ್, ಒಂದು ತಿಂಗಳ ಹಿಂದೆ ಇದೇ ಸಮಸ್ಯೆ ಪರಿಹರಿಸಲು ಮನವಿ ನೀಡಲಾಗಿತ್ತು. ಇನ್ಸೆಂಟಿವ್ ಹಣ ರೂ.260 ಕೋಟಿ ಬಿಡುಗಡೆಯಾಗಿದೆ ಎಂದರು.

{ಸಿ.ಟಿ.ರವಿ } ಮಾಜಿ ಸಚಿವ

ಒಳ್ಳೆ ಕೆಲಸ ಮಾಡಿ ಎಂದು ರಾಜ್ಯ ಸರಕಾರಕ್ಕೆ ಶುಭ ಹಾರೈಸುತ್ತೇನೆ. ಖಾತೆ ಹಂಚಿಕೆ ಜವಾಬ್ದಾರಿ ಸಿಎಂ ಅವರದ್ದು. ರಾಜ್ಯದ ಆಡಳಿತದ ಮೇಲೆ ಪರಿಣಾಮ ಆಗುತ್ತದೆ. ಹಾಗಾಗಿ ಬೇಗ ಬಗೆಹರಿಸಿ. ಹಿಂದಿನ ಅವಧಿಯಂತೆ ಭ್ರಷ್ಟಾಚಾರ ಆಗದಂತೆ ತಡೆಯಿರಿ. ಭ್ರಷ್ಟಾಚಾರ ಕಡಿಮೆ ಮಾಡ್ತಿರೋ, ನಟ್ಟುಬೋಲ್ಟು ಟೈಟ್ ಮಾಡ್ತಿರೋ. ಮುಂದೆ ಜನರೇ ನಿಮ್ಮ ನಟ್ಟು ಬೋಲ್ಟು ಟೈಟ್ ಮಾಡ್ತಾರೆ.

ಸಮಾಜದ ಸ್ವಾಸ್ಥ್ಯಕ್ಕೆ ಕಂಟಕ | ಕಟ್ಟುನಿಟ್ಟಿನ ಕ್ರಮಕ್ಕೆ ಸಾರ್ವಜನಿಕರ ಒತ್ತಾಯ

ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚುತ್ತಿರುವ ಅಶ್ಲೀಲತೆ

ಶ್ರೀಕಾಂತ ಆರ್‌ಜಿ. ಲಿಂಗಸೂಗೂರು:

ಇಂದಿನ ಆಧುನಿಕ ಜಗತ್ತಿನಲ್ಲಿ ಬೆಳಗಿನ ಸೂರ್ಯೋದಯಕ್ಕಿಂತ ಮುಂಚೆ ನಮ್ಮ ಕಣ್ಣುಗಳು ತೆರೆದುಕೊಳ್ಳುವುದು ಮೊಬೈಲ್ ಪರದೆಯ ಮುಂದೆ. ಜ್ಞಾನ, ಮಾಹಿತಿ, ಸಂಪರ್ಕದ ಕ್ರಾಂತಿಯನ್ನೇ ಸೃಷ್ಟಿಸಿದ ಸಾಮಾಜಿಕ ಜಾಲತಾಣಗಳು ಇಂದು ಸದ್ದಿಲ್ಲದೆ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿವೆಯೇ? ಹೌದು ಎನ್ನುತ್ತದೆ ಇತ್ತೀಚಿನ ವಿದ್ಯಮಾನಗಳು. ಫೇಸ್ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್ನ ರೀಲ್ಸ್ ಮತ್ತು ಶಾರ್ಟ್ಸ್‌ಗಳಲ್ಲಿ ಹರಿದಾಡುತ್ತಿರುವ ಅಶ್ಲೀಲತೆ, ಅರೆಬೆತ್ತಲೆ ಪ್ರದರ್ಶನ ಹಾಗೂ ಅಸಭ್ಯ ಭಾಷೆಯ ಬಳಕೆ, ಇಂದು ಮಿತಿ ಮೀರುತ್ತಿದೆ. ಕೇವಲ ''ಲೈಕ್ಸ್'', ''ಶೇರ್ಸ್'' ಮತ್ತು ಹಣದ ಆಸೆಗಾಗಿ ನಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಡಿಜಿಟಲ್ ಮಾರುಕಟ್ಟೆಯಲ್ಲಿ ಹರಾಜಿಗಿಡಲಾಗುತ್ತಿದೆ ಎಂಬುದು ಸಾರ್ವಜನಿಕರ ಆಕ್ರೋಶವಾಗಿದೆ. ಸಾಮಾಜಿಕ ಜಾಲತಾಣಗಳು ತಂತ್ರಜ್ಞಾನಗಳ ಬಳಕೆದಾರನ ಮನಸ್ಥಿತಿಯನ್ನು ನಿಯಂತ್ರಿಸುತ್ತಿವೆ. ಒಮ್ಮೆ ಇಂತಹ

ಅಸಭ್ಯ ಪೋಸ್ಟ್‌ಗಳನ್ನು ವೀಕ್ಷಿಸಿದರೆ, ಜಾಲತಾಣಗಳು ಅಂತಹದ್ದೇ ವಿಷಯಗಳನ್ನು ಪದೇ ಪದೇ ಬಳಕೆದಾರರ ಪರದೆಯ ಮೇಲೆ ತಂದು ಸುರಿಯುತ್ತವೆ. ಇದರ ನೇರ ಪರಿಣಾಮ ಬೀರುತ್ತಿರುವುದು ಯುವ ಪೀಳಿಗೆ ಹಾಗೂ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ. ಜ್ಞಾನದ ಹಸಿವು ಮೂಡಬೇಕಾದ ವಯಸ್ಸಿನಲ್ಲಿ, ವಿಕೃತ ಕಾಮಪ್ರಚೋದಕ ವಿಷಯಗಳು ಅವರ ಮನಸ್ಸನ್ನು ಆವರಿಸಿಕೊಳ್ಳುತ್ತಿವೆ. ಇದು ಕೇವಲ ಮಾನಸಿಕ ವಿಕೃತಿಯನ್ನಷ್ಟೇ ಅಲ್ಲದೆ, ಸಮಾಜದಲ್ಲಿ ಸೈಬರ್‌ಅಪರಾಧಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಲು ಪ್ರೇರಣೆ ನೀಡುತ್ತಿದೆ. ನಮ್ಮ ದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 67 ಮತ್ತು 67ಅ ಅಡಿಯಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಅಶ್ಲೀಲತೆಯನ್ನು ಪ್ರಕಟಿಸುವುದು ಅಥವಾ ರವಾನಿಸುವುದು ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ಭಾರೀ ದಂಡ ವಿಧಿಸಬಹುದಾದ ಗಂಭೀರ ಅಪರಾಧವಾಗಿದೆ. ಆದಾಗ್ಯೂ, ಇಂತಹ ವಿಷಯಗಳು ರಾಜಾರೋಷವಾಗಿ ಹರಿದಾಡುತ್ತಿವೆ. ಸಂಭಾಷಣೆಗಳ ಮೂಲಕ ಕಾನೂನಿನ ಕಣ್ಣಿಗೆ ಮಣ್ಣೆರಚುವುದು. ಮತ್ತೊಂದೆಡೆ, ಸಾರ್ವಜನಿಕರಲ್ಲಿ ಈ ಕುರಿತು ಸೈಬರ್‌ದೂರು ನೀಡುವ ಜಾಗೃತಿ ತೀರಾ ಕಡಿಮೆಯಿದೆ. ಕೇವಲ ಕಾನೂನಿನಿಂದ ಮಾತ್ರ ಇದನ್ನು ತಡೆಯಲು ಸಾಧ್ಯವಿಲ್ಲ. ಪೋಷಕರು ತಮ್ಮ ಮಕ್ಕಳ ಡಿಜಿಟಲ್ ಹೆಜ್ಜೆಗುರುತುಗಳ ಮೇಲೆ ಕಣ್ಣಿಡಬೇಕು. ಮೊಬೈಲ್ ಸೆಟ್ಟಿಂಗ್ಸ್‌ನಲ್ಲಿ "Safe Search" ಮತ್ತು "Sensitive Content Control" ಆಯ್ಕೆಗಳನ್ನು ಕಡ್ಡಾಯವಾಗಿ ಬಳಸ ಬೇಕು. ಸರಕಾರವೂ ಸಹ ಸಾಮಾಜಿಕ ಮಾಧ್ಯಮ ಸಂಸ್ಥೆಗಳ ಮೇಲೆ ಕಠಿಣ ನಿಯಂತ್ರಣ ಹೇರಬೇಕಿದೆ. ಭಾರತೀಯ ಸಂಸ್ಕೃತಿ ಮತ್ತು ಕೌಟುಂಬಿಕ ಮೌಲ್ಯಗಳನ್ನು ಗಾಳಿಗೆ ತೂರಿ ಹಣ ಮಾಡುವ ಈ ಡಿಜಿಟಲ್ ಮಾಫಿಯಾಕ್ಕೆ ಬ್ರೇಕ್ ಹಾಕದಿದ್ದರೆ, ಮುಂದಿನ ಪೀಳಿಗೆ ದಿಕ್ಕೆಡುವುದು ಖಂಡಿತ. ಸಮಾಜದ ಸ್ವಾಸ್ಥ್ಯ ಕಾಪಾಡಲು ಈಗಲೇ ಕಟ್ಟುನಿಟ್ಟಿನ ಹೆಜ್ಜೆ ಇಡಬೇಕಾದ ಅನಿವಾರ್ಯತೆ ಇದೆ.

> **ಸರಕಾರ ಮತ್ತು ಪೊಲೀಸ್ ಇಲಾಖೆ ಸೈಬರ್‌ಗಸ್ತನ್ನು ಹೆಚ್ಚಿಸಬೇಕು. ಅಶ್ಲೀಲ ವಿಷಯಗಳನ್ನು ಪತ್ತೆಹಚ್ಚಲು ಸುಧಾರಿತ ಕೃತಕ ತಂತ್ರಜ್ಞಾನವನ್ನು ಬಳಸುವಂತೆ ಸೋಶಿಯಲ್ ಮೀಡಿಯಾ ಕಂಪನಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಸಮಾಜದ ಆರೋಗ್ಯ ಕಾಪಾಡಲು ಇಂತಹ ಅಶ್ಲೀಲತೆಗೆ ಕೂಡಲೇ ಬ್ರೇಕ್ ಹಾಕಬೇಕು.**
> **-ಆಂಜನೇಯ ಭಂಡಾರಿ, ಅಧ್ಯಕ್ಷರು,** ಕರವೇ, ಪ್ರವೀಣ ಕುಮಾರ ಶೆಟ್ಟಿ ಬಣ ಲಿಂಗಸೂಗೂರು

ಚೆಕ್ ಡ್ಯಾಂ ಒಡ್ಡು ಕುಸಿತ

ಹಿರೇಹಳ್ಳಕ್ಕೆ ನಿರ್ಮಾಣ ಮಾಡಿದ್ದ ಚೆಕ್ ಡ್ಯಾಂ ಪಕ್ಕದ ಒಡ್ಡಿ ಕಿತ್ತು ಹೋಗೊ, ಭಾರಿ ಪ್ರಮಾಣದ ಮಳೆ ನೀರು ಪಕ್ಕದ ಕೃಷಿ ಜಮೀನುಗಳಿಗೆ ನುಗ್ಗಿದೆ.

ಕೊಪ್ಪಳ: ತಾಲೂಕಿನ ಅಳವಂಡಿ ಗ್ರಾಮದ ಸಮೀಪದ ಅಜ್ಜಪ್ಪಯ್ಯನ ಮಠದ ಸಮೀಪದಲ್ಲಿ ಹಿರೇಹಳ್ಳಕ್ಕೆ ನಿರ್ಮಾಣ ಮಾಡಿದ್ದ ಚೆಕ್ ಡ್ಯಾಂ ಪಕ್ಕದ ಒಡ್ಡಿ ಕಿತ್ತು ಹೋಗೊ, ಭಾರಿ ಪ್ರಮಾಣದ ಮಳೆ ನೀರು ಪಕ್ಕದ ಕೃಷಿ ಜಮೀನುಗಳಿಗೆ ನುಗ್ಗಿದೆ.

ಅಳವಂಡಿ ಗ್ರಾಮದ ರೈತ ಚೌಡಪ್ಪ ಜಂತ್ಲಿ ಅವರ ಕಬ್ಬಿನ ತೋಟ ಹಾಗೂ ಚಂದ್ರಪ್ಪ ಜಂತ್ಲಿ ಅವರ ದಾಳಿಂಬೆ ತೋಟ ಜಲಾವೃತಗೊಂಡಿವೆ. ಹಿರೇಹಳ್ಳದ ಮೇಲ್ಭಾಗದಲ್ಲಿ ಮಳೆಯಾಗಿ, ಹಿರೇಹಳ್ಳ ಡ್ಯಾಂ ಭರ್ತಿ ಆಗಿದೆ. ಚೆಕ್ ಡ್ಯಾಂಗೆ ಒಳಹರಿವು ಹೆಚ್ಚಾಗಿ ಚೆಕ್ ಡ್ಯಾಂನ ಒಂದು ಭಾಗ ಸಂಪೂರ್ಣ ಕೊಚ್ಚಿ ಹೋಗಿದೆ. ನೀರಿನ ರಭಸಕ್ಕೆ ತೋಟದ ಮೇಲ್ಮಣ್ಣು ಕೊಚ್ಚಿ ಹೋಗಿದ್ದು, ಕೃಷಿ ಮಾಡುವುದು ಕಷ್ಟಕರವಾಗಿದೆ. ಇದರಿಂದ ಬೆಳಗಟ್ಟಿ-ಕವಲೂರು ರಸ್ತೆಯ ಘಟ್ಟಿರಡ್ಡಿಹಾಳ ಬಳಿಯ ಹಳ್ಳದ ಸೇತುವೆ ಮುಳುಗಿ ಕೆಲಕಾಲ ಸಂಚಾರ ಸ್ಥಗಿತಗೊಂಡಿತ್ತು.

ರೈತರಿಗೆ ಸಿಗದೆ ತಪ್ಪಿಸಿಕೊಳ್ಳುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಬಿತ್ತನೆ ಬೀಜಗಳ ಕೊರತೆಯಾಗದಂತೆ ಕ್ರಮಕೈಗೊಳ್ಳಿ

ಕೃಷಿ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಶಾಸಕ ಬಸನಗೌಡ ದದ್ದಲ್ ಮಾತನಾಡಿದರು.

ರಾಯಚೂರು: ತಾಲೂಕಿನ ಪ್ರತಿ ಹೋಬಳಿಯ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿಗಳು ಹಾಜರಿರಬೇಕು. ಒಂದು ವೇಳೆ ಅನಗತ್ಯವಾಗಿ ಇರದೇ ಇರುವುದು, ರೈತರ ಸಂಪರ್ಕಕ್ಕೆ ಸಿಗದಿರುವುದು ಕಂಡು ಬಂದಲ್ಲಿ ಅಂತಹ ಅಧಿಕಾರಿಗಳನ್ನ ಅಮಾನತು ಮಾಡಲು ಶಿಫಾರಸು ಮಾಡುವುದಾಗಿ ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ತಾಲೂಕಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಲಭ್ಯತೆ ಮತ್ತು ಪೂರೈಕೆ ಕುರಿತು ಕೃಷಿ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಈಗಾಗಲೇ ಮಳೆಗಾಲ ಆರಂಭವಾಗಿದ್ದು, ತಾಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಸಮರ್ಪಕವಾಗಿ ಬಿತ್ತನೆ ಬೀಜಗಳು ದೊರೆಯುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕಳೆದ ಬಾರಿ ಮಾರಾಟವಾದ ಬಿತ್ತನೆ ಬೀಜಗಳಿಗಿಂತ ಶೇ.10 ರಷ್ಟು ಹೆಚ್ಚಿನ ಬಿತ್ತನೆ ಬೀಜಗಳನ್ನು ತರಿಸಿಕೊಳ್ಳಬೇಕು. ರೈತರಿಗೆ ಬಿತ್ತನೆ ಬೀಜಗಳ ಕೊರತೆಯಾಗದಂತೆ ಸೂಕ್ತ ಕೈಗೊಳ್ಳುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯಿಂದ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಅಗತ್ಯವಿರುವ ಮಾಹಿತಿಯುಳ್ಳ ಪೋಸ್ಟರ್ಗಳನ್ನು ಬಿಡುಗಡೆಗೊಳಿಸಲಾಯಿತು.

ಸಭೆಯಲ್ಲಿ ಎಪಿಎಂಸಿ ಉಪಾಧ್ಯಕ್ಷ ಬಸೀರ್‌ಅಹ್ಮದ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ದೀಪಾ ಕುಲಕರ್ಣಿ, ಚನ್ನಬಸವ ನಾಯಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> **ಕಡ್ಡಾಯವಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜಗಳ ದರಪಟ್ಟಿ ನಾಮಫಲಕವನ್ನು ಅಳವಡಿಸಬೇಕು. ಜತೆಗೆ ರೈತರಿಗೆ ಮಾಹಿತಿ ಸಿಗುವಂತೆ ಸರಕಾರದ ಸಬ್ಸಿಡಿ ಪಟ್ಟಿಯನ್ನೂ ಹಾಕಿರಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಅಧಿಕಾರಿಗಳು ಇರದೇ ರೈತರು ಕರೆ ಮಾಡಿದರೂ, ಸ್ವೀಕರಿಸದೇ ನಿರ್ಲಕ್ಷ್ಯವಹಿಸಿದ್ದಲ್ಲಿ ಅಂತವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.**
> **- ಬಸನಗೌಡ ದದ್ದಲ್,** ಶಾಸಕ

ಸಸಿ ನೆಡುವುದು ಜನ್ಮಸಿದ್ಧ ಹಕ್ಕಾಗಿರಲಿ: ಶಾಸಕಿ

ಹರಪನಹಳ್ಳಿ ನಗರದ ಸ.ಹಿ.ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಸಸಿ ನೆಟ್ಟು ನೀರೆರೆದರು. ಎಂ.ವಿ.ಅಂಜಿವಪ್ಪ ಇತರರು ಇದ್ದರು.

ಹರಪನಹಳ್ಳಿ: ಸಸಿ ನೆಡುವುದು ಪ್ರತಿಯೊಬ್ಬ ನಾಗರಿಕರ ಜನ್ಮಸಿದ್ದ ಹಕ್ಕಾಗಿರಲಿ ವಿಶ್ವಪರಿಚರ ದಿನ ಪ್ರತಿವರ್ಷ ಕಳೆಯುತ್ತದೆ ಆದರೆ ಆ ಒಂದು ದಿನಕ್ಕೆ ಸಿಮಿತವಾಗದೇ ಪ್ರತಿ ದಿನ ಸಸಿ ನೆಡುವುದು ಪ್ರತಿಯೊಬ್ಬರ ಜೀವನಶೈಲಿಯಾಗಲಿ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಪ್ರತಿಪಾದಿಸಿದರು.

ಹರಪನಹಳ್ಳಿ ನಗರದಲ್ಲಿ ತಾಲೂಕು ಶಿಕ್ಷಣ ಇಲಾಖೆ,ತಾಲೂಕು ಪಂಚಾಯತಿ, ಹಾಗೂ ಅರಣ್ಯ ಇಲಾಖೆ ವತಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಪರಿಸರ, ಪಶು-ಪಕ್ಷಿಗಳು, ಮರಗಳು ಸಮೃದ್ಧವಾಗಿದ್ದರೆ ಮಾತ್ರ ಮನುಕುಲದ ಪ್ರಗತಿ ಸಾಧ್ಯ ಎಂದ ಅವರು ಈ ನಿಟ್ಟಿನಲ್ಲಿ ಎಲ್ಲರೂ ಸಸಿ ನೆಡುವ ಕಾಯಕ ರೂಡಿಸಿಕೊಳ್ಳಿ ಎಂದರು.

ಪುರಸಭೆ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಮಾತನಾಡಿ, ಗಿಡ ಮರಗಳನ್ನು ಮಕ್ಕಳಂತೆ ಪೋಷಿಸಿದಾಗ ಮಾತ್ರ ಪರಿಸರವನ್ನು ಹಸಿರುಕಣ ಮಾಡುವುದಕ್ಕೆ ಸಾಧ್ಯ ಗಿಡಗಳನ್ನು ಬೆಳೆಸಿದರೆ ಆರೋಗ್ಯಕ್ಕೂ ಒಳ್ಳೆಯದು ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಂ. ವಿ. ಅಂಜಿನಪ್ಪ, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಉದಯ್ ಶಂಕರ್ ,ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರ್‌ಗೌಡ್ರು, ನಗರ ಸಭೆ ಮಾಜಿ ಸದಸ್ಯ ರೆಹಮಾನ್ ಸಾಹೇಬ್, ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ್. ಪೈಲ್ವಾನ್ ಗಣೇಶ್ ಬಿಇಒ ಲೇಪಾಕ್ಷಪ್ಪ, ಇಒ ಚಂದ್ರಶೇಖರ, ಪಿಎಲ್ಡಿ ಬ್ಯಾಂಕಿನ ಅಧ್ಯಕ್ಷ ಲಾಟಿ ದಾದಾಪಿರ್, ಹುಲಿಕಟ್ಟೆ ಚಂದ್ರಪ್ಪ, ಚಿಕ್ಕೇರಿ ಬಸಪ್ಪ, ಆರ್. ಶಶಿಕುಮಾರ್‌ನಾಯ್ಕ, ಮೈದೂರು ರಾಮಪ್ಪ,ಅಶೋಕ್ ಅಗ್ರಹಾರ, ಮುಖ್ಯ ಶಿಕ್ಷಕ ಅರ್ಜುನ ಪರಸಪ್ಪ, ವಲಯ ಅರಣ್ಯಾಧಿಕಾರಿ ರಾಜು ಗೊಂದೇಕರ್ ,ಮಾದಾಪುರ ಶಾಲಾಮುಖ್ಯ ಶಿಕ್ಷಕಿ ಗುಣವತಿ, ಶಿಕ್ಷಕ ಬಿ. ರಾಜಶೇಖರ್, ಮತ್ತೂರು ಬಸವರಾಜ, ಸಾಸ್ವಿಹಳ್ಳಿ ನಾಗರಾಜ, ಎನ್.ಶಂಕರ, ಅಲಗಿಲವಾಡದ ಶಂಕರ,ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು , ಇದ್ದರು.

ಪರಿಸರ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ

ಹೂವಿನಹಡಗಲಿ ತಾಲ್ಲೂಕಿನ ಸೋಗಿ ಗ್ರಾಮದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟ ಮತ್ತು ನಿವೃತ್ತ ನೌಕರರ ಸೇವಾ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ.

ಹೂವಿನಹಡಗಲಿ: ಪರಿಸರ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ನಿವೃತ್ತ ನೌಕರರ ಸೇವಾ ಟ್ರಸ್ಟ್ ಅಧ್ಯಕ್ಷ ಯಾತೀರಪ್ಪ ಹೇಳಿದರು.

ಸಂಜೀವಿನಿ ಮಹಿಳಾ ಒಕ್ಕೂಟ ಮತ್ತು ನಿವೃತ್ತ ನೌಕರರ ಸೇವಾ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರುವ ಉದ್ದೇಶದಿಂದ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಗೌರವಾಧ್ಯಕ್ಷ ಗಡ್ಡಿ ಪತ್ರೆಪ್ಪ ಮಾತನಾಡಿ, ಪರಿಸರ ಸಂರಕ್ಷಣೆಯ ಮಾಡುವ ಮೂಲಕ ಜೀವ ಜಗತ್ತನ್ನು ಉಳಿಸಬೇಕಾಗಿದೆ ಎಂದರು.

ಗ್ರಾಮದ ಎಲ್ಲಮ್ಮನ ದೇವಸ್ಥಾನದ ಅಭಿವೃದ್ಧಿ ಹಾಗೂ ಪುನರ್ನಿರ್ಮಾಣ ಕಾರ್ಯಗಳ ಕುರಿತು ಮಾಹಿತಿ ನೀಡಿ, ಸಾರ್ವಜನಿಕರ ಸಹಕಾರ ಅಗತ್ಯವೆಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಪಿಡಿಒ ಪ್ರಭಾಕರ್‌ಅವರು ಪರಿಸರ ಸಂರಕ್ಷಣೆ, ಸ್ವಚ್ಛತೆ ಹಾಗೂ ಗಿಡಮರಗಳ ಮಹತ್ವದ ಕುರಿತು ಜಾಗೃತಿ ಮೂಡಿಸಿದರು. ಸಂಜೀವಿನಿ ಮಹಿಳಾ ಒಕ್ಕೂಟದ ನೂತನ ಅಧ್ಯಕ್ಷೆ ಯಶೋಧಾ ಮಾತನಾಡಿ, ಮಹಿಳೆಯರ ಉದ್ಯೋಗಾವಕಾಶಗಳನ್ನು ಸರಿಯಾಗಿ ಬಳಸಿಕೊಡು ಸ್ವಾವಲಂಬನೆ ಬದಕನ್ನು ಕಟ್ಟಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಅತಿಥಿಗಳು ಸೇರಿ ಪರಿಸರವನ್ನು ಉಳಿಸಿ, ಬೆಳೆಸಿ ಮತ್ತು ಸಂರಕ್ಷಿಸುತ್ತೇವೆ ಎಂಬ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಅಧ್ಯಕ್ಷೆ ಶ್ರೀಮತಿ ಯಶೋದಾ, ಉಪಾಧ್ಯಕ್ಷೆ ಕಾಳಮ್ಮ, ಕಾರ್ಯದರ್ಶಿ ಎನ್.ಎಂ.ಶೋಭಾ, ಖಜಾಂಚಿ ಶ್ರೀಮತಿ ಸವಿತಾ ಟಿ, ಸಹ ಕಾರ್ಯದರ್ಶಿ ಶ್ರೀಮತಿ ಮೈಲಮ್ಮ, ಒಕ್ಕೂಟದ ಎಲ್ಲಾ ಸದಸ್ಯರು, ಗ್ರಾಮ ಪಂಚಾಯಿತಿ ಅಧಿಕಾರಿ ವರ್ಗದವರು, ನಿವೃತ್ತ ನೌಕರರ ಸೇವಾ ಟ್ರಸ್ಟ್ನ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಣ್ಣ ನೀರಾವರಿ ಗಣತಿ ಶೀಘ್ರ ಪೂರ್ಣಗೊಳಿಸಿ

ಹೊಸಪೇಟೆ: ಜಿಲ್ಲೆಯಲ್ಲಿ ಪ್ರಗತಿ ಕುಂಠಿತಗೊಂಡಿರುವ 7ನೇ ಸಣ್ಣ ನೀರಾವರಿ ಹಾಗೂ 2ನೇ ನೀರಿನಾಸರೆ ಗಣತಿಯನ್ನು ಸರ್ಕಾರದ ನಿರ್ದೇಶನದಂತೆ ಜೂನ್ 15ರ ಒಳಗಾಗಿ ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ನಿರ್ದೇಶಿಸಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆದ ಅಂಕಿ ಸಂಖ್ಯೆ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ತಹಸಿಲ್ದಾರರೊಂದಿಗೆ ಸೂಕ್ತ ಸಮನ್ವಯ ಸಾಧಿಸಿ, ನಿಗದಿತ ಅವಧಿಯೊಳಗೆ ಗಣತಿ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು. ಪ್ರಕೃತಿ ವಿಕೋಪ, ಬರಗಾಲ ಅಥವಾ ಕೀಟಬಾಧೆಯಿಂದ ಬೆಳೆ ನಷ್ಟ ಉಂಟಾದಾಗ ರೈತರಿಗೆ ವಿಮಾ ಸೌಲಭ್ಯ ಮತ್ತು ಪರಿಹಾರ ಸಿಗಬೇಕಾದರೆ ಬೆಳೆ ಕಟಾವು ಪ್ರಯೋಗ ಅಂಕಿ-ಅಂಶಗಳು ನಿಖರವಾಗಿರಬೇಕು. ತಪ್ಪು ಲೆಕ್ಕಾಚಾರಗಳಿಂದಾಗಿ ಯಾವೊಬ್ಬ ರೈತನಿಗೂ ಅನ್ಯಾಯವಾಗಬಾರದು ಎಂದು ಎಚ್ಚರಿಸಿದರು. ಜಿಲ್ಲೆಯಾದ್ಯಂತ ಬೆಳೆ ಕಟಾವು ಪ್ರಯೋಗಗಳನ್ನು ನಿಯಮಾನುಸಾರ ಅತ್ಯಂತ ಪಾರದರ್ಶಕವಾಗಿ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆದ ಅಂಕಿ ಸಂಖ್ಯೆ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಮಾತನಾಡಿದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಎನ್. ಕೆ.ಪತ್ರಿಬಸಪ್ಪ, ರೇಷ್ಮೆ ಇಲಾಖೆ ಉಪನಿರ್ದೇಶಕ ಶ್ರೀಹರ್ಷ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಪ್ರಭುರಾಜ, ಜಿ.ಪಂ.ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಶವ ಪತ್ತೆ: ವಾರುಸದಾರರ ಪತ್ತೆಗೆ ಮನವಿ

ಹೊಸಪೇಟೆ: ಬುಕ್ಕಸಾಗರದ ಕಡೆಬಾಗಿಲು ರಸ್ತೆ ತುಂಗಭದ್ರ ನದಿಯ ಮಧ್ಯದಲ್ಲಿ ಸುಮಾರು 40 ವರ್ಷದ ಅಪರಿಚಿತ ಶವ ಪತಯ್ತೆಯಾಗಿದ್ದು, ಈ ಕುರಿತು ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿಯು ಸುಮಾರು 5 ಎತ್ತರ ಹಾಗೂ ಗೋದಿ ಬಣ್ಣ ಸಾದಾರಣ ಮೈಕಟ್ಟು ಹೊಂದಿದ್ದು, ನಶಿಪುಡಿ ಬಣ್ಣದ ಚಡ್ಡಿ ಧರಿಸಿದ್ದಾನೆ. ಈ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ವಿಜಯನಗರ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ: 9480805700, ಎಸ್ಪಿ ಮೊ.ಸಂ: 9480805701, ಹೆಚ್ಚುವರಿ ಎಸ್ಪಿ ಮೊ.ಸಂ: 9480805702, ಡಿಎಸ್ಪಿ ಮೊ. ಸಂ: 9480805720 ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಟ್ಟ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆ: ಕೊಲೆ ಶಂಕೆ

ಕನಕಗಿರಿ: ಪಟ್ಟಣದ 5ನೇ ವಾರ್ಡ್ ನಲ್ಲಿನ ಸಂಗಪ್ಪ ಎಂಬುವರ ನಿರ್ಮಾಣ ಹಂತದಲ್ಲಿನ ಮನೆಯ 3ನೇ ಮಹಡಿಯಲ್ಲಿ ಮಹಿಳೆಯೊಬ್ಬರ ಶವ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೃತ ದೇಹದ ಗುರುತು ಪತ್ತೆ ಯಾಗಿಲ್ಲ. ಕೊಲೆಯೋ? ಆತ್ಮಹತ್ಯೆಯೋ? ಎಂಬ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಶವ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಗುರುತು ಪತ್ತೆಯಾಗಿಲ್ಲ. ಸೋಮವಾರ ರಾತ್ರಿ ಶವಕ್ಕೆ ಬೆಂಕಿಯಲ್ಲಿ ಉರಿಯುತ್ತಿರುವಾಗಲೇ ನೆರೆ ಮನೆಯ ಸಾರ್ವಜನಿಕರು ಮನೆ ಕಡೆಗೆ ದೌಡಾಯಿಸಿದ್ದಾರೆ. ಮಂಗಳವಾರ ಬೆಳಗ್ಗೆಯಿಂದ ಪೊಲೀಸರು ಮತ್ತು ಸೊಕೋ ತಂಡದ ಸಿಬ್ಬಂದಿ ತನಿಖೆ ಮಾಡಿದ್ದಾರೆ. ಮಹಿಳೆಯ ಗುರುತು ಪತ್ತೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ. ಕನಕಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಶವ ಪತ್ತೆ ಆಗಿರುವ ಮನೆ ಮಾಲೀಕ ಸಂಗನಗೌಡ ಅವರ ದೂರು ಆಧರಿಸಿ, ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕನಕಗಿರಿ ಪಿಐ ನಾರಾಯಣ ರಜೆಯಲ್ಲಿ ಇರುವ ಹಿನ್ನೆಲೆ ಕಾರಟಗಿ ಪಿಐ ಸುಧೀರ ಬೆಂಕಿ ಅವರು ಸ್ಥಳಕ್ಕೆ ಆಗಮಿಸಿ, ಸ್ಥಳ ಪಂಚನಾಮೆ ಮಾಡಿದರು. ನಂತರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಯಿತು. ತನಿಖೆ ಚುರುಕುಗೊಳಿಸಿರುವ ಪೊಲೀಸರು ಕೊಪ್ಪಳ ನಗರದಲ್ಲಿನ ಎಲ್ಲ ಸಿಸಿ ಕ್ಯಾಮೆರಾಗಳನ್ನು ಪರೀಕ್ಷೆ ಮಾಡುತ್ತಿದ್ದಾರೆ.

ಕನಕಗಿರಿಯ ನಿರ್ಮಾಣ ಹಂತದಲ್ಲಿನ ಮನೆಯಲ್ಲಿ ಮಹಿಳೆ ಶವ ಪತ್ತೆಯಾಗಿದ್ದು, ಪೊಲೀಸರು ತನಿಖೆ ಮಾಡಿದರು.

ಚುಕ್ಕಿ ಪ್ರತಿಷ್ಠಾನದಿಂದ ಬಸವ ತತ್ವ ಚಿಂತನಾಗೋಷ್ಠಿ ನಾಳೆ

ರಾಯಚೂರು: ಉಮಾಪತಿ ಚುಕ್ಕಿ ಅವರ 50 ನೇ ವರ್ಷ ಸುವರ್ಣ ಸ್ಮರಣೋತ್ಸವ ಹಾಗೂ ಬಸವ ತತ್ವ ಚಿಂತನಾಗೋಷ್ಠಿಯನ್ನು ಜೂ.11 ರಂದು ಚುಕ್ಕಿ ಪ್ರತಿಷ್ಠಾನ ಸಿರವಾರದಿಂದ ಚುಕ್ಕಿ ರುದ್ರಮ್ಮ ಉಮಾಪತೆಪ್ಪ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 9 ರಿಂದ ಸಂಜೆ 6 ಗಂಟೆವರೆಗೆ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಚುಕ್ಕಿ ಸೂಗಪ್ಪ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8.30 ಕ್ಕೆ ಶ್ರೀ ಬಸವವಾದಿ ಶರಣರ ಪೂಜೆ ನಂತರ ದಾವಣೆಗೆರೆ ಬಸವ ಕಲಾ ಬಳಗದಿಂದ ವಚನ ಭಜನೆಯೊಂದಿಗೆ ಶ್ರೀ ವಿಶ್ವಗುರು ಬಸವಣ್ಣನವರ ಭಾವಚಿತ್ರ ಮೆರವಣಿಗಗೆ ನಡೆಯಲಿದೆ. ಬೆಳಗ್ಗೆ 9.30 ಕ್ಕೆ ಷಟಸ್ಥಲ ಧ್ವಜಾರೋಹಣ ನೇರವೆರುತ್ತದೆ. ನಂತರ ಶರಣಪ್ಪ ಗೋನಾಳ ತಂಡದಿಂದ ವಚನಗಾಯನ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಬಸವತತ್ವ ಚಿಂತನಾ ಗೋಷ್ಟಿ ನಡೆಯಲಿದ್ದು, ವಿಷಪೂರಿತ ಸನ್ನಿವೇಶದಲ್ಲಿ ಬಸವತತ್ವ ಅವಶ್ಯಕತೆ, ಬಸವತತ್ವ ಮುಟ್ಟಿಸುವಲ್ಲಿ ಸಫಲತೆ, ವಿಫಲತೆ ಮುಂದಿನ ನಡೆಯ ಕುರಿತು ಸಂವಾದ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ಮಾಜಿ ಸಚಿವ ಎನ್ ಎಸ್ ಬೋಸರಾಜು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಆಳಂದ ಶ್ರೀ ಜಗದ್ಗುರು ತೋಂಟದ ಸಿದ್ದೇಶ್ವರ ಅನುಭವ ಮಂಟಪದ ಶ್ರೀ ವಿಶ್ವನಾಥ ಕೋರಣೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಅತಿಥಿಗಳಾಗಿ ಶಾಸಕ ಹಂಪಯ್ಯ ನಾಯಕ ಸಾಹುಕಾರ, ಸಂಸದ ಜಿ.ಕುಮಾರನಾಯಕ, ಬೀದರ ಜಾಗತಿಕ ಮಹಾಸಭಾದ ಜಿಲ್ಲಾಧ್ಯಕ್ಷ ಬಸವರಾಜ ಧನ್ನೂರು, ಡಾ.ಜೆ.ಎಸ್ .ಪಾಟೀಲ್, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಜ್ಯೋತಿ ಅಕ್ಕ, ರಾಯಚೂರು ಬಸವ ಕೇಂದ್ರ ಅಧ್ಯಕ್ಷ ರಾಚನಗೌಡ ಕೋಳೂರು, ವೀರಶೈವ ಸಮಾಜದ ಅಧ್ಯಕ್ಷ ಶರಣಭೂಪಾಲ ನಾಡಗೌಡ, ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಆಶಾ ಕಾರ್ಯಕರ್ತೆಯರಿಂದ ವೈದ್ಯಾಧಿಕಾರಿಗಳಿಗೆ ಮನವಿ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

ಯಲಬುರ್ಗಾ: ಎಐಯುಟಿಯುಸಿ ನೇತೃತ್ವದ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ, ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಾಲೂಕಿನ ಆಶಾ ಕಾರ್ಯಕರ್ತೆಯರು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಕುಕನೂರು, ಮುಧೋಳ, ಬನ್ನಿಕೊಪ್ಪ, ಸಂಗನಾಳ ಸೇರಿ ತಾಲೂಕಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿದ ಆಶಾ ಕಾರ್ಯಕರ್ತೆಯರು, ತಮ್ಮ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಗಮನ ಸೆಳೆದರು. ಕೇಂದ್ರ ಸರ್ಕಾರದ ಅನುಮೋದನೆ ಹಾಗೂ ಅನುದಾನ ಇಲ್ಲದ 9 ಚಟುವಟಿಕೆಗಳ ಪ್ರೋತ್ಸಾಹಧನಕ್ಕೆ ಸಂಬಂಧಿಸಿದ ಪ್ರಮುಖ ಮಾಡ್ಯೂಲ್ಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯಗೊಳಿಸಲಾಗಿದೆ. ಈ ಚಟುವಟಿಕೆಗಳಿಗೆ ಸರಕಾರದಿಂದ ಅನುಮೋದನೆ ಮತ್ತು ಅನುದಾನ ದೊರೆಯುವವರೆಗೆ ಸಂಬಂಧಿಸಿದ ಕೆಲಸಗಳನ್ನು ಆಶಾ ಕಾರ್ಯಕರ್ತೆಯರು ಮಾಡುವುದಿಲ್ಲ ಮನವರಿಕೆ ಮಾಡಿದರು.

ಗ್ರಾಮೀಣ ಭಾಗದ ಜನರಿಗೆ ಆರೋಗ್ಯ ಸೇವೆ ನೀಡುವಲ್ಲಿ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಆದರೆ, ಆಶಾಗಳಿಗೆ ನೀಡುವ ಪ್ರೋತ್ಸಾಹಧನ ತೀರಾ ಕಡಿಮೆ ಇದೆ. ಬಾಕಿ ಪ್ರೋತ್ಸಾಹಧನ ಮತ್ತು ಗೌರವಧನ ಕೂಡಲೇ ಬಿಡುಗಡೆ ಮಾಡಬೇಕು. ಕೆಲಸದ ಒತ್ತಡಕ್ಕೆ ತಕ್ಕಂತೆ ಸೂಕ್ತ ವೇತನ, ಸಾಮಾಜಿಕ ಭದ್ರತೆ, ಆರೋಗ್ಯ ವಿಮೆ ಹಾಗೂ ನಿವೃತ್ತಿ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಆಶಾ ಕಾರ್ಯಕರ್ತೆಯರ ನ್ಯಾಯ ಸಮ್ಮತ ಬೇಡಿಕೆಯನ್ನು ಸರಕಾರ ಕೂಡಲೇ ಈಡೇರಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನದಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಸಂಘದ ಮುಖಂಡರು ಎಚ್ಚರಿಕೆ ನೀಡಿದರು. ಸಂಘಟನೆ ಮುಖಂಡರಾದ ಅನ್ನಪೂರ್ಣ, ಶಿವಮ್ಮ, ದೇವಕ್ಕ, ಲತಾ, ಗೀತಾ, ಅಕ್ಕಮಹಾದೇವಿ, ಲಕ್ಷ್ಮಿ, ವಿಜಯಲಕ್ಷ್ಮಿ, ಶಶಿಕಲಾ, ಕರಿಯಮ್ಮ, ಅಲಿಮಾ, ಶರಣಮ್ಮ, ಪದ್ಮಾವತಿ, ನೀಲವ್ವ, ಲಕ್ಷ್ಮೀದೇವಿ ಸೇರಿ ಅನೇಕ ಆಶಾ ಕಾರ್ಯಕರ್ತೆಯರು ಇದ್ದರು.

ಯಲಬುರ್ಗಾ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ, ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿಆಶಾ ಕಾರ್ಯಕರ್ತೆಯರು ಮಂಗಳವಾರ ಮನವಿ ಸಲ್ಲಿಸಿದರು.

> **ಆಶಾ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಸರಕಾರ ಸ್ಪಂದಿಸಬೇಕು. ಹಲವು ವರ್ಷಗಳಿಂದ ಆರೋಗ್ಯ ಇಲಾಖೆಯ ವಿವಿಧ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರಿಗೆ ನ್ಯಾಯಯುತ ಸೌಲಭ್ಯಗಳನ್ನು ಒದಗಿಸಬೇಕು.**
> **-ಶಂಕ್ರಮ್ಮ ಹಳ್ಳಿಕೇರಿ,** ತಾಲೂಕು ಅಧ್ಯಕ್ಷೆ

ಪೆನಾಲ್ಟಿ ಕಾರ್ನರ್

8 ಜೋಡಿ ಸಹೋದರರು





ಮೆಕ್ಸಿಕೊ: ಈ ಬಾರಿಯ ಫಿಫಾ ಪಂದ್ಯಾವಳಿಯಲ್ಲಿ ಒಟ್ಟು 8 ಜೋಡಿ ಸಹೋದರರು ಕಣಕ್ಕಿಳಿಯುತ್ತಿದ್ದಾರೆ. ಫುಟ್ಬಾಲ್ ಇತಿಹಾಸದಲ್ಲಿ ಇದು ಅತ್ಯಂತ ಅಪರೂಪದ ಘಟನೆಯಾಗಿದೆ. 8 ಸಹೋದರರ ನಾಲ್ಕು ಜೋಡಿಗಳು ಒಂದೇ ತಂಡಕ್ಕಾಗಿ ಆಡುತ್ತಾರೆ. ಇನ್ನುಳಿದ ನಾಲ್ಕು ಜೋಡಿಗಳು ವಿಭಿನ್ನ ದೇಶಗಳನ್ನು ಪ್ರತಿನಿಧಿಸುತ್ತಿದ್ದಾರೆ. ರಾಷ್ಟ್ರೀಯತೆ ಮತ್ತು ವೈಯಕ್ತಿಕ ಆಯ್ಕೆಗಳ ಕಾರಣದಿಂದ ಅವರು ಬೇರ್ಪಟ್ಟಿದ್ದಾರೆ. ಗ್ವೆಲಾ ನಡುವೆ ಐವರಿ ಕೋಸ್ಟ್ ತಂಡದ ರಕ್ಷಣಾ ಆಟಗಾರರಾಗಿದ್ದಾರೆ, ಅವರ ಸೋದರ ಡೆಸಿರೆ ಫ್ರಾನ್ಸ್ ಪರ ಕಣಕ್ಕಿಳಿಯುತ್ತಾರೆ. ಇನಾಕಿ ವಿಲಿಯಮ್ಸ್ ಘಾನಾ ತಂಡದ ಪ್ರಮುಖ ಆಟಗಾರರಾಗಿದ್ದಾರೆ. ಅವರ ಸಹೋದರ ನಿಕೋ ವಿಲಿಯಮ್ಸ್ ಸ್ಪೇನ್ ತಂಡದ ವಿಂಗರ್ ಆಗಿ ಆಡುತ್ತಿದ್ದಾರೆ. ಈ ಸಹೋದರರು ವಿಭಿನ್ನ ರಾಷ್ಟ್ರಗಳ ಜೆರ್ಸಿ ಧರಿಸಿ ಈ ವಿಶ್ವಕಪ್ ಫುಟ್ಬಾಲ್‌ನಲ್ಲಿ ಕಣಕ್ಕಿಳಿಯುತ್ತಿರುವುದು ನಿಜಕ್ಕೂ ವಿಶೇಷವಾಗಿದೆ.

ನೇಮರ್ ಮರಳಿ ತಂಡಕ್ಕೆ



ಮೆಕ್ಸಿಕೋ: ಎರಡೂವರೆ ವರ್ಷಗಳಿಗೂ ಹೆಚ್ಚು ಕಾಲ ಫುಟ್ಬಾಲ್‌ನಿಂದ ಹೊರಗುಳಿದಿದ್ದ ಸೂಪರ್‌ಸ್ಟಾರ್ ನೇಮರ್ ಬ್ರೆಜಿಲ್ ರಾಷ್ಟ್ರೀಯ ಫುಟ್ಬಾಲ್ ತಂಡಕ್ಕೆ ವಾಪಸ್ ಆಗಿದ್ದಾರೆ. ಬ್ರೆಜಿಲ್ ಪರ 128 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಅತೀ ಹೆಚ್ಚು ಗೋಲು ಗಳನ್ನು (79 ಗೋಲುಗಳು) ಗಳಿಸಿರುವ ನೇಮಾರ್, ಕೊನೆಯ ಬಾರಿಗೆ ಬ್ರೆಜಿಲ್ ಜೆರ್ಸಿಯನ್ನು ಅಕ್ಟೋಬರ್ 2023ರಲ್ಲಿ ಧರಿಸಿದ್ದರು, ನಂತರ ಅವರು ಗಂಭೀರ ಗಾಯದಿಂದ ಇಷ್ಟೊಂದು ದಿನ ಮೈದಾನ ದಿಂದ ಹೊರಗುಳಿದಿದ್ದರು. ಕಳೆದ ವರ್ಷ ಜನವರಿ ಯಲ್ಲಿ ತಮ್ಮ ಹಳೆಯ ಕ್ಲಬ್ ಸ್ಯಾಂಟೋಸ್‌ಗೆ ಮರಳಿದ್ದ ನೇಮಾರ್, ಗಾಯದ ನಡುವೆಯೂ 38 ಪಂದ್ಯಗಳಲ್ಲಿ 17 ಗೋಲುಗಳನ್ನು ಕಲೆ ಹಾಕಿದ್ದರು. ಬ್ರೆಜಿಲ್ ಮ್ಯಾನೇಜ್‌ಮೆಂಟ್ ಮುಖ್ಯವಾಗಿ ನೇಮಾರ್ ಅವರ ಪ್ರಸ್ತುತ ಫಾರ್ಮ್‌ಗಿಂತ ಅವರ ಅನುಭವ ಮತ್ತು ಫಿಟ್ನೆಸ್ ಅನ್ನು ಮೌಲ್ಯಮಾಪನ ಮಾಡಿ ತಂಡಕ್ಕೆ ಕರೆತಂದಿದೆ.

ಭಾರತ ಮೂಲದವರು

ಮೆಕ್ಸಿಕೊ: ಫಿಫಾ ಫುಟ್ಬಾಲ್ ವಿಶ್ವಕಪ್‌ನಲ್ಲಿ ಆಡುವ ಭಾಗ್ಯ ಭಾರತಕ್ಕೆ ಇಲ್ಲದಿದ್ದರೂ ಭಾರತ ಮೂಲದ ನಾಲ್ವರು ಫುಟ್ಬಾಲ್ ಆಟಗಾರರು ಈ ಬಾರಿ ವಿಶ್ವಕಪ್‌ನಲ್ಲಿ ಕಣಕ್ಕಿಳಿಯುತ್ತಿದ್ದಾರೆ. ನ್ಯೂಜಿಲೆಂಡ್‌ನ ಸರ್ಪ್ರೀತ್ ಅವರ ಪೋಷಕರು ಪಂಜಾಬ್‌ನವರು. 2018ರಲ್ಲಿ ಅವರು ಭಾರತದ ವಿರುದ್ಧ ಮುಂಬೈನಲ್ಲಿ ಆಡಿದ್ದರು. 2017, 2019ರಲ್ಲಿ ನ್ಯೂಜಿಲೆಂಡ್ ಪರ ಅಂಡರ್-20 ಫಿಫಾ ವಿಶ್ವಕಪ್ ಆಡಿದ್ದಾರೆ. ಇನ್ನೋರ್ವ ಆಟಗಾರ ತಹ್ಸಿನ್ ತಂದೆ ಜಂಶಿದ್ ಕೇರಳದವರು. ಮಾಜಿ ಫುಟ್ಬಾಲ್ ಆಟಗಾರನೂ ಆಗಿರುವ ಜಂಶಿದ್ 2006ರಲ್ಲಿ ಕತಾರ್‌ಗೆ ಸ್ಥಳಾಂತರಗೊಂಡಿದ್ದರು. ಅವರ ಪುತ್ರ ತಹ್ಸಿನ್ 2024ರಲ್ಲಿ ತಮಗೆ ಕೇವಲ 18 ವರ್ಷವಾಗಿದ್ದಾಗ ಕತಾರ್ ಪರ ಪದಾರ್ಪಣೆ ಮಾಡಿದ್ದರು. ಆಂಗ್ಲೋ ಇಂಡಿಯನ್ ತಾಯಿ ಮತ್ತು ಶ್ರೀಲಂಕಾದ ತಮಿಳು ಮೂಲದ ಮಲೇಷ್ಯಾದ ತಂದೆಗೆ ಮೆಲ್ಬರ್ನ್‌ನಲ್ಲಿ ಜನಿಸಿದರು. 2024ರಲ್ಲಿ ಆಸ್ಟ್ರೇಲಿಯಾ ಪರ ಆಡುವ ಅವಕಾಶ ಪಡೆದುಕೊಂಡಿದ್ದರು. ಈವರೆಗೂ ಒಟ್ಟು 7 ಪಂದ್ಯಗಳನ್ನಾಡಿದ್ದಾರೆ. ಮುತ್ತುಸ್ವಾಮಿ ತಂದೆ ಭಾರತದ ತಮಿಳುನಾಡು ಮೂಲದವರು. ಅವರ ತಾಯಿಯ ದೇಶ ಕಾಂಗೊ ಗಣರಾಜ್ಯ, ಹುಟ್ಟಿದ್ದು ಫ್ರಾನ್ಸ್‌ನಲ್ಲಿ. 2019ರಿಂದ ಕಾಂಗೊ ಪರ ಆಡುತ್ತಿದ್ದಾರೆ. ಫ್ರಾನ್ಸ್, ಟರ್ಕಿಯ ಕ್ಲಬ್‌ಗಳನ್ನೂ ಪ್ರತಿನಿಧಿಸಿದ್ದಾರೆ.

ಫ್ರೀ ಕಿಕ್

ಸಿರ್ ಸಿರ್...ರಿಲೀಸ್



ಮೆಕ್ಸಿಕೊ: ಫಿಫಾ ವಿಶ್ವಕಪ್ 2026ರ ಅಧಿಕೃತ ಆಲ್ಬಂನಲ್ಲಿರುವ ನೋರಾ ಫತೇಹಿ ಅವರ ಹೊಸ ಹಾಡು 'ಸಿರ್ ಸಿರ್' ಬಿಡುಗಡೆಯಾಗಿದೆ. ಸಂಜಯ್ ಮತ್ತು ವೆಜ್‌ಡ್ರೀಮ್ ಜೊತೆ ಸೇರಿ ಮಾಡಿರುವ ಈ ಹಾಡು, ತನ್ನ ಮೊರೊಕನ್, ಕೆನಡಿಯನ್ ಮತ್ತು ಭಾರತೀಯ ಪ್ರಭಾವಗಳನ್ನು ಬೆಸೆಯುವ 'ಬಲವಾದ ಭಾರತೀಯ ಪ್ರಾತಿನಿಧ್ಯ' ಎಂದು ನೋರಾ ಹೇಳಿದ್ದಾರೆ. ಬಾಲಿವುಡ್‌ನ ಖ್ಯಾತ ಡ್ಯಾನ್ಸರ್ ಮತ್ತು ನಟಿ ನೋರಾ ಫತೇಹಿ, ಫಿಫಾ ವಿಶ್ವಕಪ್‌ಗೆ ಈ ಹಾಡನ್ನು ರಿಲೀಸ್ ಮಾಡಿದ್ದಾರೆ. ಮ್ಯೂಸಿಕ್ ಪ್ರೊಡ್ಯೂಸರ್ ಸಂಜಯ್ ಮತ್ತು ಫ್ರೆಂಚ್ ಗಾಯಕ ವೆಜ್‌ಡ್ರೀಮ್ ಜೊತೆ ಸೇರಿ ನೋರಾ ಈ ಹಾಡನ್ನು ಸಿದ್ಧಪಡಿಸಿದ್ದಾರೆ. ಇದು ಫಿಫಾ ವಿಶ್ವಕಪ್ 2026ರ ಅಧಿಕೃತ ಆಲ್ಬಂನ ಭಾಗವಾಗಿದೆ ನೋರಾ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಈ ಹಾಡನ್ನು ಹಂಚಿಕೊಂಡಿದ್ದಾರೆ. 'ಕೊರಿಯೋಗ್ರಾಫರ್, ಡ್ಯಾನ್ಸರ್‌ಗಳಿಂದ ಹಿಡಿದು ಸ್ಟೈಲಿಂಗ್ ತಂಡದವರೆಗೆ ಎಲ್ಲರೂ ಭಾರತೀಯರೇ.

ಶ್ರೇಷ್ಠ ಫುಟ್ಬಾಲ್ ಆಟಗಾರರ ಜಿದ್ದಾಜಿದ್ದಿನ ಹೋರಾಟಕ್ಕೆ ರಣಾಂಗಣ ಸಿದ್ಧ

ಕಾಲ್ಚೆಂಡಿನ ಮಹಾಸಮರ

ನರೇಂದ್ರ ಪಾರೆಕಟ್

ವಿಶ್ವದ ಕೋಟ್ಯಂತರ ಫುಟ್ಬಾಲ್ ಪ್ರೇಮಿಗಳ ಸುದೀರ್ಘ ಕಾಯುವಿಕೆಗೆ ಕೊನೆಗೂ ತೆರೆ ಬೀಳುತ್ತಿದೆ. ನಾಳೆಯಿಂದ (ಜೂ.11) 23ನೇ ಆವೃತ್ತಿಯ ಜಗತ್ತಿನ ಅತೀ ದೊಡ್ಡ ಕ್ರೀಡಾ ಹಬ್ಬ 'ಫಿಫಾ ವಿಶ್ವಕಪ್-2026' ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋದ 16 ಪ್ರಮುಖ ನಗರಗಳಲ್ಲಿ ಆರಂಭವಾಗಲಿದೆ. ಮುಂದಿನ ಒಂದು ತಿಂಗಳ ಕಾಲ ನ್ಯೂಯಾರ್ಕ್, ಲಾಸ್ ಎಂಜಲೀಸ್, ಟೊರೊಂಟೊ ಮತ್ತು ಮೆಕ್ಸಿಕೋ ನಗರದ ಐತಿಹಾಸಿಕ ಕ್ರೀಡಾಂಗಣಗಳು ವಿಶ್ವದ ಶ್ರೇಷ್ಠ ಫುಟ್ಬಾಲ್ ಆಟಗಾರರ ಜಿದ್ದಾಜಿದ್ದಿನ ಹೋರಾಟಕ್ಕೆ ಸಾಕ್ಷಿಯಾಗಲಿವೆ.

ಈ ಸಲ ತಂಡಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಬಹುಮಾನದ ಮೊತ್ತವನ್ನೂ ಫಿಫಾ ಈ ಸಲ ಹೆಚ್ಚಿಸಿದೆ. ಒಟ್ಟು 6,238.42 ಕೋಟಿ ರು.ಬಹುಮಾನದ ಹಣವನ್ನು ಫಿಫಾ ನೀಡಲಿದೆ. ವಿಶ್ವಕಪ್‌ನಲ್ಲಿ ಭಾಗವಹಿಸುವ ತಂಡಗಳ ಇತರೆ ಖರ್ಚುಗಳನ್ನು ಸೇರಿಸಿದರೆ, ಒಟ್ಟು ಮೊತ್ತ 7,400 ಕೋಟಿಗೂ ಹೆಚ್ಚು ಆಗಲಿದೆ. ಈ ಬಾರಿ ವಿಶ್ವ ಚಾಂಪಿಯನ್ ಆಗುವ ತಂಡಕ್ಕೆ ಬರೋಬ್ಬರಿ 417.50 ಕೋಟಿ ರು. ಬಹುಮಾನ ಸಿಗಲಿದೆ, ಅಂದರೆ ಕಳೆದ ಬಾರಿ ಚಾಂಪಿಯನ್ ಆಗಿದ್ದ ಅರ್ಜೆಂಟೀನಾಗೆ ಸಿಕ್ಕಿದ್ದಕ್ಕಿಂತ 76 ಕೋಟಿ ಹೆಚ್ಚು. 2ನೇ ಸ್ಥಾನ ಪಡೆಯುವ ತಂಡಕ್ಕೆ 288 ಕೋಟಿ, 3ನೇ ಸ್ಥಾನಕ್ಕೆ 254.675 ಕೋಟಿ ಮತ್ತು 4ನೇ ಸ್ಥಾನಕ್ಕೆ 237 ಕೋಟಿ ರೂಪಾಯಿ ಸಿಗಲಿದೆ. ಕ್ವಾರ್ಟರ್ ಫೈನಲ್ ಮತ್ತು ಪ್ರೀ-ಕ್ವಾರ್ಟರ್ ಫೈನಲ್ ತಲುಪಿದ ತಂಡಗಳಿಗೂ ಭರ್ಜರಿ ಹಣ ಸಿಗಲಿದೆ. ವಿಶ್ವಕಪ್ ಫುಟ್ಬಾಲ್‌ನಲ್ಲಿ ಭಾಗವಹಿಸುವ ಪ್ರತಿಯೊಂದು ತಂಡಕ್ಕೂ ಕನಿಷ್ಠ 87.5 ಕೋಟಿ ಸಿಗಲಿದೆ.

2022 ಫಿಫಾ ಟ್ರೋಫಿ ಜತೆ ಅರ್ಜೆಂಟೀನಾ.

ಬ್ರೆಜಿಲ್: 5 ಬಾರಿ
1958, 1962, 1970, 1994, 2002

ಜರ್ಮನಿ: 4 ಬಾರಿ
1954, 1974, 1990, 2014

ಇಟಲಿ: 4 ಬಾರಿ
1934, 1938, 1982, 2006

ಅರ್ಜೆಂಟೀನಾ: 3 ಬಾರಿ
1978, 1986, 2022

ಫ್ರಾನ್ಸ್: 2 ಬಾರಿ
1998, 2018

ಉರುಗ್ವೆ: 2 ಬಾರಿ
1930, 1950

ಇಂಗ್ಲೆಂಡ್: 1 ಬಾರಿ
1966

ಸ್ಪೇನ್: 1 ಬಾರಿ
2010

ಅತೀ ಹೆಚ್ಚು ಗೋಲು

ಒಂದೇ ಫಿಫಾ ವಿಶ್ವಕಪ್ ಋತುವಿನಲ್ಲಿ ಅತಿ ಹೆಚ್ಚು ಗೋಲುಗಳನ್ನು ಗಳಿಸಿದ ವಿಶಿಷ್ಟ ದಾಖಲೆ ಫ್ರಾನ್ಸ್‌ನ ಜಸ್ಟ್ ಫಾಂಟೈನ್ ಅವರ ಹೆಸರಿನಲ್ಲಿದೆ. ಅವರು 1958ರ ವಿಶ್ವಕಪ್ ಆವೃತ್ತಿ ಒಂದರಲ್ಲಿ ಬರೋಬ್ಬರಿ 13 ಗೋಲುಗಳನ್ನು ಗಳಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ, ಅವರು ತಮ್ಮ ವೃತ್ತಿಜೀವನದಲ್ಲಿ ಒಂದೇ ವಿಶ್ವಕಪ್ ಆಡಿದ್ದರು.

ಸದ್ದು ಮಾಡಲಿರುವ ಟಾಪ್ 10 ಆಟಗಾರರು

ಲಿಯೋನೆಲ್ ಮೆಸ್ಸಿ
ಅರ್ಜೆಂಟೀನಾ

1 2022ರ ಕತಾರ್ ವಿಶ್ವಕಪ್‌ನಲ್ಲಿ ಅರ್ಜೆಂಟೀನಾವನ್ನು ಚಾಂಪಿಯನ್ ಪಟ್ಟಕ್ಕೇರಿಸಿ ತಮ್ಮ ಬಾಲ್ಯದ ಕನಸನ್ನು ನನಸಾಗಿಸಿಕೊಂಡಿದ್ದ ಲಿಯೋನೆಲ್ ಮೆಸ್ಸಿ, ಈಗ ಮತ್ತೊಮ್ಮೆ ಅಖಾಡಕ್ಕಿಳಿಯುತ್ತಿದ್ದಾರೆ. ಸದ್ಯ 38ನೇ ವಯಸ್ಸಿನ ಇವರು ದಾಖಲೆಯ 6ನೇ ಬಾರಿಗೆ ವಿಶ್ವಕಪ್ ಆಡಲು ಸಜ್ಜಾಗಿದ್ದಾರೆ. ಅರ್ಜೆಂಟೀನಾ ತನ್ನ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳಲು ಮೆಸ್ಸಿ ಅವರ ನಾಯಕತ್ವ ಮತ್ತು ಪ್ರದರ್ಶನ ಅತ್ಯಂತ ನಿರ್ಣಾಯಕವಾಗಲಿದೆ.

ಲ್ಯಾಮಿನ್ ಯಮಲ್
ಸ್ಪೇನ್

2 ಪ್ರಸ್ತುತ ಫುಟ್ಬಾಲ್ ಜಗತ್ತಿನ ಅತ್ಯಂತ ಭರವಸೆಯ ಯುವ ಆಟಗಾರ ಎಂದರೆ ಅದು ಸ್ಪೇನ್‌ನ ಲಾಮಿನ್ ಯಮಲ್. ಯೂರೋ 2024ರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ 18 ವರ್ಷದ ಅದ್ಭುತ ಆಟಗಾರ ಇದೀಗ ಕೋಟ್ಯಂತರ ಅಭಿಮಾನಿಗಳ ನಿರೀಕ್ಷೆಯೊಂದಿಗೆ ತಮ್ಮ ಚೊಚ್ಚಲ ವಿಶ್ವಕಪ್ ಆಡುತ್ತಿದ್ದಾರೆ. ವಯಸ್ಸನ್ನು ಮೀರಿದ ಪ್ರಬುದ್ಧತೆ ಹೊಂದಿರುವ ಯಮಲ್ ಈ ಟೂರ್ನಿಯ ಸಾರಥಿಯಾಗಬಲ್ಲ ಎಲ್ಲಾ ಲಕ್ಷಣಗಳನ್ನೂ ಹೊಂದಿದ್ದಾರೆ.

ಕಿಲಿಯನ್ ಎಂಬಾಪೆ
ಫ್ರಾನ್ಸ್

3 ಕಳೆದ ಬಾರಿ ಫೈನಲ್‌ನಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿ 'ಗೋಲ್ಡನ್ ಬೂಟ್' ಗೆದ್ದಿದ್ದರೂ, ಪ್ರಶಸ್ತಿ ಕೈತಪ್ಪಿದ ನೋವಿನಲ್ಲಿದ್ದ ಕಿಲಿಯನ್ ಎಂಬಾಪೆ ಈ ಬಾರಿ ಹೊಸ ಹಠದೊಂದಿಗೆ ಕಣಕ್ಕಿಳಿಯುತ್ತಿದ್ದಾರೆ. 27ನೇ ವಯಸ್ಸಿನ ಈ ಸ್ಫೋಟಕ ಆಟಗಾರ ಇಂದಿಗೂ ಎದುರಾಳಿಗಳಿಗೆ ಸಿಂಹಸ್ವಪ್ನವಾಗಿದ್ದಾರೆ. ಫ್ರಾನ್ಸ್‌ಗೆ 3ನೇ ವಿಶ್ವಕಪ್ ತಂದುಕೊಡುವ ಜವಾಬ್ದಾರಿ ಇವರ ಮೇಲಿದೆ.

ಎರ್ಲಿಂಗ್ ಹಾಲ್ಯಾಡ್
ನಾರ್ವೆ

4 ಬರೋಬ್ಬರಿ 28 ವರ್ಷಗಳ ನಂತರ ನಾರ್ವೆ ದೇಶವನ್ನು ವಿಶ್ವಕಪ್‌ಗೆ ಅರ್ಹತೆ ಪಡೆಯುವಂತೆ ಮಾಡಿದ ಎರ್ಲಿಂಗ್ ಹಾಲ್ಯಾಂಡ್, ಕೊನೆಗೂ ವಿಶ್ವಕಪ್ ವೇದಿಕೆಗೆ ಪದಾರ್ಪಣೆ ಮಾಡುತ್ತಿದ್ದಾರೆ. ಯುರೋಪಿಯನ್ ಕ್ವಾಲಿಫೈಯರ್ಸ್‌ನಲ್ಲಿ ಅತೀ ಹೆಚ್ಚು ಗೋಲು ಗಳಿಸಿ ಅಬ್ಬರಿಸಿದ್ದ ಇವರು ಪ್ರಸ್ತುತ ವಿಶ್ವದ ಅತ್ಯಂತ ಅಪಾಯಕಾರಿ ಫಿನಿಶರ್ ಆಗಿದ್ದು, ಇಡೀ ನಾರ್ವೆಯ ಭರವಸೆಯ ಆಟಗಾರನಾಗಿದ್ದಾರೆ.

ಕ್ರಿಸ್ಟಿಯಾನೊ ರೊನಾಲ್ಡೊ
ಪೋರ್ಚುಗಲ್

5 ವಯಸ್ಸು ಕೇವಲ ಒಂದು ಸಂಖ್ಯೆ ಎಂಬುದನ್ನು ಪದೇ ಪದೇ ಸಾಬೀತು ಪಡಿಸುತ್ತಿ ರುವ 41 ವರ್ಷದ ಕ್ರಿಸ್ಟಿಯಾನೋ ರೊನಾಲ್ಡೊ

ಪೋರ್ಚುಗಲ್ ಪರ 6ನೇ ಬಾರಿಗೆ ವಿಶ್ವಕಪ್ ಆಡಲು ಸಿದ್ಧರಾಗಿದ್ದಾರೆ. ಕ್ಲಬ್ ಮತ್ತು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಅಸಂಖ್ಯಾತ ದಾಖಲೆ ಬರೆದಿರುವ ರೊನಾಲ್ಡೊ ಅವರಿಗೆ ತಮ್ಮ ವೃತ್ತಿಜೀವನದಲ್ಲಿ ಇನ್ನೂ ಕೈಗೆಟುಕದ ಏಕೈಕ ಕನಸಿನ ಈ ಟ್ರೋಫಿಯನ್ನು ಮುಡಿಗೇರಿಸಿಕೊಳ್ಳಲು ಇದು ಕೊನೆಯ ಅವಕಾಶ ಎನ್ನಬಹುದು.

ಹ್ಯಾರಿ ಎಡ್ವರ್ಡ್ ಕೇನ್
ಇಂಗ್ಲೆಂಡ್

6 ಬೇಯರ್ನ್ ಮ್ಯೂನಿಚ್ ಪರ ಅದ್ಭುತ ಪ್ರದರ್ಶನ ನೀಡಿ ಅತ್ಯುತ್ತಮ ಫಾರ್ಮ್‌ನಲ್ಲಿರುವ ಇಂಗ್ಲೆಂಡ್



ತಂಡದ ನಾಯಕ ಹ್ಯಾರಿ ಕೇನ್ ಈ ಬಾರಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಿದ್ದಾರೆ. 2018ರ ವಿಶ್ವಕಪ್‌ನಲ್ಲಿ 'ಗೋಲ್ಡನ್ ಬೂಟ್' ಗೆದ್ದಿದ್ದ ಇವರು ಇಂಗ್ಲೆಂಡ್‌ನ ಸಾರ್ವಕಾಲಿಕ ಶ್ರೇಷ್ಠ ಫುಟ್ಬಾಲ್ ಆಟಗಾರರಾಗಿದ್ದಾರೆ. ಇಂಗ್ಲೆಂಡ್‌ನ ವಿಶ್ವಕಪ್ ಕನಸು ಕೇನ್ ಅವರ ನಾಯಕತ್ವದ ಮೇಲೆಯೇ ನಿಂತಿದೆ.

ವಿನಿಶಿಯಸ್ ಜೂನಿಯರ್
ಬ್ರೆಜಿಲ್

7 ಕಳೆದ ನಾಲ್ಕು ವರ್ಷಗಳಲ್ಲಿ ಬ್ರೆಜಿಲ್ ತಂಡದ ಅತೀ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿರುವ ವಿನಿಶಿಯಸ್

ಜೂನಿಯರ್ ಪ್ರಸ್ತುತ ಜಾಗತಿಕ ಫುಟ್ಬಾಲ್‌ನ ಸೂಪರ್‌ಸ್ಟಾರ್. ತಮ್ಮ ಅಪ್ರತಿಮ ವೇಗ, ಡ್ರಿಬ್ಲಿಂಗ್ ಕೌಶಲ್ಯ ಮತ್ತು ಆಕ್ರಮಣಕಾರಿ ಆಟದ ಮೂಲಕ ಬ್ರೆಜಿಲ್‌ಗೆ 6ನೇ ವಿಶ್ವ ಪ್ರಶಸ್ತಿಯನ್ನು ತಂದುಕೊಡಲು ಇದೀಗ ಸಂಪೂರ್ಣ ಸಜ್ಜಾಗಿದ್ದಾರೆ.

ಆಂಟೊಯಿನ್ ಸೆಮೆನ್
ಘಾನಾ

8 ಕ್ಲಬ್ ಫುಟ್ಬಾಲ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ಗಮನ ಸೆಳೆದಿರುವ ಘಾನಾದ ಆಂಟೊಯಿನ್ ಸೆಮೆನ್ ಆಫ್ರಿಕಾ ಖಂಡದ ಅತ್ಯದ್ಭುತ ಪ್ರತಿಭೆಯಾಗಿದ್ದಾರೆ. ಸದ್ಯ ಹೊಸ ಬದಲಾವಣೆಗಳ ಹಾದಿಯಲ್ಲಿರುವ ಘಾನಾ ತಂಡಕ್ಕೆ ಈ ವರ್ಸಟೈಲ್ ಫಾರ್ವರ್ಡ್ ಆಟಗಾರನೇ

ಪ್ರಮುಖ ಆಧಾರಸ್ತಂಭವಾಗಿದ್ದು, ತಂಡವನ್ನು ಮುನ್ನಡೆಸುವ ಜವಾಬ್ದಾರಿ ಇವರ ಮೇಲಿದೆ.

ಅರ್ಡಾ ಗುಲರ್
ಟರ್ಕಿ

9 ಎರಡು ದಶಕಗಳ ಸುದೀರ್ಘ ಕಾಯುವಿಕೆಯ ನಂತರ ವಿಶ್ವಕಪ್‌ಗೆ ಮರಳಿರುವ ಟರ್ಕಿ ದೇಶದ ಕೋಟ್ಯಂತರ ಅಭಿಮಾನಿಗಳ ಆಶಾಕಿರಣ ಅರ್ಡಾ ಗುಲರ್. ರಿಯಲ್ ಮ್ಯಾಡ್ರಿಡ್ ಕ್ಲಬ್‌ನ ಈ 21 ವರ್ಷದ ಯುವ

ಪ್ರತಿಭೆಯನ್ನು ಟರ್ಕಿಶ್ ಫುಟ್ಬಾಲ್‌ನ ಭವಿಷ್ಯ ಎಂದು ಕರೆಯಲಾಗುತ್ತಿದ್ದು, ಜಾಗತಿಕ ಫುಟ್ಬಾಲ್ ವೇದಿಕೆಯಲ್ಲಿ ಮ್ಯಾಜಿಕ್ ಮಾಡಲು ಅವರು ಕಾತರರಾಗಿದ್ದಾರೆ.

ಮೊಹಮ್ಮದ್ ಸಲಾಹ್
ಈಜಿಪ್ಟ್

10 ಆಫ್ರಿಕಾದ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ ಈಜಿಪ್ಟ್‌ನ ಮೊಹಮ್ಮದ್ ಸಲಾಹ್ ತಮ್ಮ ವೃತ್ತಿಜೀವನದ ಅಪೂರ್ಣ ಅಧ್ಯಾಯ ಪೂರ್ಣಗೊಳಿಸಲು ಮರಳುತ್ತಿ

ದ್ದಾರೆ. ಕ್ಲಬ್ ಮಟ್ಟದಲ್ಲಿ ಎಲ್ಲಾ ಪ್ರಶಸ್ತಿಗಳನ್ನು ಗೆದ್ದಿರುವ 33 ವರ್ಷದ ಸಲಾಹ್, ಈ ಬಾರಿ ತಮ್ಮ ದೇಶಕ್ಕೆ ದೊಡ್ಡ ಯಶಸ್ಸನ್ನು ತಂದುಕೊಡುವ ದೃಢ ಸಂಕಲ್ಪದಲ್ಲಿದ್ದಾರೆ. ಬಹುಶಃ ಇದು ಅವರಿಗೆ ಕೊನೆಯ ವಿಶ್ವಕಪ್ ಆಗುವ ಸಾಧ್ಯತೆಯಿದೆ.

ಭಾರತದಲ್ಲೇಕೆ ಫುಟ್ಬಾಲ್ ಹಿನ್ನಡೆ?

ಛೆಟ್ರಿ ಹೀಗನ್ನುತ್ತಾರೆ!

ಭಾರತೀಯ ಫುಟ್ಬಾಲ್ ಇತಿಹಾಸದ ದಂತಕಥೆ ಸುನಿಲ್ ಛೆಟ್ರಿ ಅವರು 'ದಿ ಚಾಂಪಿಯನ್ ಕೋಡ್' ವಿಶೇಷ ಪಾಡ್‌ಕಾಸ್ಟ್‌ನಲ್ಲಿ ಭಾರತದಲ್ಲಿ ಫುಟ್ಬಾಲ್‌ಗೆ ಸಿಗಬೇಕಾದ ಮನ್ನಣೆ ಮತ್ತು ಜನಪ್ರಿಯತೆ ಏಕೆ ದೊರಕಿಲ್ಲ ಎಂದು ಮುಕ್ತವಾಗಿ ಹೀಗೆ ಮಾತನಾಡಿದ್ದಾರೆ:

'ಕಳೆದ ಒಂದೂವರೆ ವರ್ಷಗಳಿಂದ ಇಂಡಿಯನ್ ಸೂಪರ್ ಲೀಗ್ ಆಡಳಿತಾತ್ಮಕ ಮತ್ತು ಹಣಕಾಸಿನ ವಿವಾದಗಳಿಂದಾಗಿ ತೀವ್ರ ಕಠಿಣ ಹಂತವನ್ನು ಎದುರಿಸುತ್ತಿದೆ. ಇದರಿಂದಾಗಿ ಲೀಗ್ ವಿಳಂಬವಾಗಿದ್ದು, ಆಟಗಾರರ ಒಪ್ಪಂದ ನವೀಕರಣಗೊಳ್ಳದೆ ಹಲವು ಕ್ಲಬ್‌ಗಳು ಕಾರ್ಯಾಚರಣೆಯನ್ನೇ ಸ್ಥಗಿತಗೊಳಿಸುವ ಪರಿಸ್ಥಿತಿ ಬಂದಿದೆ. ನಾನು ಆಲ್ ಇಂಡಿಯಾ ಫುಟ್ಬಾಲ್ ಫೆಡರೇಶನ್, ವಿವಿಧ ಕ್ಲಬ್‌ಗಳ ಸಿಇಒಗಳು, ಮಾಲೀಕರು ಮತ್ತು ಅಭಿಮಾನಿಗಳ ಸಂಘಟನೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆ. ಎಲ್ಲರೂ ಈ ಬಿಕ್ಕಟ್ಟಿನಿಂದ ಬಹಳ ನೊಂದಿದ್ದಾರೆ. ಎಲ್ಲರಲ್ಲೂ ಸಣ್ಣಪುಟ್ಟ ತಪ್ಪುಗಳಿವೆ, ಆದರೆ ನಾವು ಒಬ್ಬರ ಕಡೆಗೆ ಬೆರಳು ತೋರುವ ಬದಲು ತಪ್ಪುಗಳಿಂದ ಕಲಿಯಬೇಕು ಎನ್ನುವ ಕಿವಿಮಾತನ್ನು ಯುವ ಆಟಗಾರರಿಗೆ ಹೇಳಿದ್ದೇನೆ. ವ್ಯವಸ್ಥೆಯಲ್ಲಿರುವ ಪ್ರತಿಯೊಬ್ಬರಿಗೂ ಭಾರತೀಯ ಫುಟ್ಬಾಲ್ ಬೆಳೆಯಬೇಕು ಎನ್ನುವ ಆಸೆಯಿದೆ. ನಾವೆಲ್ಲರೂ ಒಂದೇ ತಂಡವಾಗಿ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ಇಂತಹ ಬಿಕ್ಕಟ್ಟು ಬರದಂತೆ ತಡೆಯಬಹುದು..'

ಅಭಿಮಾನಿಗಳ ಆಕ್ರೋಶ

ಟೆಹ್ರಾನ್: ಫಿಫಾ ವಿಶ್ವಕಪ್ ಆರಂಭಕ್ಕೆ ಕ್ಷಣಗಣನೆ ಬಾಕಿ ಇರುವಾಗ, ಇರಾನ್ ಅಭಿಮಾನಿಗಳಿಗೆ ಮೀಸಲಿಟ್ಟಿದ್ದ ಪಂದ್ಯದ ಟಿಕೆಟ್ ಕೋಟಾವನ್ನು ರದ್ದುಗೊಳಿಸಲಾಗಿದೆ ಎಂದು ಇರಾನ್ ಫುಟ್ಬಾಲ್ ಫೆಡರೇಶನ್ ಆಕ್ರೋಶ ವ್ಯಕ್ತಪಡಿಸಿದೆ.

ಈ ನಿರ್ಧಾರದಿಂದ ಇರಾನ್‌ನ ಪಂದ್ಯಗಳನ್ನು ವೀಕ್ಷಿಸಲು ಈಗಾಗಲೇ ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾಕ್ಕೆ ಪ್ರಯಾಣದ ಯೋಜನೆ ಹಾಕಿ ಕೊಂಡಿದ್ದ ಅನೇಕ ಇರಾನಿನ ಅಭಿಮಾನಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಫೆಡರೇಶನ್ ತಿಳಿಸಿದೆ. 'ಫಿಫಾ ಪ್ರಕಟಿಸಿದ್ದ ಅಧಿಕೃತ ಪ್ರಕ್ರಿಯೆಯನ್ನು ಅನುಸರಿಸಿ ಅಭಿಮಾನಿಗಳು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿ, ಪ್ರಯಾಣದ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದರು. ಆದರೂ ಈಗ ಟಿಕೆಟ್ ಹಂಚಿಕೆಯನ್ನು ಹಿಂತೆ ಗೆದುಕೊಳ್ಳಲಾಗಿದೆ' ಎಂದು ಹೇಳಿದೆ.

ಪ್ರಸಾರ ಹಕ್ಕು

ಝೀ ಎಂಟರ್‌ಪ್ರೈಸಸ್

ಜೀ ಮೀಡಿಯಾ ಎಂಟರ್‌ಪ್ರೈಸಸ್ 2026ರ ಫಿಫಾ ವಿಶ್ವಕಪ್‌ನ ಪ್ರಸಾರ ಹಕ್ಕುಗಳನ್ನು ಪಡೆದುಕೊಂಡಿದೆ. ಪಂದ್ಯಗಳನ್ನು ಝೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಹೊಸ ಕ್ರೀಡಾ ಚಾನೆಲ್ Unite8 ಸ್ಪೋರ್ಟ್ಸ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ. ವಿಶ್ವಕಪ್ ಪಂದ್ಯಗಳನ್ನು ಝೀ5 ಒಟಿಟಿ ಪ್ಲಾಟ್‌ಫಾರ್ಮ್‌ನಲ್ಲಿಯೂ ನೇರ ಪ್ರಸಾರ ಮಾಡಲಾಗುತ್ತದೆ. ವಿಶ್ವಕಪ್ ಫುಟ್ಬಾಲಿನ ಅತ್ಯುನ್ನತ ಆಡಳಿತ ಮಂಡಳಿಯಾದ ಫೆಡರೇಶನ್ ಇಂಟರ್‌ನ್ಯಾಷನಲ್ ಡಿ ಫುಟ್ಬಾಲ್ ಅಸೋಸಿಯೇಷನ್ ಮತ್ತು ಝೀ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. 2026ರಿಂದ 2034ರ ವರೆಗಿನ 8 ವರ್ಷಗಳ ಅವಧಿಯಲ್ಲಿ ಒಟ್ಟು 39 ಜಾಗತಿಕ ಫುಟ್ಬಾಲ್ ಸ್ಪರ್ಧೆಗಳ ವಿಶೇಷ ಮಾಧ್ಯಮ ಹಕ್ಕುಗಳನ್ನು ಝೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಪಡೆದು ಕೊಂಡಿದೆ. ಇದು ಉತ್ತರ ಅಮೆರಿಕದಲ್ಲಿ ನಡೆದ ಬೇಸಿಗೆ ಫುಟ್ಬಾಲ್ ಸ್ಪರ್ಧೆಯಿಂದ ಪ್ರಾರಂಭವಾಗಿದೆ. ವಿಶ್ವದ ಅತಿ ದೊಡ್ಡ ಕ್ರೀಡಾಕೂಟಗಳಲ್ಲಿ ಒಂದನ್ನು ಭಾರತೀಯ ಪ್ರೇಕ್ಷಕರಿಗೆ ತರಲು ನಾವು ಉತ್ಸುಕರಾಗಿದ್ದೇವೆ ಎಂದು ಝೀ ಎಂಟರ್‌ಟೈನ್‌ಮೆಂಟ್ ಎಂಟರ್ ಪ್ರೈಸಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಅರ್ಹತೆ ಪಡೆದ 48 ತಂಡಗಳು

12 ಗುಂಪುಗಳು

ಗುಂಪು A
- ಮೆಕ್ಸಿಕೋ
- ದಕ್ಷಿಣ ಆಫ್ರಿಕಾ
- ದಕ್ಷಿಣ ಕೊರಿಯಾ
- ಚೆಕ್ ಗಣರಾಜ್ಯ

ಗುಂಪು B
- ಕೆನಡಾ
- ಬೋಸ್ನಿಯಾ
- ಕತಾರ್
- ಸ್ವಿಟ್ಜರ್ಲೆಂಡ್

ಗುಂಪು C
- ಬ್ರೆಜಿಲ್
- ಮೊರಾಕ್ಕೊ
- ಹೈಟಿ
- ಸ್ಕಾಟ್ಲೆಂಡ್

ಗುಂಪು D
- ಅಮೆರಿಕ
- ಪರಾಗ್ವೆ
- ಆಸ್ಟ್ರೇಲಿಯಾ
- ಟರ್ಕಿ

ಗುಂಪು E
- ಜರ್ಮನಿ
- ಕುರಾಕೊ
- ಐವರಿ ಕೋಸ್ಟ್
- ಈಕ್ವೆಡಾರ್

ಗುಂಪು F
- ನೆದರ್ಲೆಂಡ್
- ಜಪಾನ್
- ಸ್ವೀಡನ್
- ಟುನೀಶಿಯಾ

ಗುಂಪು G
- ಬೆಲ್ಜಿಯಂ
- ಈಜಿಪ್ಟ್
- ಇರಾನ್
- ನ್ಯೂಜಿಲೆಂಡ್

ಗುಂಪು H
- ಸ್ಪೇನ್
- ಕೇಪ್ ವರ್ಡೆ
- ಸೌದಿ ಅರೇಬಿಯಾ
- ಉರುಗ್ವೆ

ಗುಂಪು I
- ಫ್ರಾನ್ಸ್
- ಸೆನೆಗಲ್
- ನಾರ್ವೆ
- ಇರಾಕ್

ಗುಂಪು J
- ಅರ್ಜೆಂಟೀನಾ
- ಅಲ್ಜೀರಿಯಾ
- ಆಸ್ಟ್ರಿಯಾ
- ಜೋರ್ಡಾನ್

ಗುಂಪು K
- ಪೋರ್ಚುಗಲ್
- ಡಿಆರ್ ಕಾಂಗೋ
- ಉಜ್ಬೇಕಿಸ್ತಾನ್
- ಕೊಲಂಬಿಯಾ

ಗುಂಪು L
- ಇಂಗ್ಲೆಂಡ್
- ಕ್ರೊಯೇಷಿಯಾ
- ಘಾನಾ
- ಪನಾಮ

ಕೇರಳ: ಇದೀಗ ಫಿಫಾ ಫೀವರ್

ಮಲಪ್ಪುರಂ (ಕೇರಳ): ಭಾರತದ ಕ್ರೀಡಾ ಲೋಕದಲ್ಲಿ ಕೇರಳವು 'ಫುಟ್ಬಾಲ್‌ನ ತೊಟ್ಟಿಲು' ಎಂದೇ ಪ್ರಸಿದ್ಧವಾಗಿದೆ. ಅಲ್ಲಿನ ಮಲಪ್ಪುರಂ ಮತ್ತು ಉತ್ತರ ಕೇರಳದ ಮಲಬಾರ್ ಪ್ರದೇಶವನ್ನು ಫುಟ್ಬಾಲ್‌ನ ಪ್ರಮುಖ ಶಕ್ತಿಕೇಂದ್ರವೆಂದು ಕರೆಯಲಾಗುತ್ತದೆ. ಈ ಫಿಫಾ ವಿಶ್ವಕಪ್ ಕ್ಷಣಗಣನೆ ಆರಂಭವಾಗುತ್ತಿದ್ದಂತೆ, ಫುಟ್ಬಾಲ್ ಜ್ವರವು ಕೇರಳವನ್ನು ಅಧಿಕೃತವಾಗಿ ಆವರಿಸಿದೆ. ಅಲ್ಲಿನ ಅಭಿಮಾನಿಗಳು ಬ್ರೆಜಿಲ್, ಅರ್ಜೆಂಟೀನಾ ಮುಂತಾದ ದೇಶಗಳ ಬಾವುಟ, ಆಟಗಾರರ ಕಟೌಟ್ ಮತ್ತು ಫ್ಲೆಕ್ಸ್‌ಗಳನ್ನು ರಸ್ತೆಯ ಬದಿಯಲ್ಲಿ ಇರಿಸಿ ತಮ್ಮ ತಂಡದ ಅಭಿಮಾನವನ್ನು ಪ್ರದರ್ಶಿಸಲಾರಂಭಿಸಿದ್ದಾರೆ.

ಮೊಬೈಲ್‌ನಲ್ಲಿ ವೀಕ್ಷಣೆ ಲಭ್ಯ

ಮೆಕ್ಸಿಕೋ: ಫಿಫಾ ವಿಶ್ವಕಪ್ ಪಂದ್ಯಗಳನ್ನು ಆನ್‌ಲೈನ್‌ನಲ್ಲಿ ಲೈವ್ ಸ್ಟ್ರೀಮಿಂಗ್ ವೀಕ್ಷಿಸಲು ಬಯಸುವ ಅಭಿಮಾನಿಗಳು ಕಡ್ಡಾಯವಾಗಿ ಜೀ5 ಆ್ಯಪ್‌ನ ಪ್ರೀಮಿಯಂ ಚಂದಾದಾರಿಕೆಯನ್ನು ಹೊಂದಿರಬೇಕಾಗುತ್ತದೆ. ಇದಕ್ಕಾಗಿ ಜೀ5 ಸಂಸ್ಥೆಯು ಎರಡು ಪ್ಲಾನ್‌ಗಳನ್ನು ಪರಿಚಯಿಸಿದೆ. ಕನಿಷ್ಠ ಪ್ಲಾನ್ 3 ತಿಂಗಳ ಅವಧಿಯ ಆರಂಭಿಕ ಪ್ಲಾನ್ ಬೆಲೆ 299 ಆಗಿರುತ್ತದೆ. ವಾರ್ಷಿಕ ಪ್ಲಾನ್ ಒಂದು ವರ್ಷದ ಅವಧಿಯ ಪ್ರೀಮಿಯಂ ಪ್ಲಾನ್ ಬೆಲೆ 599 ಆಗಿರುತ್ತದೆ. ಈಗಾಗಲೇ ಸಕ್ರಿಯ ಜೀ5 ಚಂದಾದಾರಿಕೆಯನ್ನು ಹೊಂದಿರದ ಫುಟ್‌ಬಾಲ್ ಪ್ರೇಮಿಗಳು ತಮ್ಮ ಸ್ಮಾರ್ಟ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಟ್ಯಾಬ್ಲೆಟ್‌ಗಳು ಅಥವಾ ಸ್ಮಾರ್ಟ್ ಟಿವಿಗಳಲ್ಲಿ ಪಂದ್ಯಗಳನ್ನು ನೇರ ಪ್ರಸಾರವಾಗಿ ವೀಕ್ಷಿಸಲು ಸಾಧ್ಯ.

ಸಮಾಚಾರ ಸಣ್ಣದಲ್ಲ

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಕಲಬುರಗಿ: ಶೈಕ್ಷಣಿಕ ವರ್ಷಕ್ಕೆ ದ್ವಿತೀಯ ಪಿ.ಯು.ಸಿ., ಐ.ಟಿ.ಐ./ ಪಾಸಾದ ವಿದ್ಯಾರ್ಥಿನಿಯರಿಗಾಗಿ ಲ್ಯಾಟರಲ್ ಎಂಟ್ರಿ ಮೂಲಕ ಡಿಪ್ಲೋಮಾ 3ನೇ ಸೆಮಿಸ್ಟರ್‌ನ ಈ ಕೆಳಕಂಡ ಡಿಪ್ಲೋಮಾ ಕೋರ್ಸ್ ಗಳಿಗೆ ಆಫ್ಲೈನ್ ಮೂಲಕ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸರಕಾರಿ ಮಹಿಳಾ ಪಾಲಿಟೆಕ್ನಿಕ್‌ನ ಪ್ರಾಚಾರ್ಯರು ತಿಳಿಸಿದ್ದಾರೆ. ಲಭ್ಯವಿರುವ ಕೋರ್ಸ್ ವಿವರ ಇಂತಿದೆ: ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (ಸಿ.ಎಸ್.), ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಎಂಜಿನಿಯರಿಂಗ್, ಇಲೆಕ್ಟ್ರಿಕಲ್ ಆಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಹಾಗೂ ಕಮರ್ಷಿಯಲ್ ಪ್ರಾಕ್ಟೀಸ್ ಅರ್ಹ ವಿದ್ಯಾರ್ಥಿನಿಯರು ಪ್ರವೇಶ ಅರ್ಜಿಗಳನ್ನು ಸಂಸ್ಥೆಯಿಂದ ಅಥವಾ ಅಂತರ್ಜಾಲದಿಂದ ಡೌನ್ ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯೊಂದಿಗೆ ನಿಗದಿಪಡಿಸಿದ ಅವಶ್ಯಕ ದಾಖಲೆಗಳನ್ನು ಲಗತ್ತಿಸಿ 2026ರ ಜುಲೈ 10ರೊಳಗಾಗಿ ಅರ್ಜಿ ಸಲ್ಲಿಸಬೇಕು. ಪ್ರವೇಶಕ್ಕಾಗಿ ಬೇಕಾಗಿರುವ ಮೂಲ ಮತ್ತು ಜೆರಾಕ್ಸ್ ದಾಖಲೆಗಳ ವಿವರ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯ ರಾಘವೇಂದ್ರ ಪಿ. ಆರ್-9945350274, ಹಿ.ಶ್ರೇ. ಉಪನ್ಯಾಸಕ ಮಡಿವಾಳಪ್ಪ ಬಿ.-9449534169, ಕುಲಸಚಿವ ಶರಣ ಬಸಪ್ಪ ಹಾಲ್ವಿ-9880874609 ಹಾಗೂ ಕಚೇರಿ ಅಧೀಕ್ಷಕ ಪರಶುರಾಮ ಸಂಗಟ್ಟಿ-9008065554 ಗೆ ಸಂಪರ್ಕಿಸಲು ಕೋರಲಾಗಿದೆ.

ಬಿಐಇಆರ್‌ಟಿ ಸೇವೆ ಪಡೆಯಲು ಅರ್ಜಿ

ಕಲಬುರಗಿ: ಕಲಬುರಗಿ ಜಿಲ್ಲೆಯಲ್ಲಿ ಖಾಲಿಯಿರುವ ಪ್ರಾಥಮಿಕ ವಿಭಾಗ-5 ಹುದ್ದೆಗಳು ಹಾಗೂ ಪ್ರೌಢ ವಿಭಾಗ-16 ಹುದ್ದೆಗಳು ಸೇರಿದಂತೆ ಒಟ್ಟು 21 ಬಿ.ಐ.ಇ.ಆರ್.ಟಿ. ಪ್ರಾಥಮಿಕ-ಪ್ರೌಢ ಹುದ್ದೆಗಳಿಗೆ ನೇರ ಗುತ್ತಿಗೆಯಡಿ ನೇಮಕಾತಿ ಮಾಡಿಕೊಳ್ಳುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸಮಗ್ರ ಶಿಕ್ಷಣ ಕರ್ನಾಟಕ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತರು ಅರ್ಜಿಯ ಜೊತೆಗೆ ಎಲ್ಲ ಅಂಕಪಟ್ಟಿಗಳನ್ನು ಹಾಗೂ ಆರ್.ಸಿ.ಐ. ಪ್ರಮಾಣ ಪತ್ರದ 2 ಸೆಟ್ ಜೆರಾಕ್ಸ್ ಪ್ರತಿಗಳು, ಈ ಹಿಂದೆ ಸೇವೆ ಸಲ್ಲಿಸಿದಲ್ಲಿ ಸೇವಾ ವಿವರಗಳ ದಾಖಲೆಗಳನ್ನು ವರ್ಷವಾರು ಲಗತ್ತಿಸಿ 2026ರ ಜೂನ್ 15ರ ಸಂಜೆ 5 ಗಂಟೆಯೊಳಗಾಗಿ ಕಲಬುರಗಿ ಜಿಲ್ಲಾ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ನಿಗದಿತ ಅರ್ಜಿ ನಮೂನೆ ವಿದ್ಯಾರ್ಹತೆ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು ಹಾಗೂ ಸಮಗ್ರ ಶಿಕ್ಷಣ ಕರ್ನಾಟಕ, ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಕಲಬುರಗಿ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ತಾಪೂರ ತಾಲೂಕಿನ ಗುಂಡಗುರ್ತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಖಾಲಿಯಿರುವ ಗಣಿತ ಹಾಗೂ ಇಂಗ್ಲಿಷ್ ವಿಷಯಗಳ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ವಸತಿ ಶಾಲೆಯ ಪ್ರಾಚಾರ್ಯರು ತಿಳಿಸಿದ್ದಾರೆ. ಗಣಿತ ವಿಷಯಕ್ಕೆ ಬಿ.ಎಸ್.ಸಿ., ಎಂ.ಎಸ್.ಸಿ, ಬಿ.ಎಡ್ ಹಾಗೂ ಇಂಗ್ಲಿಷ್ ವಿಷಯಕ್ಕೆ ಬಿ.ಎ., ಎಂ.ಎ., ಬಿ.ಎಡ್ ವಿದ್ಯಾರ್ಹತೆ ಹೊಂದಿರಬೇಕು. ಕಡ್ಡಾಯವಾಗಿ ಟಿ.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ದಾಖಲೆಗಳನ್ನು ಲಗತ್ತಿಸಿ 2026ರ ಜೂನ್ 13ರ ರೊಳಗಾಗಿ ಗುಂಡಗುರ್ತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಶಾಲೆಯಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಸತಿ ಶಾಲೆಯನ್ನು ಸಂಪರ್ಕಿಸಲು ಕೋರಲಾಗಿದೆ.

ವಿಜ್ಞಾನ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: ಅಫಜಲಪುರ ತಾಲೂಕಿನ ಕರಜಗಿ ಮೊರಾರ್ಜಿ ದೇಸಾಯಿ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಖಾಲಿಯಿರುವ ವಿಜ್ಞಾನ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಫಜಲಪುರ ತಾಲೂಕಿನ ಕರಜಗಿ ಮೊರಾರ್ಜಿ ದೇಸಾಯಿ ಆಂಗ್ಲ ಮಾಧ್ಯಮ ವಸತಿ ಶಾಲೆಯ ಪ್ರಾಚಾರ್ಯರು ತಿಳಿಸಿದ್ದಾರೆ. ಈ ಅತಿಥಿ ಶಿಕ್ಷಕರ ಹುದ್ದೆಯು ತಾತ್ಕಾಲಿಕವಾಗಿದ್ದು, ಬಿ.ಎಸ್ಸಿ. (ಸಿ.ಬಿ.ಝಡ್.) ಹಾಗೂ ಬಿ.ಇಡಿ. ಮುಗಿಸಿದ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಆಯ್ಕೆಯಾಗುವ ಶಿಕ್ಷಕರಿಗೆ ಮಾಸಿಕ 16,650 ಗೌರವಧನ ನೀಡಲಾಗುತ್ತದೆ. ಕ್ರೈಸ್ ವಸತಿ ಶಾಲೆಗಳಲ್ಲಿ ಕೆಲಸ ನಿರ್ವಹಿಸಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ. ಅರ್ಹ ಅಭ್ಯರ್ಥಿಗಳು 2026ರ ಜೂನ್ 12ರ ರೊಳಗಾಗಿ ಈ ವಸತಿ ಶಾಲೆಯ ಪ್ರಾಂಶುಪಾಲರಿಗೆ ನೇರವಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9880204478 ಗೆ ಸಂಪರ್ಕಿಸಲು ಕೋರಲಾಗಿದೆ.

{ಡಾ. ಎಂ.ಸಿ. ಸುಧಾಕರ್} ಮಾಜಿ ಸಚಿವ

ಇಸ್ಕಾನ್ ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ನಡೆಯುತ್ತಿರುವ ಅಕ್ಷಯಪಾತ್ರೆ ಯೋಜನೆ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸ್ವಯಂಚಾಲಿತ ವ್ಯವಸ್ಥೆಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಆಹಾರ ತಯಾರಿಸುವ ಸಾಮರ್ಥ್ಯ ಹೊಂದಿದೆ. ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡುವ ಈ ವ್ಯವಸ್ಥೆ ಮಕ್ಕಳಿಗೆ ಆರೋಗ್ಯಕರ ಆಹಾರ ತಲುಪಿಸುವಲ್ಲಿ ಮಾದರಿಯಾಗಿದೆ.

ತಾಲೂಕಿಗೊಂದು ಜಂಟಿ ತಪಾಸಣಾ ತಂಡ ರಚನೆ | ಕಚೇರಿ ಬಿಟ್ಟು ಹಳ್ಳಿಗಳಿಗೆ ತೆರಳಲು ಅಧಿಕಾರಿಗಳಿಗೆ ಡಿಸಿ ಇಕ್ರಮ್ ಶರೀಫ್ ಸೂಚನೆ

ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡಿದರೆ ಕ್ರಮ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ನಿಗದಿತ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವ ಅಂಗಡಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಿಮಿನಲ್ ಕ್ರಮ ಕೈಗೊಳ್ಳುವುದಲ್ಲದೆ, ಅಂತಹ ಕೃಷಿ ಪರಿಕರ ಮಾರಾಟ ಮಳಿಗೆಗಳ ಪರವಾನಗಿಯನ್ನು ತಕ್ಷಣವೇ ರದ್ದುಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ರಸಗೊಬ್ಬರ ಅಂಗಡಿಗಳ ಡೀಲರ್ಸ್, ರಿಟೇಲರ್ಸ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ತುರ್ತು ಸಭೆ ನಡೆಸಿ ಮಾತನಾಡಿ, ಅಲ್ಲಲ್ಲಿ ರಸಗೊಬ್ಬರವನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತಿದೆ ಎಂದು ರೈತರಿಂದ ದೂರುಗಳು ಬರುತ್ತಿವೆ. ಇದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಡಿ.ಎ.ಪಿ. 50 ಕೆ.ಜಿ. ಬ್ಯಾಗಿಗೆ 1,350 ರು. ಹಾಗೂ ಯೂರಿಯಾ 45 ಕೆ.ಜಿ. ಬ್ಯಾಗಿಗೆ 266 ರು. ಎಂ.ಆರ್.ಪಿ. ದರವಿದ್ದು, ಅನ್ನದಾತರಿಂದ ಇದಕ್ಕಿಂತ ಒಂದು ರುಪಾಯಿ ಹೆಚ್ಚು ಪಡೆದರೂ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿ ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ತಪಾಸಣೆ ಜಿಲ್ಲೆಯಲ್ಲಿ ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಹಾವಳಿ ತಡೆಯಲು ಕೂಡಲೇ ತಾಲೂಕಿಗೊಂದು ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಜಂಟಿ ತಂಡ ರಚಿಸಬೇಕು. ಎ.ಸಿ., ತಹಸೀಲ್ದಾರ್, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಎಲ್ಲ ಅಧಿಕಾರಿಗಳು ಹೋಬಳಿ ಹಾಗೂ ತಾಲೂಕುಗಳಿಗೆ ಖುದ್ದಾಗಿ ತೆರಳಿ, ಪ್ರತಿನಿತ್ಯ ಸುಮಾರು 25 ರಸಗೊಬ್ಬರ ಅಂಗಡಿಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಬೇಕು. ಅಂಗಡಿಗಳಲ್ಲಿನ ಪಿ.ಓ.ಎಸ್. ಯಂತ್ರ ಹಾಗೂ ದಾಸ್ತಾನುಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು ಎಂದು ಸೂಚಿಸಿದರು. ಚಿತ್ತಾಪುರ ಪಟ್ಟಣದಲ್ಲಿ ರಸಗೊಬ್ಬರವನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಕುರಿತು ಸಹಾಯಕ ಕೃಷಿ ನಿರ್ದೇಶಕ ಸಂಜೀವ ಕುಮಾರ್‌ಅವರನ್ನು ಪ್ರಶ್ನಿಸಿದ ಜಿಲ್ಲಾಧಿಕಾರಿಗಳು, ಕೂಡಲೇ ಸತ್ಯಾಸತ್ಯತೆ ಪರಿಶೀಲಿಸಿ ಸಂಬಂಧಪಟ್ಟ ಅಂಗಡಿಯ ಮೇಲೆ ಇಂದೇ ಕಠಿಣ ಕ್ರಮ ಕೈಗೊಳ್ಳುವಂತೆ ಆದೇಶಿಸಿದರು. ಸಭೆಯಲ್ಲಿ ಪ್ರೊಬೇಷನರ್‌ಐ.ಎ.ಎಸ್. ಅಧಿಕಾರಿ ಶಿಖರ್ ಮೋಘಾ, ಕೃಷಿ ಇಲಾಖೆ ಅಧಿಕಾರಿಗಳಾದ ಅನುಸೂಯಾ ಹೂಗಾರ, ಬಾಲರಾಜ ಬಿರಾದಾರ, ತಾಲೂಕಿನ ಸಹಾಯಕ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಹಾಗೂ ರಸಗೊಬ್ಬರ ಕಂಪನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ರಸಗೊಬ್ಬರ ಅಂಗಡಿಗಳ ಡೀಲರ್ಸ್, ರಿಟೇಲರ್ಸ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ತುರ್ತು ಸಭೆ ನಡೆಸಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಮಾತನಾಡಿದರು.

ಅಧಿಕಾರಿಗಳು ಇನ್ಮುಂದೆ ಕಚೇರಿಗಳಲ್ಲೇ ಕುಳಿತುಕೊಳ್ಳದೆ ಹಳ್ಳಿ ಮತ್ತು ಹೋಬಳಿಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕು. ನೀವು ಕ್ಷೇತ್ರಕ್ಕೆ ಭೇಟಿ ನೀಡಿದರೆ ಈ ರೀತಿಯ ಸಮಸ್ಯೆಗಳು ತಲೆದೋರುವುದಿಲ್ಲ. ರೈತರ ಬಳಿಗೆ ಹೋಗಿ ಅವರ ಅಹವಾಲುಗಳನ್ನು ಆಲಿಸಿ. ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿರುವ ಬಗ್ಗೆ ಯಾವುದೇ ಮೂಲೆಯಿಂದ ರೈತರೊಬ್ಬರು ದೂರು ಹೊತ್ತು ಡಿಸಿ ಕಚೇರಿಗೆ ಬರುವಂತಾಗಬಾರದು. ಮತ್ತೆ ದೂರು ಬಂದರೆ ಡೀಲರ್ -ರಿಟೇಲರ್ ಜತೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆಯೂ ಕ್ರಮ ಕೈಗೊಳ್ಳಬೇಕಾಗುತ್ತದೆ.

– ಇಕ್ರಮ್ ಶರೀಫ್, ಜಿಲ್ಲಾಧಿಕಾರಿ

ನ್ಯಾನೋ ಗೊಬ್ಬರ ಖರೀದಿಗೆ ಒತ್ತಾಯಿಸುವಂತಿಲ್ಲ

ಕೆಲವು ರಿಟೇಲರ್‌ಗಳು ರೈತರಿಗೆ ಹೊಸ ತಂತ್ರಜ್ಞಾನದ ನ್ಯಾನೋ ಯೂರಿಯಾ ಅಥವಾ ನ್ಯಾನೋ ಡಿ.ಎ.ಪಿ. ಖರೀದಿಸಿದರೆ ಮಾತ್ರ ಸಾಂಪ್ರದಾಯಿಕ ಡಿ.ಎ.ಪಿ. ಗೊಬ್ಬರ ನೀಡುವುದಾಗಿ ಷರತ್ತು ವಿಧಿಸುತ್ತಿರುವುದು ಸಮಂಜಸವಲ್ಲ. ಕೃಷಿ ಮಳಿಗೆಗಳ ಮಾಲೀಕರು ನೂತನ ತಂತ್ರಜ್ಞಾನದ ರಸಗೊಬ್ಬರಗಳ ಬಗ್ಗೆ ರೈತರಿಗೆ ಕೇವಲ ಸಲಹೆ ನೀಡಬಹುದೇ ಹೊರತು, ಅದನ್ನು ಕಡ್ಡಾಯವಾಗಿ ಕೊಳ್ಳುವಂತೆ ಒತ್ತಡ ಹೇರುವಂತಿಲ್ಲ. ಕೊನೆಗೆ ಅನ್ನದಾತರ ಇಚ್ಛೆಯಂತೆಯೇ ಗೊಬ್ಬರ ಪೂರೈಸಬೇಕು ಎಂದು ಸ್ಪಷ್ಟಪಡಿಸಿದರು. ರಸಗೊಬ್ಬರ ಸಮಸ್ಯೆ ಕುರಿತು ರೈತರ ಅಹವಾಲು ಆಲಿಸಲು ಕೂಡಲೇ ಸಹಾಯವಾಣಿ ಸ್ಥಾಪಿಸಬೇಕು ಮತ್ತು ಪ್ರತಿನಿತ್ಯದ ತಪಾಸಣಾ ವರದಿಯನ್ನು ಜಿಯೋ ಟ್ಯಾಗ್ ಫೋಟೋ ಸಹಿತ ತಮಗೆ ಸಲ್ಲಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಿದರು.

ನಿಯಮ ಉಲ್ಲಂಘಿಸಿದ 51 ಅಂಗಡಿಗಳಿಗೆ ನೋಟಿಸ್

ಜಿಲ್ಲೆಯಲ್ಲಿ ರಸಗೊಬ್ಬರದ ಯಾವುದೇ ಕೊರತೆಯಿಲ್ಲ. ಜಿಲ್ಲೆಯಲ್ಲಿ ಒಟ್ಟು 733 ಡೀಲರ್‌ಗಳಿದ್ದು, ಪ್ರಸ್ತುತ ರಿಟೇಲ್ ಹಾಗೂ ತಾಲೂಕು ಡೀಲರ್‌ಗಳ ಬಳಿ ಒಟ್ಟು 5,142 ಮೆಟ್ರಿಕ್ ಟನ್ ಡಿ.ಎ.ಪಿ. ಹಾಗೂ 9,432 ಮೆಟ್ರಿಕ್ ಟನ್ ಯೂರಿಯಾ ದಾಸ್ತಾನು ಲಭ್ಯವಿದೆ. ಕಳೆದ 15 ದಿನಗಳಲ್ಲಿ ಕೃಷಿ ಅಧಿಕಾರಿಗಳ ತಂಡವು 117 ರಸಗೊಬ್ಬರ ಅಂಗಡಿಗಳ ಮೇಲೆ ದಾಳಿ ನಡೆಸಿದ್ದು, ನಿಯಮ ಉಲ್ಲಂಘಿಸಿ ಮಾರಾಟ ಮಾಡುತ್ತಿದ್ದ 51 ಅಂಗಡಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೆ, ನಿಯಮಬಾಹಿರವಾಗಿ ಸಂಗ್ರಹಿಸಲಾಗಿದ್ದ 66.27 ಲಕ್ಷ ರು. ಮೌಲ್ಯದ ರಸಗೊಬ್ಬರ ಮಾರಾಟಕ್ಕೆ ತಡೆ ಆದೇಶ ನೀಡಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಸಮದ್ ಪಟೇಲ್ ಸಭೆಗೆ ಮಾಹಿತಿ ನೀಡಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಕಲಬುರಗಿ: ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ (ಸಿಲಿಂಡರ್) ಬೆಲೆಯನ್ನು ನಿರಂತರವಾಗಿ ಹೆಚ್ಚಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆಯು ಟೌನ್ ಹಾಲ್‌ವರೆಗೆ ಸಾಗಿತು. ಮೆರವಣಿಗೆಯುದ್ದಕ್ಕೂ ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಾಮಾನ್ಯ ಜನರ ಬದುಕು ದುಸ್ತರ: ಮುಖಂಡರ ಆಕ್ರೋಶ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮುಖಂಡರು ಮಾತನಾಡಿ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಈಗಾಗಲೇ ಕಂಗೆಟ್ಟಿರುವ ಸಾಮಾನ್ಯ ಜನರ ಜೀವನ ತೈಲೋತ್ಪನ್ನಗಳ ಬೆಲೆ ಹೆಚ್ಚಳದಿಂದ ಮತ್ತಷ್ಟು ದುಸ್ತರವಾಗಿದೆ. ಕೇಂದ್ರ ಸರಕಾರವು ತಕ್ಷಣವೇ ಜನಸಾಮಾನ್ಯರ ಹಿತದೃಷ್ಟಿಯಿಂದ ಹೆಚ್ಚಿಸಿರುವ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆಗಳನ್ನು ಹಿಂಪಡೆಯಬೇಕು ಎಂದು ತೀವ್ರವಾಗಿ ಆಗ್ರಹಿಸಿದರು. ಈ ಬೃಹತ್ ಪ್ರತಿಭಟನೆಯಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ್ ಹರವಾಳ, ಮುಖಂಡರಾದ ಡಾ. ಕಿರಣ ದೇಶಮುಖ, ರಾಜಗೋಪಾಲ ರೆಡ್ಡಿ, ಮಹಿಳಾ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷೆ ರೇಣುಕಾ ಸಿಂಗೆ, ಯುವ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷ ಶಕೀಲ ಸರಡಗಿ, ಈರಣ್ಣ ಝಳಕಿ, ಶಿವು ಹೊನಗುಂಟಿ, ಭೀಮರಾವ ಟಿಟಿ, ಧರ್ಮರಾಜ್ ಹೇರೂರ, ಕಾರ್ತಿಕ ನಾಟಿಕಾರ, ಪರಶುರಾಮ್ ನಾಟೇಕರ್, ಫಾರುಕ್ ಮಾನಿಯಾಲ್, ನಯಿಂ ಖಾನ್, ಫಾರೂಕ್ ಪಟೇಲ್ ಮುದುಬಾಳ, ಮೋದಿನ್ ಪಟೇಲ್ ಅಣಬಿ, ಶಿವಾನಂದ ತೋರವಿ, ಶ್ರೀಹರಿ ಜಾಧವ್, ರಾಮು ರಾಠೋಡ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಲಬುರಗಿ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆಯನ್ನು ನಿರಂತರವಾಗಿ ಹೆಚ್ಚಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಯೂರಿಯಾ-ಡಿಎಪಿ ಕೊರತೆ: ಗೊಬ್ಬರಕ್ಕಾಗಿ ರೈತರ ಪರದಾಟ

ಕಾಳಗಿ: ಉತ್ತಮ ಮಳೆಯ ನಿರೀಕ್ಷೆಯೊಂದಿಗೆ ಕೃಷಿ ಚಟುವಟಿಕೆಗಳು ಬಿರುಸುಗೊಂಡಿವೆ. ಆದರೆ, ಬಿತ್ತನೆ ಕಾರ್ಯ ಆರಂಭವಾಗುತ್ತಿದ್ದಂತೆಯೇ ಯೂರಿಯಾ ಹಾಗೂ ಡಿಎಪಿ ಗೊಬ್ಬರದ ತೀವ್ರ ಕೊರತೆ ಎದುರಾಗಿದ್ದು, ರೈತರು ಗೊಬ್ಬರಕ್ಕಾಗಿ ಸಹಕಾರಿ ಸಂಘಗಳ ಮುಂದೆ ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲುವಂತಾಗಿದೆ.

ಪಟ್ಟಣದ ರೈತ ಸೇವಾ ಸಹಕಾರಿ ಬ್ಯಾಂಕ್‌ನಲ್ಲಿ ಮಂಗಳವಾರ ಬೆಳಗ್ಗೆಯಿಂದಲೇ ನೂರಾರು ರೈತರು ಯೂರಿಯಾ ಹಾಗೂ ಡಿಎಪಿ ಗೊಬ್ಬರ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರು. ಕೈಯಲ್ಲಿ ಪಹಣಿ ಹಾಗೂ ಆಧಾರ್ ಕಾರ್ಡ್ ಹಿಡಿದುಕೊಂಡು ಗೊಬ್ಬರ ಸಿಗುವ ನಿರೀಕ್ಷೆಯಲ್ಲಿ ರೈತರು ಕಾದು ಕುಳಿತಿದ್ದ ದೃಶ್ಯ ಕಂಡುಬಂತು. ಆದರೆ, ಗೊಬ್ಬರ ವಿತರಣೆಯಲ್ಲಿ ಉಂಟಾದ ಗೊಂದಲದಿಂದಾಗಿ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪಹಣಿ ಇದ್ದರೂ ಸಿಗದ ಗೊಬ್ಬರ: ನಿಯಮಕ್ಕೆ ಆಕ್ರೋಶ:

ಸಹಕಾರಿ ಸಂಘಕ್ಕೆ ಸದ್ಯ 300 ಚೀಲ ಯೂರಿಯಾ ಗೊಬ್ಬರ ಮಾತ್ರ ಬಂದಿದ್ದು, ಇನ್ನಷ್ಟು ದಾಸ್ತಾನು ಬುಧವಾರ ಆಗಮಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ ಒಂದು ಆಧಾರ್ ಕಾರ್ಡ್‌ಗೆ ಕೇವಲ ಎರಡು ಚೀಲ ಗೊಬ್ಬರವನ್ನು ಮಾತ್ರ ವಿತರಿಸಲಾಗುತ್ತಿದ್ದು, ಈ ಮಿತಿಯು ರೈತರಲ್ಲಿ ತೀವ್ರ ಗೊಂದಲ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ.

ಹೆಚ್ಚು ಕೃಷಿ ಭೂಮಿ ಹೊಂದಿರುವ ರೈತರಿಗೆ ಅವರ ಅಗತ್ಯಕ್ಕೆ ತಕ್ಕಂತೆ ಗೊಬ್ಬರ ಸಿಗುತ್ತಿಲ್ಲ. ಎಷ್ಟು ಎಕರೆ ಜಮೀನು ಇದ್ದರೂ ಎಲ್ಲರಿಗೂ ಒಂದೇ ರೀತಿಯ ಮಿತಿಯನ್ನು ವಿಧಿಸಲಾಗುತ್ತಿದೆ ಎಂದು ರೈತರು ಆರೋಪಿಸಿದ್ದಾರೆ.

ತಾಲೂಕಿನ ಎಲ್ಲ ರೈತರಿಗೆ ಸಮರ್ಪಕ ಪ್ರಮಾಣದಲ್ಲಿ ಯೂರಿಯಾ ಹಾಗೂ ಡಿಎಪಿ ಗೊಬ್ಬರ ಪೂರೈಕೆ ಮಾಡಬೇಕು ಮತ್ತು ವಿತರಣಾ ವ್ಯವಸ್ಥೆಯನ್ನು ತಕ್ಷಣವೇ ಸುಗಮಗೊಳಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರೈತರಾದ ಲಿಂಗು ಜಾಧವ್, ಬಸವರಾಜ ರಾಜಾಪೂರ ಇದ್ದರು.

ಕಾಳಗಿ ಪಟ್ಟಣದ ರೈತ ಸೇವಾ ಸಹಕಾರಿ ಬ್ಯಾಂಕ್‌ನಲ್ಲಿ ಮಂಗಳವಾರ ಬೆಳಗ್ಗೆಯಿಂದಲೇ ನೂರಾರು ರೈತರು ಯೂರಿಯಾ ಹಾಗೂ ಡಿಎಪಿ ಗೊಬ್ಬರ ಸಾಲಿನಲ್ಲಿ ನಿಂತಿ ರೈತರು.

ಹೆರಿಗೆಯಾಗದೇ ಶಿಶು ಸಾವು, ತಾಯಿ ಪಾರು

ಆಳಂದ: ಗರ್ಭಿಣಿ ಮಹಿಳೆಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ನೀಡದೆ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ನಿರ್ಲಕ್ಷ್ಯ ತೋರಿದ ಪರಿಣಾಮ, ಹೆರಿಗೆ ಸಂದರ್ಭದಲ್ಲಿ ಶಿಶು ಸಾವನ್ನಪ್ಪಿ, ತಾಯಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಭೂಸನೂರ ಗ್ರಾಮದಲ್ಲಿ ನಡೆದಿದೆ. ವೈದ್ಯರ ಈ ಬೇಜವಾಬ್ದಾರಿತನ ಖಂಡಿಸಿ ಭೂಸನೂರ ಗ್ರಾಮಸ್ಥರು ರೊಚ್ಚಿಗೆದ್ದು ಸೋಮವಾರ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.

ಗ್ರಾಮದ ಇಸ್ಮಾಯಿಲ್ ಶೇಖ ಅವರ ಪತ್ನಿ ತಹಸೀಮ್ ಹೆರಿಗೆಗಾಗಿ ಜೂನ್ 4 ರಂದು ಭೂಸನೂರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಾಗಿದ್ದರು. ಆದರೆ ಕರ್ತವ್ಯದಲ್ಲಿದ್ದ ನರ್ಸ್, ಗರ್ಭಿಣಿಯನ್ನು ತಪಾಸಣೆ ನಡೆಸಿ ಇವತ್ತು ಹೆರಿಗೆಯಾಗುವುದಿಲ್ಲ, ನಾಳೆ ಬನ್ನಿ ಎಂದು ಹೇಳಿ ವಾಪಸ್ ಕಳುಹಿಸಿದ್ದರು.

ಮರುದಿನ ಅಂದರೆ ಜೂನ್ 5 ರಂದು ಬೆಳಗ್ಗೆ 6 ಗಂಟೆ ಸುಮಾರಿಗೆ ತಹಸೀಮ್ ಅವರನ್ನು ಮತ್ತೆ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಯಿತು. ಈ ವೇಳೆ ಸಿಬ್ಬಂದಿ ಇನ್ನೂ ಕೆಲವೇ ಗಂಟೆಗಳಲ್ಲಿ ಸರಳವಾಗಿ ಹೆರಿಗೆಯಾಗುತ್ತದೆ' ಎಂದು ಭರವಸೆ ನೀಡಿ, ಸುಮಾರು 3-4 ಗಂಟೆಗಳ ಕಾಲ ಕಾಲಹರಣ ಮಾಡಿದ್ದಾರೆ. ಇದರಿಂದ ಗರ್ಭಿಣಿ ಮಹಿಳೆ ಅತಿಯಾದ ಹೆರಿಗೆ ನೋವಿನಿಂದ ನರಳಾಡಿದ್ದಾರೆ. ಮಗಳ ಗೋಳನ್ನು ನೋಡಲಾಗದ ಪೋಷಕರು ತಕ್ಷಣವೇ ಖಾಸಗಿ ವಾಹನದ ಮೂಲಕ ಸಮೀಪದ ಕೋರಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿದ್ದಾರೆ. ಆದರೆ ಅಲ್ಲಿನ ಸಿಬ್ಬಂದಿ ಕೂಡ 'ನಮ್ಮ ಹತ್ತಿರ ಹೆರಿಗೆಯಾಗುವುದಿಲ್ಲ, ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಕೈತೊಳೆದುಕೊಂಡಿದ್ದಾರೆ.

ಖಾಸಗಿ ಆಸ್ಪತ್ರೆಯಲ್ಲಿ ದುರಂತ:

ಆಳಂದ ಪಟ್ಟಣದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಅಲ್ಲಿನ ವೈದ್ಯರು ನೀವು ಈಗಾಗಲೇ ಪ್ರಮುಖವಾದ ಸಮಯವನ್ನು ವ್ಯರ್ಥ ಮಾಡಿದ್ದೀರಿ. ಮಗು ಮತ್ತು ತಾಯಿ ಇಬ್ಬರ ಪ್ರಾಣಕ್ಕೂ ಅಪಾಯವಿದೆ ಎಂದು ತಿಳಿಸಿದ್ದಾರೆ. ತದನಂತರ ಚಿಕಿತ್ಸೆ ನೀಡುವಷ್ಟರಲ್ಲಿ ತೀವ್ರ ಅಸ್ವಸ್ಥತೆಯಿಂದಾಗಿ ಗರ್ಭದಲ್ಲೇ ಶಿಶು ಕೊನೆಯುಸಿರೆಳೆದಿದ್ದು, ತಾಯಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪ್ರತಿಭಟನೆಯಲ್ಲಿ ಗ್ರಾಮದ ಪ್ರಮುಖರಾದ ಮುತ್ತಣ್ಣ ಬೀಳಗಿ, ಶಾಂತಪ್ಪ ಮೈನಾಳ, ಗುಂಡಪ್ಪ ಪೂಜಾರಿ, ಮಲ್ಲಿನಾಥ ಅರಳಗುಂಡಗಿ, ಕಲ್ಲಪ್ಪ ಕುಲಾಲಿ, ಇಸ್ಮಾಯಿಲ್ ಶೇಖ, ದಸ್ತಗೀರ ಶೇಖ, ಸೋಮಣ್ಣ ಗೋಡಕೆ, ಮಂಜುನಾಥ ಕಲಶೆಟ್ಟಿ, ಶ್ರೀಶೈಲ ಸೂರ್ಯವಂಶಿ, ಶೇಖರ ಪ್ಯಾಟಿ, ಸೂರ್ಯವಂಶಿ ಮರಾಠಾ, ಮಹೇಶ ಹಳ್ಳಿಖೇಡ ಸೇರಿದಂತೆ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ನಿಂಬರ್ಗಾ ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದರು.

ಗರ್ಭಿಣಿ ಮಹಿಳೆಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ನೀಡದೆ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ನಿರ್ಲಕ್ಷ್ಯ ತೋರಿದ ಪರಿಣಾಮ ಆಳಂದ ಹೆರಿಗೆ ಸಂದರ್ಭದಲ್ಲಿ ಶಿಶು ಸಾವನ್ನಪ್ಪಿ ಘಟನೆಯಿಂದಾಗಿ ವೈದ್ಯರ ಬೇಜವಾಬ್ದಾರಿತನ ಖಂಡಿಸಿ ಭೂಸನೂರ ಗ್ರಾಮಸ್ಥರು ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ಗೊಬ್ಬರ ಕೊರತೆ: ಕೃಷಿ ನಿರ್ದೇಶಕರಿಗೆ ರೈತ ಸೇನೆ ಮನವಿ

ಚಿಂಚೋಳಿ: ಚಿಂಚೋಳಿ ಮತ್ತು ಕಾಳಗಿ ತಾಲೂಕುಗಳಲ್ಲಿ ಮುಂಗಾರು ಬಿತ್ತನೆ ಚಟುವಟಿಕೆಗಳು ಆರಂಭವಾಗಿದ್ದು, ರಸಗೊಬ್ಬರ ಸಿಗದೆ ರೈತರು ಪರದಾಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಅಧ್ಯಕ್ಷ ವೀರಣ್ಣ ಗಂಗಾಣಿ ಆರೋಪಿಸಿದ್ದಾರೆ. ತಕ್ಷಣವೇ ಕೊರತೆ ನೀಗಿಸುವಂತೆ ಆಗ್ರಹಿಸಿ ಕೃಷಿ ಸಹಾಯಕ ನಿರ್ದೇಶಕ ವೀರಶೆಟ್ಟಿ ರಾಠೋಡ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕಿನಲ್ಲಿ 1.10 ಲಕ್ಷ ಹೆಕ್ಟೇರ್ ಬಿತ್ತನೆ ಕ್ಷೇತ್ರವಿದ್ದು, 40ಕ್ಕೂ ಹೆಚ್ಚು ವಿ.ಎಸ್.ಎಸ್.ಎನ್ ಸಹಕಾರಿ ಸಂಘಗಳಿವೆ. ಆದರೆ ಇಲಾಖೆಯು ಕೇವಲ ಒಂದೆರಡು ಸೊಸೈಟಿಗಳ ಮೂಲಕ ಗೊಬ್ಬರ ವಿತರಿಸುತ್ತಿರುವುದರಿಂದ ರೈತರು ಅಲೆಯುವಂತಾಗಿದೆ. ಎಲ್ಲ ಸೊಸೈಟಿಗಳಿಗೂ ಬೀಜ-ಗೊಬ್ಬರ ಪೂರೈಸಿ, ಜಿಎಸ್‌ಟಿ ರಹಿತ ರಸಗೊಬ್ಬರ ಒದಗಿಸಬೇಕು ಎಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಕೃಷಿ ನಿರ್ದೇಶಕ ವೀರಶೆಟ್ಟಿ ರಾಠೋಡ, ರೈತರ ಅಲೆದಾಟ ತಪ್ಪಿಸಲು ಇಲಾಖೆ ಕ್ರಮ ಕೈಗೊಳ್ಳುತ್ತಿದೆ. ಗೊಬ್ಬರ ಮಾರಾಟಕ್ಕೆ ಸೊಸೈಟಿಗಳಿಗೆ ಪರವಾನಗಿ ಕಡ್ಡಾಯವಾಗಿದ್ದು, ಸದ್ಯ ಎಲ್ಲರಿಗೂ ತರಬೇತಿ ನೀಡಿ ಲೈಸೆನ್ಸ್ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲ ಸೊಸೈಟಿಗಳ ಮೂಲಕವೇ ವಿತರಣೆಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿ ಸಂಘಗಳ ಕಾರ್ಯದರ್ಶಿಗಳಾದ ಝುರಣಪ್ಪ, ಚಂದ್ರಶೇಖರ, ಸಂಜೀವಕುಮಾರ ಇದ್ದರು.

ಚಿಂಚೋಳಿ ಮತ್ತು ಕಾಳಗಿ ತಾಲೂಕುಗಳಲ್ಲಿ ರಸಗೊಬ್ಬರ ಸಿಗದೆ ರೈತರು ಪರದಾಡುತ್ತಿದ್ದು ತಕ್ಷಣವೇ ಕೊರತೆ ನೀಗಿಸುವಂತೆ ಆಗ್ರಹಿಸಿ ಕೃಷಿ ಸಹಾಯಕ ನಿರ್ದೇಶಕ ವೀರಶೆಟ್ಟಿ ರಾಠೋಡ ಅವರಿಗೆ ಮನವಿ ಸಲ್ಲಿಸಿದರು.

ಅವಹೇಳನಕಾರಿ ಹೇಳಿಕೆ ನೀಡಿದವರ ವಿರುದ್ಧ ಕ್ರಮಕೈಗೊಳ್ಳಿ

ಕಲಬುರಗಿ: ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್‌ಗಳು ಹಾಗೂ ಹೇಳಿಕೆಗಳನ್ನು ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ನಗರದ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಮುಖಂಡರು, ರೇವೂರ ಕುಟುಂಬವು ಹಲವು ದಶಕಗಳಿಂದ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಜಿಲ್ಲೆಯ ಜನರ ವಿಶ್ವಾಸ ಗಳಿಸಿರುವ ಕುಟುಂಬ ವಾಗಿದ್ದು, ಇತ್ತೀಚೆಗೆ ದತ್ತಾತ್ರೇಯ ಪಾಟೀಲ್ ರೇವೂರ ಅವರ ವಿರುದ್ಧ ದಾಖಲಾದ ಎಫ್‌ಐಆರ್‌ಹಿನ್ನೆಲೆ ಕೆಲವರು ರಾಜಕೀಯ ದುರುದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ ಕೀಳುಮಟ್ಟದ ಪದಗಳನ್ನು ಬಳಸಿ ಕುಟುಂಬದ ಗೌರವಕ್ಕೆ ಧಕ್ಕೆ ತರುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಅರುಣಕುಮಾರ ಪಾಟೀಲ್ ಕೊಡಲಹಂಗರಗಾ, ಮಲ್ಲಿಕಾರ್ಜುನ ಖೇಮಜಿ, ನಾಗಲಿಂಗಯ್ಯ ಹಿರೇ ಮಠ, ಚನ್ನಪ್ಪ ಡಿಗ್ಗಾವಿ, ಮಹೇಶ್ ಪಟ್ಟಣ, ಪ್ರಕಾಶ್ ಪಾಟೀಲ್,ಶರಣು ಟೆಂಗಳಿ, ಶರಣು ಸಜ್ಜನ್, ಮಹೇಶ್ ರೆಡ್ಡಿ, ವೀರಣ್ಣ ಗೊಳೆದ, ಚಂದ್ರಕಾಂತ ಬೆಣ್ಣೂರ, ಗೌರಿ ಚಿಚಕೋಟಿ, ಮಾಲಾ ಕಣ್ಣಿ, ಶೋ ಭಾ ಬಾಗೇವಾಡಿ, ಸಪ್ನಾ ಮಂಗಲಗಿ, ವಿಜಯ ಕುಮಾರ ಬಿರಾದಾರ, ಚಂದ್ರಕಾಂತ ಸಂತಪೂರ, ವಿಜಯಲಕ್ಷ್ಮಿ ಇದ್ದರು.

ಟೆಂಡರ್‌ಪ್ರಕ್ರಿಯೆ ಆರಂಭ | 9 ತಿಂಗಳಲ್ಲಿ ಕಾಮಗಾರಿ ಪೂರ್ಣ: ಅಜಯ್ ಸಿಂಗ್ ಭರವಸೆ

ಸೇತುವೆ ಕಾಮಗಾರಿಗೆ 32 ಕೋಟಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಜೇವರ್ಗಿ

ಜೇವರ್ಗಿ ಮತ್ತು ಚಿತ್ತಾಪುರ ತಾಲೂಕಿನ ಗಡಿ ಗ್ರಾಮಗಳ ಮಧ್ಯೆ ಸಂಪರ್ಕ ಕಲ್ಪಿಸುವ, ಭೀಮಾ ನದಿಗೆ ಅಡ್ಡಲಾಗಿ ನಿರ್ಮಾಣ ಹಂತದಲ್ಲಿರುವ ಸೇತುವೆಯ ಬಾಕಿ ಕಾಮಗಾರಿಯನ್ನು ಪೂರ್ಣ ಗೊಳಿಸಲು ಲೋಕೋಪ ಯೋಗಿ ಇಲಾಖೆಯಿಂದ 32 ಕೋಟಿ ರುಪಾಯಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಯಾಗಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಜೇವ ರ್ಗಿ ಶಾಸಕ ಡಾ. ಅಜಯ್ ಸಿಂಗ್ ತಿಳಿಸಿದ್ದಾರೆ. ಚಿತ್ತಾಪುರ ಹಾಗೂ ಜೇವರ್ಗಿ ತಾಲೂಕಿನ ನಡುವಿನ ಅತ್ಯಂತ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ಮತ್ತು ಈ ಭಾಗದ ಜನರ ದಶಕಗಳ ಕನಸಿನ ನರಿಬೋಳ್ - ಚಾಮನೂರು ಸೇತುವೆ'' ಕಾಮಗಾರಿಯು ಆರಂಭವಾಗಿದ್ದರೂ, ಕಾರಣಾಂತ ರಗಳಿಂದ ಅರ್ಧಕ್ಕೆ ಬಾಕಿ ಉಳಿದುಕೊಂಡಿತ್ತು. ಈ ವಿಚಾರವಾಗಿ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪಿಸಿ ಸರಕಾರದ ಗಮನ ಸೆಳೆದಿದ್ದ ಶಾಸಕ ಡಾ. ಅಜಯ್ ಸಿಂಗ್ ಅವರ ನಿರಂತರ ಪ್ರಯತ್ನದ ಫಲವಾಗಿ, ಇದೀಗ ಬಾಕಿ ಕೆಲಸಗಳನ್ನು ಮುಗಿಸಲು ಅಗತ್ಯವಿರುವ ಹೆಚ್ಚುವರಿ ಮೊತ್ತಕ್ಕೆ ಮಂಜೂರಾತಿ ಸಿಕ್ಕಿದೆ. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣ ಗೊಳಿಸಿ, ಮುಂದಿನ 6 ರಿಂದ 9 ತಿಂಗಳ ಅವಧಿಯಲ್ಲಿ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಿ ಸಾರ್ವಜನಿಕರ ಬಳಕೆಗೆ ಮುಕ್ತ ಗೊಳಿಸಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಳಂಬಕ್ಕೆ ಕಾರಣವಾಗಿದ್ದ ಭೂ ಸ್ವಾಧೀನ ಪ್ರಕ್ರಿಯೆ ಚುರುಕು: ಈ ಹಿಂದೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾಗಿದ್ದ ತಾಂತ್ರಿಕ ಹಾಗೂ ಕಾನೂನಾತ್ಮಕ ತೊಡಕುಗಳಿಂದಾಗಿ ನರಿಬೋಳ್ - ಚಾಮನೂರು ಸೇತುವೆ ಕಾಮ ಗಾರಿಯು ಅರ್ಧಕ್ಕೆ ಸ್ಥಗಿತಗೊಂಡು ಸಾರ್ವ ಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಯುದ್ಧೋಪಾದಿ ಯಲ್ಲಿ ಪುನಾರಂಭಿಸಲು ಸರ್ಕಾರದ ಈ ಹೆಚ್ಚುವರಿ ಮೊತ್ತದ ಮಂಜೂರಾತಿ ಪ್ರಮುಖ ಪಾತ್ರ ವಹಿಸಲಿದೆ.

ನರಿಬೋಳ್ - ಚಾಮನೂರು ಸೇತುವೆಯು ಜೇವರ್ಗಿ ಮತ್ತು ಚಿತ್ತಾಪುರ ತಾಲೂಕುಗಳ ದಶಕಗಳ ಸಂಪರ್ಕ ಕೊಂಡಿಯಾಗಿದೆ. ಭೂ ಸ್ವಾಧೀನದ ಸಮಸ್ಯೆಯಿಂದ ಕಾಮಗಾರಿ ತಡವಾಗಿತ್ತು, ಈಗ ಆ ತಾಂತ್ರಿಕ ಸಮಸ್ಯೆ ಸಂಪೂರ್ಣ ಬಗೆಹರಿದಿದೆ. ನಮ್ಮ ಮನವಿಗೆ ತಕ್ಷಣ ಸ್ಪಂದಿಸಿ ಕಾಮಗಾರಿ ಪ್ರಾರಂಭಿಸಲು ಅಗತ್ಯವಿರುವ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಜೇವರ್ಗಿ ಮತ್ತು ಚಿತ್ತಾಪುರ ಕ್ಷೇತ್ರದ ಸಮಸ್ತ ಜನತೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

– ಡಾ. ಅಜಯ್ ಸಿಂಗ್, ಶಾಸಕ

ವಿಮಾನ ನಿಲ್ದಾಣಕ್ಕೆ ಕೆಕೆಆರ್‌ಟಿಸಿ ಬಸ್ ಸೌಲಭ್ಯ

ಕಲಬುರಗಿ: ಕಲಬುರಗಿ ಮತ್ತು ಬೆಂಗಳೂರು ನಡುವೆ ವಿಮಾನ ಸಂಚಾರ ಪುನರಾರಂಭಗೊಂಡಿರುವ ಹಿನ್ನೆಲೆ ಯಲ್ಲಿ, ಪ್ರಯಾಣಿಕರ ಸುಗಮ ಸಂಪರ್ಕಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) ವತಿಯಿಂದ ನಗರದ ಕೇಂದ್ರ ಬಸ್ ನಿಲ್ದಾಣದಿಂದ ವಿಮಾನ ನಿಲ್ದಾಣಕ್ಕೆ ನೂತನ ಸಿಟಿ ಬಸ್ ಸೇವೆಗೆ ಮಂಗಳವಾರ ಚಾಲನೆ ನೀಡಲಾಯಿತು.

ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ಹಸಿರು ಧ್ವಜ ತೋರಿಸುವ ಮೂಲಕ ನೂತನ ಬಸ್ ಸಂಚಾರವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಾದೇಶಿಕ ಅಭಿವೃದ್ಧಿಗೆ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಬಲವರ್ಧನೆಯೇ ಮೂಲಾಧಾರವಾಗಿದೆ. ಕಲ್ಯಾಣ ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ಸಂಸ್ಥೆ ಬದ್ಧವಾಗಿದ್ದು, ಸಾರ್ವಜನಿಕರ ಅಗತ್ಯಕ್ಕೆ ತಕ್ಕಂತೆ ಗುಣಮಟ್ಟದ ಸೇವೆ ನೀಡಲಾಗುತ್ತಿದೆ ಎಂದರು.

ಸಮಯ ಮತ್ತು ಸಂಚಾರ ಮಾರ್ಗ ಪ್ರಯಾಣಿಕರಿಗೆ ಸುರಕ್ಷಿತ ಹಾಗೂ ಸಮಯೋಚಿತ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಈ ವಿಶೇಷ ಬಸ್ ಪ್ರತಿದಿನ ಬೆಳಗ್ಗೆ 6:10ಕ್ಕೆ ಕಲಬುರಗಿ ಕೇಂದ್ರೀಯ ಬಸ್ ನಿಲ್ದಾಣದಿಂದ ಹೊರ ಡಲಿದೆ. ಇದು ನಗರದ ಪ್ರಮುಖ ರಸ್ತೆಗಳಾದ ವಲ್ಲಭ ಭಾಯಿ ಸರ್ಕಲ್ (ತಿಮ್ಮಾಪುರ) ಮತ್ತು ಅನ್ನಪೂರ್ಣ ಕ್ರಾಸ್ ಮಾರ್ಗವಾಗಿ ಬೆಳಗ್ಗೆ 7:00 ಗಂಟೆಗೆ ವಿಮಾನ ನಿಲ್ದಾಣ ತಲುಪಲಿದೆ. ಈ ಸಂದರ್ಭದಲ್ಲಿ ಕಲಬುರಗಿ ವಿಭಾಗ-1ರ ನಿಯಂತ್ರಣಾಧಿಕಾರಿ ಎಸ್. ಜಿ. ಗಂಗಾ ಧರ್, ವಿಭಾಗ-2ರ ನಿಯಂತ್ರಣಾಧಿಕಾರಿ ಬಸಂತಪ್ಪ ಬಿ. ಎಮ್., ವಿಭಾಗೀಯ ಮೆಕ್ಯಾನಿಕಲ್ ಎಂಜಿನಿಯರ್ ಶೇಖ್ ಹುಸೇನಿ, ಅಧಿಕಾರಿಗಳಾದ ಪ್ರಶಾಂತ್, ಡಿಪೋ ಮ್ಯಾನೇಜರ್‌ಅನಿಲ್, ಆಡಳಿತಾಧಿಕಾರಿ ಗುರುಲಿಂಗಪ್ಪ ಹಾಗೂ ಡಿಟಿಒ ಹೊಸಮನಿ ಇದ್ದರು.

ವಿಮಾನ ಪ್ರಯಾಣಿಕರು ಮಾತ್ರವಲ್ಲದೆ ಸಾರ್ವಜನಿಕರು ಸಹ ಈ ಹೊಸ ಬಸ್ ಸೇವೆಯ ಸದುಪಯೋಗ ಪಡೆದುಕೊಳ್ಳಬೇಕು. ಖಾಸಗಿ ವಾಹನಗಳ ದುಬಾರಿ ವೆಚ್ಚಕ್ಕೆ ಹೋಲಿಸಿದರೆ ಈ ಸಿಟಿ ಬಸ್ ಸೇವೆ ಅತ್ಯಂತ ಕಡಿಮೆ ದರದಲ್ಲಿ ಲಭ್ಯವಿದ್ದು, ಸಾರ್ವಜನಿಕರ ಹಣ ಉಳಿತಾಯವಾಗಲಿದೆ.

– ಅರುಣಕುಮಾರ ಪಾಟೀಲ, ಅಧ್ಯಕ್ಷ, ಕೆಕೆಆರ್‌ಟಿಸಿ

ಶ್ರೀ ಕೆ.ಎಸ್. ಈಶ್ವರಪ್ಪ ಅಭಿಮಾನಿ ಬಳಗ ಸಹಕಾರ
ಶ್ರೀಗಂಧ ಸದ್ಭಾವ-ಸದ್ವಿಚಾರ-ಸದಭಿರುಚಿ-ಸತ್ಕಾರ್ಯ ಶ್ರೀ ಮಾರಿಕಾಂಬ ಮೈಕ್ರೋಫೈನಾನ್ಸ್ ಪ್ರೈ ಲಿ.
ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ
ಪೇಜಾವರ ಮಠ, ಉಡುಪಿ.
ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ
ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮಠ, ಆನಂದಪುರ, ಶ್ರೀ ಬೆಕ್ಕಿನ ಕಲ್ಮಠ, ಶಿವಮೊಗ್ಗ.
ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ
ಶಿವಶರಣ ಮಾದಾರ ಚನ್ನಯ್ಯ ಗುರುಪೀಠ, ಚಿತ್ರದುರ್ಗ.
ಪೂಜ್ಯ ಶ್ರೀ ಶ್ರೀ ನಾದಮಯಾನಂದನಾಥ ಸ್ವಾಮೀಜಿ
ಆದಿಯಂಚನಗಿರಿ ಶಾಖಾ ಮಠ, ಶಿವಮೊಗ್ಗ,
ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ
ಸ್ವಾಮೀಜಿ, ಹಿರೇಮಠ, ಬಿಳಿಕಿ.
ಷ.ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ
ಮುತ್ತಿನಕಂತಿಮಠ, ಅಕ್ಕಿಆಲೂರು
ಶ್ರೀಯುತ ಕೆ.ಎಸ್. ಈಶ್ವರಪ್ಪನವರ
78ನೇ ಹುಟ್ಟುಹಬ್ಬದ ಪ್ರಯುಕ್ತ
ಸಾಮೂಹಿಕ ಸತ್ಯನಾರಾಯಣ ಪೂಜೆ 1000ಕ್ಕೂ ಹೆಚ್ಚು ದಂಪತಿಗಳಿಂದ
“ಮಂಗಳ ನಿಧಿ ಸಮರ್ಪಣೆ”
ಸಂಗೀತಾಭಿವಂದನೆ 500ಕ್ಕೂ ಹೆಚ್ಚು ಮಾತೆಯರಿಂದ
ಸಮೂಹ ಗಾಯನ
ಕರ್ನಾಟಕ ರಾಜಕಾರಣದ ಪ್ರಬಲ ನಾಯಕರಲ್ಲಿ ಕೆ.ಎಸ್. ಈಶ್ವರಪ್ಪನವರು ಪ್ರಮುಖರು ಶಿವಮೊಗ್ಗದ ಇವರು ಆರ್ ಸ್ಎಸ್ ಮತ್ತು ಎಬಿವಿಪಿ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿ ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದವರು ನಂತರ ಬಿಜೆಪಿ ಶಾಸಕರಾಗಿ ಶಿವಮೊಗ್ಗವನ್ನು ಪಕ್ಷದ ಭದ್ರಕೋಟೆಯನ್ನಾಗಿ ಪರಿವರ್ತಿಸಿದರು. ಕೆ.ಎಸ್. ಈಶ್ವರಪ್ಪನವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿದ ಚತುರರು. ತಮ್ಮ ಸುಧೀರ್ಘ ವೃತ್ತಿ ಜೀವನದಲ್ಲಿ ಕೇಂದ್ರ ರೇಷ್ಮೆ ಮಂಡಳಿಗೆ ಎರಡು ಬಾರಿ ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ, ಹಾಗೂ ಇಂಧನ ಜಲಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಗಮನಾರ್ಹ ಕೆಲಸ ಮಾಡಿದ್ದಾರೆ. * ವಿಶೇಷವಾಗಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಇವರು ನೀಡಿದ ಕೊಡುಗೆ ಅಪಾರ. ಸೈದ್ಧಾಂತಿಕವಾಗಿ ಹಿಂದುತ್ವದ ಪ್ರಬಲ ಧ್ವನಿಯಾಗಿ ಗುರುತಿಸಿಕೊಂಡಿರುವ ಇವರು ನೇರ ನುಡಿ ಹಾಗೂ ಕಾರ್ಯಕರ್ತರೊಂದಿಗಿನ ಆಪ್ತ ಸಂಬಂಧಕ್ಕೆ ಹೆಸರಾದವರು. ಸಾಮಾನ್ಯ ಜನರಿಗೂ ಸುಲಭವಾಗಿ ಸಿಗುವ ಇವರು ರಾಜ್ಯ ರಾಜಕಾರಣದಲ್ಲಿ ಅಳಿಸಲಾಗದ ಮುದ್ರೆ ಒತ್ತಿದ್ದಾರೆ. ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಇವರು ಯುವರಾಜಕಾರಣಿಗಳಿಗೆ ಸ್ಫೂರ್ತಿದಾಯಕವಾಗಿದೆ. ಸೋಲು-ಗೆಲುವುಗಳ ನಡುವೆಯೂ ಸಿದ್ಧಾಂತಕ್ಕೆ ಬದ್ಧರಾಗಿರುವುದು ಈಶ್ವರಪ್ಪನವರ ಹೆಗ್ಗಳಿಕೆ.
ಕೆ.ಇ. ಕಾಂತೇಶ್ ಈಶ್ವರಪ್ಪ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು
ಹೋರಾಟವೇ ಉಸಿರಾಗಿ, ಜನಸೇವೆಯೇ ಗುರಿಯಾಗಿ ಸಾಗುತ್ತಿರುವ ಶಿವಮೊಗ್ಗದ ಹೆಮ್ಮೆಯ ನಾಯಕ, ಅಭಿವೃದ್ಧಿ ಹಾಗೂ ಹಿಂದುತ್ವದ ಪ್ರಖರ ಧ್ವನಿ, ದಣಿವರಿಯದ ಮುತ್ಸದ್ದಿ ಗೌರವಾನ್ವಿತ ಶ್ರೀ ಕೆ.ಎಸ್. ಈಶ್ವರಪ್ಪನವರ 78ನೇ ಹುಟ್ಟುಹಬ್ಬದ ಈ ಶುಭ ಸಂಧರ್ಭದಲ್ಲಿ ಆ ದೇವರು ನಿಮಗೆ ಆಯುರಾರೋಗ್ಯ, ಸುಖ-ಶಾಂತಿ, ನೆಮ್ಮದಿ ಹಾಗೂ ನಿಮ್ಮ ಇಷ್ಟಾರ್ಥಗಳನ್ನು ಈಡೇರಿಸಲೆಂದು ಶುಭ ಹಾರೈಸುವ.....
ಸರ್ವರಿಗೂ ಸುಸ್ವಾಗತ
10 ಜೂನ್ 2026 ಬೆಳಿಗ್ಗೆ 11:00ಕ್ಕೆ । ಸ್ಥಳ: ಜಯಲಕ್ಷ್ಮಿ, ಮಲ್ಲೇಶ್ವರ ನಗರ ಮುಖ್ಯರಸ್ತೆ, ಶಿವಮೊಗ್ಗ.